ವಿದ್ಯಾರ್ಥಿಗಳಿಗಾಗಿ
ಡಿವಿಜಿ ಕಗ್ಗದ ಪದ್ಯಗಳು



ಸಂಗ್ರಾಹಕ ಮತ್ತು ಅನುವಾದಕ
ಪ್ರೊ. ಜಿ. ಅಶ್ವತ್ಥನಾರಾಯಣ
ಬೆಂಗಳೂರು

ಪ್ರಕಾಶಕರು
ಓಂಕಾರ್ ಪ್ರಕಾಶನ
ಆರ್.ಆರ್.ನಗರ, ಬೆಂಗಳೂರು

ವಿದ್ಯಾರ್ಥಿಗಳಿಗಾಗಿ ಡಿವಿಜಿ ಕಗ್ಗದ ಪದ್ಯಗಳು

(ಮೂಲ ಮತ್ತು ಅನುವಾದ ಸಹಿತ
ವಿದ್ಯಾರ್ಥಿಗಳಿಗಾಗಿ ಮಂಕುತಿಮ್ಮನ ಕಗ್ಗ)

ಸಂಗ್ರಾಹಕ ಮತ್ತು ಅನುವಾದಕ
ಪ್ರೊ. ಜಿ. ಅಶ್ವತ್ಥನಾರಾಯಣ
(ನಿವೃತ್ತ ಕನ್ನಡ ಪ್ರಾಧ್ಯಾಪಕ)

ಪ್ರಕಾಶಕರು:
ಓಂಕಾರ್ ಪ್ರಕಾಶನ
920, 9ನೇ ಕ್ರಾಸ್, ಬಿಇಎಂಎಲ್ ಲೇಔಟ್,
3ನೇ ಹಂತ, ರಾಜರಾಜೇಶ್ವರಿನಗರ, ಬೆಂಗಳೂರು – 560 098
ಮೊ.: 98867 30639

VIDYARTHIGALIGAAGI DVG KAGGADA PADYAGALU
ವಿದ್ಯಾರ್ಥಿಗಳಿಗಾಗಿ ಡಿವಿಜಿ ಕಗ್ಗದ ಪದ್ಯಗಳು Selected & Translated by Prof G. Aswathanarayana (Retd. Kannada Prof.) Phone : 080-26637783, Bangalore.

First Impression	:	2010
Second Impression	:	2021
Pages	:	xvii+167=184
Paper	:	NS Maplitho 70gsm
Size	:	1/8 crown
Price	:	Rs. 150/-
Published by	:	OMKAR PRAKASHANA #920, 9th Cross, BEML Layout, 3rd Phase, Rajarajeshwari nagar, Bangalore - 560 098 M: 98867 30639

ಮೊದಲ ಮುದ್ರಣ	:	2010
ದ್ವಿತೀಯ ಮುದ್ರಣ	:	2021
ಪುಟಗಳು	:	xvii+167=184
ಬೆಲೆ	:	150/-
ಕಾಗದ ಬಳಕೆ	:	ಎನ್.ಎಸ್. ಮ್ಯಾಪ್‌ಲಿಥೋ (70 ಜಿ.ಎಸ್.ಎಂ)
ಪ್ರಕಾಶಕರು	:	ಓಂಕಾರ್ ಪ್ರಕಾಶನ, ಆರ್.ಆರ್.ನಗರ, ಬೆಂಗಳೂರು
ಮುದ್ರಕರು	:	ಪ್ರಿಂಟ್ ಒನ್

ಸಂಗ್ರಾಹಕ ಮತ್ತು ಅನುವಾದಕನ ನುಡಿ

ಡಿವಿಜಿ ಅವರ ಮಂಕುತಿಮ್ಮನಕಗ್ಗ ಕನ್ನಡದಲ್ಲಿ ಅತ್ಯಂತ ಜನಪ್ರಿಯ ನೀತಿ ಗ್ರಂಥ. ಎಲ್ಲಬಗೆಯ ಜನರ ಬಾಳಿಗೆಬೆಳಕು ಬೀರುವ ಸ್ಫೂರ್ತಿಗ್ರಂಥ- ಸರಳವಾದ ಚೌಪದಿಗಳಿಂದ ಕೂಡಿದ ಗ್ರಂಥ. ಜನಸಾಮಾನ್ಯರಿಗೆ ಗೀತೆಯಂತೆ ಪಾರಾಯಣ ಗ್ರಂಥವಾಗಿದೆ. ಈ ಗ್ರಂಥದ ಬಗ್ಗೆ ನಾನಾಬಗೆಯ ವ್ಯಾಖ್ಯಾನ-ವಿಮರ್ಶೆ, ಅನುವಾದ, ಸಂಗ್ರಹ ಗ್ರಂಥಗಳು ಪ್ರಕಟವಾಗಿವೆ. ಈಗಲು ಹೊಸ ಗ್ರಂಥಗಳು ಬರುತ್ತಿವೆ. ನಾಡಿನ ವಿದ್ವಾಂಸರು, ಸಾಹಿತಿಗಳು, ವ್ಯಾಖ್ಯಾನಕಾರರು ನಾನಾ ರೀತಿಯಲ್ಲಿ ಅರ್ಥೈಸಿ ಪ್ರವಚನಮಾಡುತ್ತಿದ್ದಾರೆ. ಆದರೆ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅರ್ಥೈಸಿದ ಪ್ರತ್ಯೇಕ ಸಂಗ್ರಹಗ್ರಂಥ ಅನುವಾದದೊಡನೆ ನನಗೆ ತಿಳಿದಂತೆ ಬಂದಿಲ್ಲ. ವಿದ್ವಾಂಸರಾದ ಎಂ.ವಿ.ಸೀ. ಅವರು ವಿದ್ಯಾರ್ಥಿಗಳಿಗೆ ಕಂಠಪಾಠ ಸ್ಪರ್ಧೆಗೆ ಸಿದ್ಧಪಡಿಸಿದ ಪದ್ಯಗಳ ಕಿರುಸಂಗ್ರಹವೊಂದು ಪ್ರಕಟವಾಗಿದೆ ಅಷ್ಟೆ.

ಹೈಸ್ಕೂಲ್ ಕಾಲೇಜು ವಿದ್ಯಾರ್ಥಿಗಳಿಗಾಗಿಯೇ ಈ ಸಂಗ್ರಹ ಗ್ರಂಥವನ್ನು ಸರಳಾನುವಾದದೊಡನೆ ಕೈಗನ್ನಡಿಯಂತೆ ಸಿದ್ಧಪಡಿಸಿದೆ. ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು, ಕಂಠಪಾಠಕ್ಕೆ, ಚರ್ಚಾಸ್ಪರ್ಧೆಗಳಲ್ಲಿ ಭಾಷಣಗಳಲ್ಲಿ, ಪ್ರಬಂಧರಚನೆಗಳಲ್ಲಿ ಬಳಸಲು ಅನುಕೂಲವಾಗುವಂತೆ ಮೂಲದ ಪದ್ಯಗಳನ್ನು, ಆಯ್ಕೆಮಾಡಲಾಗಿದೆ ಅರ್ಥವಾಗಲು ಅನುವಾದ ಕೊಡಲಾಗಿದೆ ವ್ಯಾಖ್ಯಾನಿಸದೆ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಈ ಸಂಗ್ರಹಗ್ರಂಥವನ್ನು ಶಾಲಾ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ರೀತಿಯಲ್ಲಿ ಅನುವಾದದೊಡನೆ ಸಂಗ್ರಹಿಸಿ ಕೊಡಿ ಎಂದು ಕೇಳಿದವರು

ತುರುವೇಕೆರೆಯಲ್ಲಿ ಪುಸ್ತಕಭಂಡಾರ, ಉಪನ್ಯಾಸಗಳು, ಪ್ರಕಟನೆಗಳ ಮೂಲಕ ಜನರಿಗೆ ಸಾಹಿತ್ಯಪರಿಚಯ ಮಾಡುತ್ತಿರುವ ಶ್ರೀ ರಾಮಚಂದ್ರ ಮತ್ತು ಲಲಿತ ರಾಮಚಂದ್ರ ದಂಪತಿಗಳು. ತುರುವೇಕೆರೆಯ ಶ್ರೀ ಚಿದಂಬರ ಧಾರ್ಮಿಕಗ್ರಂಥಾಲಯದ ಮೂಲಕ ಶಾಲಾವಿದ್ಯಾರ್ಥಿಗಳಿಗೆ ಪ್ರತಿಗಳನ್ನು ಉಚಿತವಾಗಿ ಹಂಚಿದರು. ವಿದ್ಯಾರ್ಥಿಗಳಲ್ಲಿ ಕಗ್ಗದಾಸಕ್ತಿ ಬೆಳೆಸಿದರು. ಅವರಿಗೆ ನಾನು ಚಿರಋಣಿ.

2010ರಲ್ಲಿ ಪ್ರಕಟವಾದ ಮೊದಲ ಮುದ್ರಣದ ಪ್ರತಿಗಳೆಲ್ಲ ಮುಗಿದುಹೋಗಿ ಬಹುಕಾಲವಾಗಿ ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಪ್ರತಿಗಳುಬೇಕೆಂದು ಬೇಡಿಕೆಬರುತ್ತಿತ್ತು. ಇದೀಗ ಬೆಂಗಳೂರಿನ ಓಂಕಾರ್ ಪುಸ್ತಕ ಪ್ರಕಾಶಕರೂ ನನ್ನ ಬಾಲ್ಯಮಿತ್ರರೂ. ಆದ ಬಿ.ಎಸ್. ಶ್ರೀರಾಂ ಅವರು ದ್ವಿತೀಯ ಮುದ್ರಣವನ್ನು ಪ್ರಕಟಿಸಲು ಮುಂದೆಬಂದಿದ್ದಾರೆ. ಕಗ್ಗದ ಪದ್ಯಗಳನ್ನು ಆಯ್ಕೆ ಮಾಡಿಕೊಳ್ಳಲು ಗೋಖಲೆ ಸಾರ್ವಜನಿಕಸಂಸ್ಥೆ ಅವರು ವಿದ್ಯಾರ್ಥಿಗಳ ಮೇಲಿನ ಅಭಿಮಾನದಿಂದ ಅನುಮತಿಸಿದ್ದಾರೆ. ಅದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮೊದಲಮುದ್ರಣದ ಆವೃತ್ತಿಯನ್ನು ಓದಿ ಆನಂದಿಸಿದ ವಿದ್ಯಾರ್ಥಿಗಳಿಗೂ, ಪೋಷಕರಿಗೂ, ಪ್ರೋತ್ಸಾಹಿಸಿದ ಅಮೇರಿಕೆ ಯಲ್ಲಿರುವ ನನ್ನ ಮಗಳು ಡಾ.ಕ್ಷಮಾ ಅಶ್ವತ್ಥ-ಜಯರಾಂ ಅವಳಿಗೂ ಹಸ್ತಪ್ರತಿ ಸಿದ್ಧಪಡಿಸುವಲ್ಲಿ ನೆರವುನೀಡಿದ ನನ್ನಪತ್ನಿ ಎಂ.ಆರ್. ಲಕ್ಷ್ಮೀ ದೇವಿಗೂ ನಾನು ಆಭಾರಿಯಾಗಿದ್ದೇನೆ.

– **ಪ್ರೊ. ಜಿ. ಅಶ್ವತ್ಥನಾರಾಯಣ**
ಸಂಗ್ರಾಹಕ ಮತ್ತು ಅನುವಾದಕ
(ದೂ) 080–26637783

ವಿಳಾಸ:
ನಂ. 95, 34ನೇ ಬಿ ಕ್ರಾಸ್
16ನೇ ಮೈನ್, 4ನೇ ಟಿ ಬ್ಲಾಕ್
ಜಯನಗರ,
ಬೆಂಗಳೂರು. – 560 041

ದಿನಾಂಕ : 11–3–2021 ಶಿವರಾತ್ರಿ

ಪ್ರಕಾಶಕರ ನುಡಿ

ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ ।
ನಾನೇನು ಹುಲುಕಡ್ಡಿಯೆಂಬ ನುಡಿ ಬೇಡ ॥
ಹೀನಮಾವುದುಮಿಲ್ಲ ಜಗದ ಗುಡಿಯೊಳಿಗದಿ ।
ತಾಣ ನಿನಗಿಹುದಿಲ್ಲಿ–ಮಂಕುತಿಮ್ಮ ॥

ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗ ಕನ್ನಡದ ಒಂದು ಮೇರುಕೃತಿ. ಇದನ್ನು ಒಂದು ಪುಸ್ತಕವಿಶ್ವವಿದ್ಯಾಲಯವೆಂದೇ ಹೇಳ ಬಹುದು. ಈ ಕೃತಿ ಸಾರ್ವಕಾಲಿಕ, ಕಾಲ ದೇಶಗಳ ಮಿತಿಯನ್ನು ಮೀರಿ ನಿಂತಿರವ ಶಾಶ್ವತ ಕೈದೀವಿಗೆ.

940 ಪದ್ಯಗಳಿರುವ ಈ ಕೃತಿಯಿಂದ ಶ್ರೀ ಅನಾಜಿ ಅವರು ವಿದ್ಯಾರ್ಥಿಗಳಿಗಾಗಿ 112 ಪದ್ಯಗಳನ್ನು ಆಯ್ಕೆಮಾಡಿ ಅವಕ್ಕೆ ವಿವರ ವಾಗಿ ಟಿಪ್ಪಣಿ ತಾತ್ಪರ್ಯಗಳನ್ನು ಕೊಟ್ಟಿದ್ದಾರೆ. ಇದು ಕರ್ನಾಟಕದ ವಿದ್ಯಾರ್ಥಿಗಳಿಗೆ ಒಂದು ಮಾರ್ಗದರ್ಶಿ. ಪ್ರೊ॥ ಜಿ. ಅಶ್ವತ್ಥನಾರಾಯಣ ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಹಾಗೆಯೇ ಈ ಗ್ರಂಥವನ್ನು ಸುಂದರವಾಗಿ ರೂಪಿಸಿರುವ ನನ್ನ ಎಲ್ಲ ಸಹೋದ್ಯೋಗಿಗಳಿಗೂ, ಡಿ.ಟಿ.ಪಿ ಮತ್ತು ಮುದ್ರಣಸಂಸ್ಥೆಗಳಿಗೂ ನನ್ನ ನಮಸ್ಕಾರಗಳು.

2010ರಲ್ಲಿ ಸಣ್ಣ ಕೈಪಿಡಿಯಾಗಿ ಪ್ರಕಟವಾಗಿದ್ದ ಈ ಗ್ರಂಥದ ವಿಸ್ತೃತ ಪ್ರಕಟಣೆಗಳಿಗೆ ಅವಕಾಶಮಾಡಿಕೊಟ್ಟ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗೆ ನನ್ನ ನಮಸ್ಕಾರಗಳು.

ನಮ್ಮ ಎಲ್ಲಾ ಪುಸ್ತಕಗಳನ್ನು ನಿರಂತರವಾಗಿ ಗ್ರಾಹಕರಿಗೆ ತಲುಪಿ ಸುತ್ತಿರುವ ನಮ್ಮ ವಿತರಕರಿಗೂ ಹಾಗೂ ಸಹೃದಯ ಓದುಗರಿಗೂ ನಮ್ಮ ಅನಂತಾನಂತ ವಂದನೆಗಳು.

-ಶ್ರೀರಾಂ

ಓಂಕಾರ್ ಪ್ರಕಾಶನ

ಪರಿವಿಡಿ-1
(ಮೂಲಪದ್ಯಾನುಸಾರ)

	ಮೂಲ ಪದ್ಯಸಂಖ್ಯೆ	ಸಂಗ್ರಹದ ಪುಟಸಂಖ್ಯೆ
93. ಕುಸುಮಸಖನೇಂ ನೀನು? ಹಿಸುಕದೆಯೆ ಮೂಸದನು	(626)	147
94. ಗುದ್ದಲಿಯಿನಾದೀತೆ ಮಲೆ ಕಣಿವೆ ಸಮದ ನೆಲ?	(635)	148
95. ಅಕ್ಕಿಯೊಳಗನ್ನವನು ಮೊದಲಾರು ಕಂಡವನು?	(655)	149
96. ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ	(661)	150
97. ಬಡಗಿ ಬೇಸಾಯಿ ಕರ್ಮಿಗರೇನು ಯೋಗಿಗಳೊ!	(668)	151
98. ಅರ್ಣವವ ಕಣ್ಣಿಂದೆ ಕಂಡ ಬೆರಗಾದೀತೆ	(688)	152
99. ಎಡವದೆಯೆ, ಮೈಗಾಯವಡೆಯದೆಯೆ, ಮಗುವಾರು	(698)	153
100. ತಲೆ ಕೊಡವ ತಳೆದಿರಲು, ಕೈಕತ್ತಿ ಪಿಡಿದಿರಲು	(741)	154
101. ಅಣಗಿದ್ದು ಬೇಸಿಗೆಯೊಳ್, ಎದ್ದು ಮಳೆ ಕರೆದಂದು	(744)	155
102. ಪರಹಿತದ ಮಾತಿರಲಿ; ಪರರಿನೇ ಜೀವಿಪನು	(745)	156
103. ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು	(789)	158
104. ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ	(790)	159
105. ಗರ್ವಪಡದುಪಕಾರಿ, ದರ್ಪ ಬಿಟ್ಟಧಿಕಾರಿ	(806)	160
106. ಕಳವಳದ ನೀಗಿಬಿಡು, ತಳಮಳವ ದೂರವಿಡು	(828)	161
107. ಗುಡಿಯ ಪೂಜೆಯೊ, ಕಥೆಯೊ, ಸೊಗಸುನೋಟವೊ, ಹಾಡೊ	(832)	162
108. ಒಡೆಯದಿರು ತಳಹದಿಯ ಸರಿವಡಿಪೆನದನೆಂದು	(878)	163
109. ತ್ಯಜಿಸಿ ಭುಜಿಸಲ್ಕಲಿತವನೆ ಜಗಕೆ ಯಜಮಾನ	(908)	164
110. ಜೋಳಿಗೆಯ ಪಿಡಿದು ನೀನೂರಿನೂರಿಗೆ ನಡೆದು	(925)	165
111. ಆರ ಕೈತುತ್ತಿಗಂ ನಿನ್ನ ಕಾಯಿಸದೆ ವಿಧಿ	(930)	166
112. ನೂರಾರು ಮತವಿಹುದು ಲೋಕದುಗ್ರಾಣದಲಿ	(934)	167

ಪರಿವಿಡಿ-2
ಪದ್ಯಗಳ ಅಕಾರಾದಿ

ಆ ವಿಚಿತ್ರಕೆ ನಮಿಸೊ

1

ಶ್ರೀ ವಿಷ್ಣು ವಿಶ್ವಾದಿಮೂಲ ಮಾಯಾಲೋಲ ।
ದೇವ ಸರ್ವೇಶ ಪರಬೊಮ್ಮನೆಂದು ಜನಂ ॥
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ। ।
ಆ ವಿಚಿತ್ರಕೆ ನಮಿಸೊ –ಮಂಕುತಿಮ್ಮ ॥ (ಪದ್ಯ–1)

ಕನ್ನಡದಲ್ಲಿ ದೇವತಾಸ್ತುತಿಯನ್ನು ಮತ್ತು ಕಾವ್ಯರಚನೆಯನ್ನು ಶ್ರೀಕಾರದಿಂದ ಪ್ರಾರಂಭಿಸುವುದು ಪ್ರಾಚೀನ ಸಂಪ್ರದಾಯವಾಗಿದೆ. ಡಿವಿಜಿ ಅವರು ಮಂಕುತಿಮ್ಮನ ಕಗ್ಗವನ್ನು ಶ್ರೀಕಾರದಿಂದ (ಶ್ರೀ ವಿಷ್ಣು...) ಪ್ರಾರಂಭಿಸಿದ್ದಾರೆ.

ಲಕ್ಷ್ಮೀಕಾಂತನಾದ ವಿಷ್ಣು, ಜಗತ್ತಿನ ಸೃಷ್ಟಿಕರ್ತ ಲೋಕ ವ್ಯಾಪಾರದಲ್ಲಿ ಆಸಕ್ತನು, ಎಲ್ಲರಿಗೂ ಒಡೆಯನಾದವನು. ಪರಬ್ರಹ್ಮ ನೆನಿಸಿದವನು ಎಂಬುದಾಗಿ ಪ್ರತ್ಯಕ್ಷವಾಗಿ ಕಾಣದಿದ್ದರೂ ಲೋಕದ ಜನತೆ ಶ್ರದ್ಧೆ, ನಂಬಿಕೆ, ಪ್ರೀತಿಗಳಿಂದ ಯಾವ ಶಕ್ತಿಸ್ವರೂಪವನ್ನು ಅಥವಾ ದೈವವನ್ನು ನಂಬಿದ್ದಾರೋ ಆ ವಿಶೇಷ ಸ್ವರೂಪಕ್ಕೆ ಬಾಗುವವನಾಗು ಎಂಬುದಾಗಿ ಸಾಕಾರಸ್ವರೂಪನೂ ನಿರಾಕಾರ ಸ್ವರೂಪನೂ ಆದ ಪರಮಾತ್ಮನನ್ನು ಪ್ರಾರ್ಥಿಸಿ ನಮಸ್ಕರಿಸಿದ್ದಾರೆ.

ಸಮರ ಸಲ್ಲದು

2

ಪುರುಷಸ್ವತಂತ್ರತೆಯ ಪರಮಸಿದ್ಧಿಯದೇನು? ।
ಧರಣಿಗನುದಿನದ ರಕ್ತಾಭಿಷೇಚನೆಯೆ? ॥
ಕರವಾಲವನು ಪುಷ್ಪಸರವೆಂದು ಸೆಳೆದಾಡೆ ।
ಪರಿಮಳವ ಸೂಸುವುದೆ ? ಮಂಕುತಿಮ್ಮ ॥ (ಪದ್ಯ13)

ದೇಶಗಳು ಸ್ವತಂತ್ರವಾಗಲು, ಉಳಿದ ದೇಶಗಳನ್ನು ವಶಪಡಿಸಿ ಕೊಳ್ಳಲು, ರಾಜ್ಯದಾಹಕ್ಕೆ ಜಗತ್ತಿನ ಮಹಾಯುದ್ಧಗಳು ನಡೆದಿವೆ. ಮನುಷ್ಯ ಎಲ್ಲರಮೇಲೆ ತಾನೊಬ್ಬನೇ ಅಧಿಕಾರ ಚಲಾಯಿಸುವ ಪರಮಗುರಿಯಿಂದ ಹೋರಾಡುತ್ತಿರುವುದರಿಂದ ಜಗತ್ತಿನಲ್ಲಿ ಪ್ರತಿದಿನ ರಕ್ತದ ಹೊಳೆಹರಿದಿದೆ. ಹೂವಿನಸರಗಳೆಂಬಂತೆ ಭಾವಿಸಿ ಕತ್ತಿಗಳನ್ನು ಹಿಡಿದು ಹೊಡೆದಾಡಿದರೆ, ಜಗ್ಗಾಡಿದರೆ ಆ ಕತ್ತಿಗಳಿಂದ ಜೀವಬಲಿ ಆಗುತ್ತದೆಯೇ ಹೊರತು ಸಂತೋಷ, ಶಾಂತಿಯೆಂಬ ಸುವಾಸನೆ ಹೊರಹೊಮ್ಮಲಾರದು. ಆದ್ದರಿಂದ ಮಾನವಸ್ವಾತಂತ್ರ್ಯವೆಂಬುದು ಶಾಂತಿಯೆಂಬ ಅಹಿಂಸಾದ ಪರಿಮಳವನ್ನು ಸೂಸಬೇಕು; ಅದಲ್ಲದೆ ಹಿಂಸೆಯೆಂಬ ರಕ್ತಧಾರೆ ಸೂಸಬಾರದು.

ವೈಷಮ್ಯಕ್ಕೆ ಎಡೆ ಇಲ್ಲ

3

ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು ।
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ॥
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು ।
ಬಂದುದೀ ವೈಷಮ್ಯ?–ಮಂಕುತಿಮ್ಮ ॥ (ಪದ್ಯ 14)

ಲೋಕದಲ್ಲಿ ಎಲ್ಲೆಡೆ ಜನಜನರ ನಡುವೆ, ಜನ ಜನಾಂಗಗಳ ನಡುವೆ ದ್ವೇಷ–ವೈಷಮ್ಯ ಕಾಣುತ್ತಿದ್ದೇವೆ. ಹೊಡೆದಾಟ, ಬಡಿದಾಟ ನಡೆಯುತ್ತಿದೆ. ಜನರು ಪ್ರಾಣಹಾನಿ–ಮಾನಹಾನಿಗೆ ಆಸ್ತಿಪಾಸ್ತಿ ನಾಶಕ್ಕೆ ಕಾರಣರಾಗಿದ್ದಾರೆ. ಇದಕ್ಕೆ ನಿಸರ್ಗ–ಭೂಮಿ ಕಾರಣವಲ್ಲ. ಏಕೆಂದರೆ ಇಡೀ ಜಗತ್ತಿನ ಜನರೆಲ್ಲರಿಗೆ ಇರುವುದು ಒಂದೇ ಆಕಾಶ. ಎಲ್ಲರಿಗೂ ವಾಸಿಸಲು ಇರುವ ಭೂಮಿ ಒಂದೆ. ಕುಡಿಯುವ ನೀರು ಬೇರೆ ಅಲ್ಲ; ಉಸಿರಾಡುವ ಗಾಳಿ ಬೇರೆ ಇಲ್ಲ. ಹೀಗಿರುವಾಗ ಇದರಿಂದ ಪಾಠ ಕಲಿತು ಜನರು ದ್ವೇಷ–ವೈಷಮ್ಯ (ವಿರಸ–ಹಗೆತನ) ಬಿಡಬೇಕಾಗಿದೆ. ಪ್ರೀತಿ–ವಿಶ್ವಾಸಗಳನ್ನು ಬೆಳಸಿಕೊಳ್ಳ ಬೇಕಾಗಿದೆ.

ಅತಂತ್ರದ ಬದುಕು

4

ಹಳೆಯ ಭಕ್ತಿಶ್ರದ್ಧೆಯಳಿಸಿಹೋಗಿವೆ ಮಾಸಿ ।
ಸುಳಿದಿಲ್ಲವಾವ ಹೊಸ ದರ್ಶನದ ಹೊಳಪುಂ ॥
ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ ।
ತಳಮಳಿಸುತಿದೆ ಲೋಕ–ಮಂಕುತಿಮ್ಮ ॥ (ಪದ್ಯ 15)

ಹಳೆಯ ಪರಂಪರೆಯ ಜನರಲ್ಲಿ ಕಂಡುಬರುತ್ತಿದ್ದ ಭಕ್ತಿ, ಶ್ರದ್ಧೆ, ನಂಬಿಕೆಗಳು ಈಗಿನ ತಲೆಮಾರಿನ ಜನರಲ್ಲಿ ಕಂಡುಬರುತ್ತಿಲ್ಲ. ಅವುಗಳನ್ನು ಅನುಸರಿಸುತ್ತಿಲ್ಲ. ಆದರೆ ಹೊಸಬಗೆಯ ನಂಬಿಕೆ ಆಚರಣೆಗಳನ್ನು ಅಳವಡಿಸಿಕೊಂಡಿದ್ದಾರೆಯೇ? ಅದೂ ಇಲ್ಲ. ಹೀಗಾಗಿ ತ್ರಿಶಂಕುಗಳಾಗಿದ್ದಾರೆ. ಹಳೆಯ ಅಭ್ಯಾಸದ ಬಲದಿಂದ ಕುಂಟ ಮತ್ತು ಕುರುಡರು ವಾಸವಾಗಿದ್ದ ಮನೆಬಿದ್ದು ಹೋದರೆ ಅವರು ಹೇಗೆ ಓಡಾಡಿಕೊಂಡಿರಲು ಸಾಧ್ಯ? ಅವರಿಗೆ ಹೊಸ ಮನೆಯೂ ಇಲ್ಲದೆ. ಹಳೆಯಮನೆಯೂ ಇಲ್ಲದೆ ಬೀದಿಪಾಲು ಆಗುತ್ತಾರೆ, ಹಾಗಾಗಿದೆ ಇಂದಿನವರ ಸ್ಥಿತಿ. ಹಳೇದೇಹವಿಲ್ಲ, ಹೊಸ ದೇಹಸಿಕ್ಕಿಲ್ಲ ಎಂಬ ಪಿಶಾಚಿಯ ತರಹ ಆಗಿದೆ ಇಂದಿನವರ ಬಾಳು. ಹೀಗಾಗಿ ಲೋಕದ ಜನರೆಲ್ಲಾ ಒದ್ದಾಡುತ್ತಿದ್ದಾರೆ.

ಕಳವಳ ಬೇಡ-ಪರಿಹಾರವಿದೆ

5

ತಳಮಳವಿದೇನಿಳೆಗೆ? ದೇವದನುಜರ್ ಮಥಿಸೆ ।
ಜಳನಿಧಿಯೊಳಾದಂತೆ ಸುಧೆಗೆ ಪೀಠಿಕೆಯೇಂ ? ॥
ಹಾಳಾಹಳವ ಕುಡಿವ ಗಿರಿಶನಿದ್ದಿರ್ದೊಡೀ ।
ಕಳವಳವದೇತಕೆಲೊ?–ಮಂಕುತಿಮ್ಮ ॥ (ಪದ್ಯ –17)

ತಳಮಳ ಎಂದರೆ ಕಳವಳ–ಗೊಂದಲ, ದಿಗಿಲು, ಭಯ ಆತಂಕ ಇತ್ಯಾದಿ.

ಇದು ಸರಿಯೋ ತಪ್ಪೋ ಏನು ಮಾಡಬೇಕು ಏನು ಮಾಡ ಬಾರದು ಎಂಬುದನ್ನು ತಿಳಿಯದ ಬಿಕ್ಕಟ್ಟಿನ ಪರಿಸ್ಥಿತಿ. ಇಂಥ ಸಂದರ್ಭದಲ್ಲಿ ನಾವು ಕಂಗೆಡಬಾರದು ಹೆದರಬಾರದು.

ದೇವತೆಗಳು ಮತ್ತು ರಾಕ್ಷಸರೂ ಸೇರಿ ಅಮೃತಕ್ಕಾಗಿ ಸಮುದ್ರವನ್ನು ಮಥಿಸಿದಾಗ ಮೊದಲು ಹಾಲಾಹಲವೆಂಬ ವಿಷ ಬಂದಿತು. ಏನು ಮಾಡಬೇಕೆಂದು ತಿಳಿಯಲಿಲ್ಲ. ಆಗ ಈಶ್ವರ ಅದನ್ನು ಕುಡಿದು ಸಮಸ್ಯೆಯನ್ನು ದೇವತೆಗಳಿಗೆ ರಾಕ್ಷಸರಿಗೆ ಪರಿಹಾರಮಾಡಿದನು. ಆ ರೀತಿ ಪ್ರತಿಯೊಂದು ಸಮಸ್ಯೆ ಬಂದಾಗ ದಿಕ್ಕೇತೋಚದಂತಾಗಿ ಕಳವಳ ಗಾಬರಿ ಉಂಟಾದರೆ ಕಂಗೆಡಬೇಕಿಲ್ಲ. ಆಶಾಭಾವನೆ ಹೊಂದಿರಬೇಕು. ಧೈರ್ಯ, ಆತ್ಮವಿಶ್ವಾಸ

ಹೊಂದಿರಬೇಕು. ನಮಗೆ ಸಮಸ್ಯೆ ಬಂದು ಅತಂತ್ರವಾದ ಮನಸ್ಸು ಉಂಟಾದಾಗ ಗುರುಗಳು, ಹಿರಿಯರು, ತಾಯಿ ತಂದೆಯರು ದಾರಿ ತೋರಿಸುತ್ತಾರೆ ಎಂಬ ಆತ್ಮವಿಶ್ವಾಸ ವಿದ್ಯಾರ್ಥಿಗಳಿಗೆ ಇರಬೇಕು.

ಜಗತ್ತಿನ ಮೂಲ ತಿಳಿಯದು

6

ಜೀವಗತಿಗೊಂದು ರೇಖಾಲೇಖವಿರಬೇಕು ।
ನಾವಿಕನಿಗಿರುವಂತೆ ದಿಕ್ಕು ದಿನವೆಣಿಸೆ ॥
ಭಾವಿಸುವುದೆಂತದನು ಮೊದಲು ಕೊನೆ ತೋರದಿರೆ?।
ಆವುದೀ ಜಗಕಾದಿ? –ಮಂಕುತಿಮ್ಮ ॥ (ಪದ್ಯ 25)

ಸಮುದ್ರದಲ್ಲಿ ಹಡಗು ನಡೆಸುವ ನಾವಿಕನಿಗೆ ದಿಕ್ಸೂಚಿಯೊಂದು ಇರುತ್ತದೆ. ಹಡಗು ಯಾವದಿಕ್ಕಿಗೆ ಹೋಗುತ್ತಿದೆ ಎಂಬುದನ್ನು ಅದು ತೋರಿಸುತ್ತದೆ. ಅದರಿಂದ ಹಡಗು ಗುರಿ ಮುಟ್ಟಲು ಸಾಧ್ಯ. ದಿಕ್ಸೂಚಿ ಇಲ್ಲದಿದ್ದರೆ ಹಡಗು ದಿಕ್ಕೆಟ್ಟು ಹೋಗುತ್ತದೆ. ಹಾಗೆಯೇ ಎಲ್ಲರ ಬಾಳಿನಲ್ಲಿ ಜೀವನದ ಗುರಿ ಬಂದಿರಬೇಕು. ಇಲ್ಲದಿದ್ದರೆ ಅವರ ಬಾಳು ಗುರಿತಪ್ಪಿ ಹಾಳಾಗುತ್ತದೆ. ಅದೇ ರೀತಿ ಈ ಜಗತ್ತಿನ ಸೃಷ್ಟಿ ಹೇಗೆ? ಅಂತ್ಯ ಹೇಗೆ? ಎಂಬುದನ್ನು ತಿಳಿದಿರಬೇಕು. ಆದರೆ ಅದು ತಿಳಿಯುತ್ತಿಲ್ಲ. ತಿಳಿಯುವ ಬಗೆ ಹೇಗೆ ಎಂಬುದು ಜ್ಞಾನಿಗಳ ಚಿಂತೆ ಆಗಿದೆ.

ಒಳ್ಳೆಯದನ್ನು ಆರಿಸಿಕೊಳ್ಳಬೇಕು

7

ಎರಡುಮಿರಬಹುದು ದಿಟ; ಶಿವರುದ್ರನಲೆ ಬೊಮ್ಮ ।
ಕರವೊಂದರಲಿ ವೇಣು, ಶಂಖವೊಂದರಲಿ! ॥
ಬೆರಳ್ಗಳೆರಡಾನುಮಿರೆ ಕೈ ಚಿಟಿಕೆಯಾಡುವುದು ।
ಒರುವನಾಡುವುದೆಂತು?.....ಮಂಕುತಿಮ್ಮ ॥ (ಪದ್ಯ–29)

ಪರಮಾತ್ಮನಿಗೆ ಎರಡು ಸ್ವರೂಪಗಳಿವೆ. ಒಂದು ನಾಣ್ಯಕ್ಕೆ ಎರಡು ಮುಖಗಳು ರಾಜಾ–ರಾಣಿ ಇದ್ದಂತೆ. ಎರಡೂ ನಿಜ. ಎರಡೂ ಸರಿ. ಪರಬ್ರಹ್ಮ (ಬೊಮ್ಮ) ಶಿವನೆಂಬ ರೂಪದಲ್ಲಿ ಮಂಗಳಸ್ವರೂಪಿಯೂ ರುದ್ರನೆಂಬ ಉಗ್ರರೂಢಿಯೂ ಆಗಿದ್ದಾನೆ. ವಿಷ್ಣುರೂಪದಲ್ಲಿ ಒಂದು ಕೈಯಲ್ಲಿ ಕೊಳಲನ್ನು (ವೇಣು) ಇನ್ನೊಂದು ಕೈಯಲ್ಲಿ ಪಾಂಚಜನ್ಯವೆಂಬ ಶಂಖವನ್ನೂ ಧರಿಸಿದ್ದಾನೆ. ಅಂತೆಯೇ ಲೋಕದಲ್ಲಿ ಸುಖವೂ ಇದೆ. ದುಃಖವೂ ಇದೆ; ಒಳ್ಳೆಯದೂ ಇದೆ ಕೆಟ್ಟದ್ದೂ ಇದೆ; ಹಗಲು–ರಾತ್ರಿಗಳಿವೆ ದುರ್ಜನರು ಸಜ್ಜನರೂ ಇಬ್ಬರೂ ಇದ್ದಾರೆ. ಕೈಯ ಒಂದು ಬೆರಳಲ್ಲಿ ಚಿಟಿಕೆ (ಮಧ್ಯದ ಬೆರಳು ಹೆಬ್ಬೆರಳು ಎರಡನ್ನು ಅದುಮಿಕೊಂಡು ಶಬ್ದ ಬರಿಸುವುದು) ಹಾಕಲು ಸಾಧ್ಯವಿಲ್ಲ ಎರಡು ಬೆರಳುಗಳುಬೇಕು

ಅದೇ ರೀತಿ ಆಟ ಆಡಲು ಒಬ್ಬನೇ ಇದ್ದರೆ ಹೇಗೆ ಸಾಧ್ಯ? ಕೊನೆಯ ಪಕ್ಷ ಇಬ್ಬರಾದರೂ ಬೇಕು. ಒಬ್ಬನಿದ್ದರೆ ಆಟಆಡಲು ಸಾಧ್ಯವಿಲ್ಲ. ಎಂದರೆ ಒಂಟಿಯಾಗಿದ್ದಾರೆ. ಸಾಧ್ಯವಿಲ್ಲ. ವಿದ್ಯಾಭ್ಯಾಸಕಾಲದಲ್ಲಿ ಸ್ನೇಹಿತರ ಜತೆಬೇಕು. ಸ್ನೇಹಿತರಲ್ಲಿ ಒಳ್ಳೆಯವರೂ ಕೆಟ್ಟವರೂ ಇಬ್ಬರೂ ಇರುತ್ತಾರೆ. ಹಾಲಲ್ಲಿ ನೀರು ಇರುತ್ತದೆ. ಹಂಸಪಕ್ಷಿ ನೀರನ್ನು ಬಿಟ್ಟು ಹಾಲನ್ನು ಸೇವಿಸುತ್ತದೆ. ಹಾಗೆಯೇ ನಾವು ಸಜ್ಜನರ ಸಂಗಮಾಡಬೇಕು.

ಜ್ಞಾನಾರ್ಜನೆಗೆ ಹಲವು ಮಾರ್ಗಗಳಿವೆ

8

ಒಂದಿಹುದುಪಾಯವೋರೊರ್ವನರೆಗಣ್ಣುಗಳು ।
ಮೊಂದೊಂದು ಸತ್ಯಾಂಶಕಿರಣಗಳ ಪಿಡಿದು ॥
ಒಂದುಗೂಡಿದೊಡವರ್ಗಳರಿವನೆಲ್ಲವನಾಗ ।
ಮುಂದು ಸಾಗುವೆವಿನಿತು –ಮಂಕುತಿಮ್ಮ ॥ (ಪದ್ಯ –48)

ಲೋಕದಲ್ಲಿ ಒಬ್ಬೊಬ್ಬರಲ್ಲಿ ಒಂದೊಂದು ಶಕ್ತಿ, ಸಾಮರ್ಥ್ಯ, ಪ್ರತಿಭೆ ಇರುತ್ತದೆ. ಆದರೆ ಪರಿಪೂರ್ಣವಾಗಿ ಯಾರಲ್ಲೂ ಇರುವುದಿಲ್ಲ. ಒಬ್ಬೊಬ್ಬರ ಜ್ಞಾನವನ್ನು ಅರೆಗಣ್ಣು (ಅರ್ಧದೃಷ್ಟಿ) ಇದ್ದಂತೆ ಎನ್ನಬಹುದು. ಯಾವುದೂ ಪೂರ್ತಿಯಾಗಿ ನಿಚ್ಚಳವಾಗಿ ಕಾಣುವುದಿಲ್ಲ. ಆದರೆ ಕಣ್ಣಲ್ಲಿ ಕಣ್ಣಿಟ್ಟು (ದೃಷ್ಟಿಯನ್ನು ಕೇಂದ್ರೀಕರಿಸಿ) ನೋಡಿದಾಗ ಆದಷ್ಟು ಸ್ಪಷ್ಟವಾಗಿ ಸತ್ಯ ತಿಳಿಯುತ್ತದೆ. ಹಲವು ಕುರುಡರು. ಆನೆಯನ್ನು ಕೈ ಮೈ ತಡವಿದಾಗ ಒಬ್ಬೊಬ್ಬರ ಅನುಭವ ಒಂದೊಂದು ತರಹ. ಸೊಂಡಿಲು ಹಿಡಿದವನು ಆನೆಮೆತ್ತಗಿದೆ ಎಂದರೆ ಬಾಲಹಿಡಿದವನು ಆನೆ ಚಿಕ್ಕದು ಎನ್ನುತ್ತಾನೆ. ಮೈತಡವಿದನು ಆನೆ ಗಟ್ಟಿ ಎನ್ನುತ್ತಾನೆ. ಇವರೆಲ್ಲರೂ ಹೇಳುವ ಮಾತು ಸತ್ಯದ ಭಾಗಗಳೇ ಆಗಿವೆ ಹತ್ತಾರು ಸಣ್ಣಬೆಳಕಿನ ಹಣತೆಗಳು ಒಟ್ಟಾಗಿ ಬೆಳಗಿದರೆ ಸಾಕಷ್ಟು ಪ್ರಕಾಶಮಾನವಾಗಿ ಬೆಳಕು

ದೊರಕುತ್ತದೆ. ಹಾಗೆಯೇ ಒಬ್ಬೊಬ್ಬರ ಜ್ಞಾನವೆಲ್ಲ ಸೇರಿದರೆ ಅಧಿಕಜ್ಞಾನ ಉಂಟಾಗುತ್ತದೆ. ಆಗ ಮಬ್ಬು ಬೆಳಕು, ಉಜ್ವಲ ಬೆಳಕು ಆಗುತ್ತದೆ. ಸಾಕಷ್ಟು ಸ್ಪಷ್ಟಜ್ಞಾನ (ಅರಿವು) ಬರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಕೇವಲ ಪುಸ್ತಕದ ಓದಿನಿಂದಲೇ ಪೂರ್ಣಜ್ಞಾನ ಪಡೆಯಲು ಆಗುವುದಿಲ್ಲ. ಅದು ಅರೆಗಣ್ಣಿನಂತೆ ಅದರ ಜತೆಗೆ ಗುರುವಿನ ಪಾಠ, ಹಿರಿಯರ ಮಾರ್ಗದರ್ಶನ, ಜ್ಞಾನಿಗಳ ಹಾಗೂ ಸಜ್ಜನರ ನಡವಳಿಕೆಯ ವೀಕ್ಷಣೆ ಸ್ವಂತಅಭ್ಯಾಸ ಪ್ರಯತ್ನಗಳು ಮೊದಲಾದ ಹಲವಾರು ಜ್ಞಾನಮಾರ್ಗಗಳಿಂದ ವಿದ್ಯೆಯನ್ನು ಕಲಿಯಬೇಕು.

ಗುಣಕೆ ಕಾರಣ ಹತ್ತಾರು

9

ತೃಣಕೆ ಹಸಿರೆಲ್ಲಿಯದು? ಬೇರಿನದೆ? ಮಣ್ಣಿನದೆ? ।
ದಿನಪನದೆ? ಚಂದ್ರನದೆ? ನೀರಿನದೆ? ನಿನದೆ? ॥
ತಣಿತಣಿವ ನಿನ್ನ ಕಣ್ಣಿನ ಪುಣ್ಯವೋ? ನೋಡು ।
ಗುಣಕೆ ಕಾರಣವೊಂದೆ? –ಮಂಕುತಿಮ್ಮ ॥ (ಪದ್ಯ 53)

ಹುಲ್ಲು (ತೃಣ) ಉಪಯುಕ್ತ ವಸ್ತು; ನೋಡಲು ಸುಂದರ. ಈ ಗುಣ ಹುಲ್ಲಿಗೆ ಬರಲು ಕಾರಣವೇನು? ಬೇರಿನ ಸತ್ತ್ವದಿಂದ ಉಂಟಾಯಿತೆ? ಮಣ್ಣಿನಸಾರದಿಂದ ಬಂತೆ? ಸೂರ್ಯ–ಚಂದ್ರರ ಬೆಳಕಿನತೇಜಸ್ಸುಗಳಿಂದ ಉಂಟಾಯಿತೇ? ನೀರಿನಿಂದ ವೃದ್ಧಿಸಿತೇ? ಅಥವಾ ನಾವು ಬೆಳೆಸಿದ್ದರಿಂದ ಬಂತೇ? ಇಲ್ಲವೇ ಈ ಹಸಿರುಗುಣವು, ಆ ಹುಲ್ಲನ್ನು ಕಂಡು ತಣಿಯುವ ನಮ್ಮ ಕಣ್ಣುಗಳ ಪುಣ್ಯಫಲವೇ? ಎಂದು ಯೋಚಿಸಿದರೆ ಇವೆಲ್ಲ ಕಾರಣಗಳೂ ನಿಜ. ಇದರರ್ಥ ಒಬ್ಬನಲ್ಲಿ ಅಥವಾ ಒಂದು ವಸ್ತುವಿನಲ್ಲಿ ಒಂದು ಸದ್ಗುಣ ಕಾಣಲು ಹತ್ತಾರು ಶಕ್ತಿಗಳು ವ್ಯಕ್ತಿಗಳು ಕಾರಣಕರ್ತರಾಗಿರುತ್ತಾರೆ.

ರೋಮಾಂಚನದ ಅನುಭವಗಳು

10

ಆಗುಂಬೆಯಸ್ತಮಯ ದ್ರೋಣಪರ್ವತದುದಯ ।
ತ್ಯಾಗರಾಜನ ಗಾನ ವಾಲ್ಮೀಕಿ ಕವನ ॥
ಆಗಿಸವೆ ತಾವಿವೆಮ್ಮಂತರಂಗದಿ ಸತ್ಯ ।
ಯೋಗಪುಲಕಾಂಕುರವ?–ಮಂಕುತಿಮ್ಮ ॥ (ಪದ್ಯ 57)

ತಿಳಿವಳಿಕೆ ಅಷ್ಟೇ ಸಾಲದು, ಅನುಭವವೂ ಬೇಕು ಜ್ಞಾನಾರ್ಜನೆಗೆ. ಆ ಅನುಭವ ನಮ್ಮ ಹೃದಯದಲ್ಲಿ ಸತ್ಯದರ್ಶನ ಮಾಡಿಸುವಂಥ ರೋಮಾಂಚನಕಾರಿ ಸ್ಫೂರ್ತಿಯುತ ಅನುಭವ ವಾಗಿರಬೇಕು. ಆಗ ನಮಗೆ ವೃದ್ಧಿ. ಅಪೂರ್ವವಾದ ಆಗುಂಬೆಯಲ್ಲಿ ಸೂರ್ಯ ಮುಳುಗುವ ಸೊಬಗು. ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿ (ದ್ರೋಣ ಪರ್ವತ)ಯಲ್ಲಿ ಸೂರ್ಯ ಹುಟ್ಟುವಾಗ ಕಂಡುಬರುವ ಚೆಲುವು, ತ್ಯಾಗರಾಜನ ಕೀರ್ತನೆಗಳನ್ನು ಕೇಳಿದಾಗ ಆಗುವ ಆನಂದ, ವಾಲ್ಮೀಕಿಯ ರಾಮಾಯಣಕಾವ್ಯದ ಓದಿನಿಂದಾಗುವ ಸಂತೋಷ. ಈ ಬಗೆಯ ಅನುಭವಗಳೇ ನಮ್ಮ ಬಾಳಿಗೆ ಸ್ಫೂರ್ತಿ, ಸತ್ಯವನ್ನು ಕಾಣಿಸುತ್ತವೆ. ಮೈನವಿರೇಳಿಸುವ ಅನುಭವ ನೀಡುತ್ತವೆ.

ಮಹನೀಯಗುಣವೇ ಶ್ರೇಷ್ಠ

11

ಮಣಿಮಂತ್ರತಂತ್ರಸಿದ್ಧಿಗಳ ಸಾಕ್ಷ್ಯಗಳೇಕೆ ।
ಮನಗಾಣಿಸಲು ನಿನಗೆ ದೈವದದ್ಭುತವ? ॥
ಮನುಜರೊಳಗಾಗಾಗ ತೋರ್ಪ ಮಹನೀಯಗುಣ ।
ವನುವಾದ ಬೊಮ್ಮನದು–ಮಂಕುತಿಮ್ಮ ॥ (ಪದ್ಯ 59)

ನಮ್ಮ ಕಣ್ಣಿಗೆಕಾಣದ ದೈವವು (ವಿಧಿ) ನಮಗೆ ಅದರ ಶಕ್ತಿಸಾಮರ್ಥ್ಯ ತೋರಿಸಲು ಮಣಿವೈದ್ಯ. ಮಂತ್ರವಿದ್ಯೆ, ತಂತ್ರಸಿದ್ಧಿ ವಿದ್ಯೆಗಳ ಮೂಲಕ ಪವಾಡಗಳನ್ನು ಪ್ರದರ್ಶಿಸಬಹುದು. ಅವುಗಳಿಂದ ಭಗವಂತನ ಮಹಿಮೆ ತಿಳಿಯಬೇಕಿಲ್ಲ. ಲೋಕದಲ್ಲಿ ಸಜ್ಜನರಾದ ಮಹನೀಯರ ನಡೆನುಡಿಗಳಿಂದ ವ್ಯಕ್ತಪಡಿಸುವ ಗುಣಗಳಲ್ಲಿ ಭಗವಂತನು ತೋರುವ ಅನುಗ್ರಹವನ್ನು ಕಾಣ ಬಹುದು. ಸಜ್ಜನರ ಸರಳಜೀವನ, ಪ್ರಾಮಾಣಿಕತೆ, ವಿದ್ಯಾದಾನ, ದೇಶಾಭಿಮಾನ ಕುಟುಂಬವಾತ್ಸಲ್ಯ, ದೀನರಮೇಲೆ ಕರುಣೆ ಮೊದಲಾದ ಮಹನೀಯ ಗುಣಗಳೇ, ಮಾರ್ಗದರ್ಶನ ನೀಡುತ್ತವೆ. ಸಜ್ಜನರಲ್ಲಿ ಕಾಣುವ ಈ ಆದರ್ಶಗುಣಗಳೆಲ್ಲ ಭಗವಂತನ ಅಂಶಗಳೇ ಆಗಿರುತ್ತವೆ. ಆದಕಾರಣ ಸಾಧು, ಸಜ್ಜನ, ಸತ್ಪುರುಷರ ಸನ್ನಡತೆಗಳೇ ಭಗವತ್ ಸ್ವರೂಪವೆನ್ನಬಹುದು.

ಸಾಹಿತ್ಯ ಕಲೆಗಳಲ್ಲಿ ವಿಶ್ವರೂಪ

12

ಗ್ರೀಸಿನಾ ಕಬ್ಬಗಳನೋದುವರು ದೆಹಲಿಯಲಿ ।
ಕಾಶಿಯಾ ಶಾಸ್ತ್ರಗಳನಾಕ್ಸ್‌ಫರ್ಡಿನವರು ॥
ದೇಶಕಾಲವಿಭಾಗ ಮನದ ರಾಜ್ಯದೊಳಿರದು ।
ಶ್ವಾಸವದು ಬೊಮ್ಮನದು–ಮಂಕುತಿಮ್ಮ ॥ (ಪದ್ಯ 60)

ಮಹಾಕವಿ ಹೋಮರನ ಇಲಿಯಡ್, ಒಡೆಸ್ಸಿ ಮೊದಲಾದ ಪಾಶ್ಚಾತ್ಯ ಮಹಾಕಾವ್ಯಗಳನ್ನು ದೆಹಲಿಯಲ್ಲಿ ಭಾರತೀಯರು ಓದುತ್ತಾರೆ. ಭಾರತದ ಸನಾತನ ಧರ್ಮಶಾಸ್ತ್ರಗಳು ವೇದೋಪನಿಷತ್ತುಗಳನ್ನು ಆಕ್ಸ್‌ಫರ್ಡ್, ಜರ್ಮನ್ ಮೊದಲಾದ ಕಡೆ ಇರುವ ಪಾಶ್ಚಾತ್ಯರು ಅಭ್ಯಾಸಮಾಡುತ್ತಾರೆ. ಏಕೆಂದರೆ ಜ್ಞಾನಾರ್ಜನೆಗೆ, ವಿದ್ಯೆಗೆ ದೇಶಭೇದ ಕಾಲಭೇದ ಜನಭೇದ, ಕೀಳು–ಮೇಲು ಭಾವನೆ, ಸಾಹಿತ್ಯ, ಶಾಸ್ತ್ರಗಳ ಅಧ್ಯಯನದ ಬಗ್ಗೆ ಇಲ್ಲ. ಹೃದಯದ ಭಾವನೆಗಳು, ಜ್ಞಾನ ಸ್ವರೂಪ ಎಲ್ಲ ಆ ಭಗವಂತನ ಸ್ವರೂಪದ್ದಾಗಿದೆ ಸತ್ಯದರ್ಶನ ಎಲ್ಲರ ಗುರಿಯಾಗಿದೆ. ಇದು ಎಲ್ಲರಿಗೂ ತಿಳಿಯಬೇಕಾದ ವಿಚಾರ.

ಪ್ರತಿದಿನ ಕಲಿಯುವುದೇ ನಿತ್ಯಭೋಜನ

13

ಚಿತ್ತದನುಭವ ಭಾವ ಸಂಭಾವನೆಗಳೆಲ್ಲ ।
ಭತ್ತವದನು ವಿಚಾರಯುಕ್ತಿಗಳು ಕುಟ್ಟೆ ॥
ತತ್ತ್ವ ತಂಡುಲ ದೊರೆಗುಮದು ವಿವೇಚಿತತತ್ತ್ವ ।
ನಿತ್ಯಭೋಜನ ನಮಗೆ–ಮಂಕುತಿಮ್ಮ ॥ (ಪದ್ಯ ? 64)

ಲೋಕದಲ್ಲಿ ವಿದ್ಯಾರ್ಥಿಗಳು ಸ್ವತಃ ಅಭ್ಯಾಸ ಮಾಡಿ ಅನುಭವ ಹೊಂದಬೇಕು ಪ್ರಯೋಗಶಾಲೆಯಲ್ಲಿ ಪಾಠಕಲಿತಂತೆ, ಯೋಚನೆ ಮಾಡಿದಾಗ ನೂರಾರು ವಿಚಾರಗಳು ಭಾವನೆಗಳು ಹೊಳೆಯುತ್ತವೆ ಅವುಗಳ ಬಗ್ಗೆ ವಿಚಾರಮಾಡಬೇಕು; ಚಿಂತನೆಮಾಡಬೇಕು. ಇವೆಲ್ಲ ಸಿಪ್ಪೆ ಯಿಂದ ಕೂಡಿರುವ ಭತ್ತ ಇದ್ದಂತೆ. ಅಕ್ಕಿಬೇಕಾದರೆ ಭತ್ತವನ್ನು ಒರಳಲ್ಲಿ ಒನಕೆಯಿಂದ ಕೊಟ್ಟಬೇಕು. ಹೊಟ್ಟನಿಂದ ಶುದ್ಧಅಕ್ಕಿ ಬೇರೆಮಾಡಬೇಕು. ಹಾಗೆ ನಮ್ಮೆಲ್ಲ ಆಲೋಚನೆಗಳನ್ನು ವಿವೇಕ ದಿಂದ ವಿಮರ್ಶೆಮಾಡಿ ಸರಿ–ತಪ್ಪುಗಳನ್ನು ತಿಳಿಯಬೇಕು. ಆಗ ಸತ್ಯವೆಂಬ ಸರಿಯಾದ ಜ್ಞಾನ (ತತ್ತ್ವ ತಂಡುಲ)ವೆಂಬ ಅಕ್ಕಿ ಸಿಗು ತ್ತದೆ. ಹೀಗೆ ಪ್ರತಿಯೊಂದು ವಿಷಯವನ್ನು ವಿವೇಕದಿಂದ ಅನುಭವದಿಂದ ಅಧ್ಯಯನದಿಂದ ಅರ್ಥಮಾಡಿಕೊಂಡು ಶುದ್ಧಜ್ಞಾನವನ್ನು, ಸ್ಪಷ್ಟ ತಿಳಿವಳಿಕೆಯನ್ನು (ವಿವೇಚಿತ ತತ್ತ್ವ)

ತಿಳಿದಾಗಲೇ ನಮಗೆ ಸರಿಯಾದ ಆಹಾರದೊರೆಯುವುದು. ಹೀಗೆ ನಿತ್ಯವೂ ಜ್ಞಾನಾರ್ಜನೆ ಮಾಡುವುದು, ವಿದ್ಯಾಭ್ಯಾಸ ಮಾಡುವುದು ಪ್ರತಿದಿನ ಅಭ್ಯಾಸ ಅಧ್ಯಯನ, ಪಾಠ ಓದಿಕಲಿಯುವುದೇ ಪ್ರತಿದಿನದ ಊಟ (ನಿತ್ಯ ಭೋಜನ) ಇದ್ದಂತೆ. ಅಂದರೆ ವಿದ್ಯಾರ್ಥಿಗೆ ದಿನಾ ಹಸಿವಾಗುತ್ತದೆ. ಊಟಬೇಕು ಹಾಗೆಯೇ ದಿನಾ ಜ್ಞಾನದ ಹಸಿವಿಗೆ, ಜ್ಞಾನಾರ್ಜನೆ ಎಂಬ ಊಟ ಬೇಕು. ಪ್ರತಿದಿನವೂ ಕಲಿಯಬೇಕು, ತಿಳಿಯಬೇಕು.

ಅರಿವು ಅನುಭವವಾಗಬೇಕು

14

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ ।
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ ॥
ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ ।
ಶಾಸ್ತ್ರತನದಿಂದಲ್ಲ –ಮಂಕುತಿಮ್ಮ ॥ (ಪದ್ಯ –65)

ನಾವು ಈವತ್ತು ಪುಸ್ತಕಗಳನ್ನು ಓದುವುದರಿಂದ ಜ್ಞಾನಪಡೆಯುವುದೇ ಹೆಚ್ಚಾಗಿದೆ. ಪುಸ್ತಕಗಳ ಓದಿನಿಂದ ಬರುವ ತಿಳಿವಳಿಕೆ. ಒಂದು ಹಂತದ್ದು ಪ್ರಾಥಮಿಕವಾದ್ದು. ಅದು ಬಾಹ್ಯಜ್ಞಾನ, ತಲೆಯಲ್ಲಿ (ಮಸ್ತಕದಿ) ಧರಿಸಿದ ರತ್ನವಜ್ರವಿದ್ದಂತೆ, ಅಲಂಕಾರಪ್ರಾಯ. ಹೊರಗಡೆಗೆ ಚೆನ್ನಾಗಿರುತ್ತದೆ. ಅದರಿಂದ ತಲೆಯೊಳಗಿನ ಬುದ್ಧಿವಂತಿಕೆ, ಜ್ಞಾನ ಎಷ್ಟೆಂಬುದು ತಿಳಿಯುವುದಿಲ್ಲ. ಆದರೆ ಶ್ರೇಷ್ಠವಾಗಿ ಹೊಳೆಯುವ ಕಿರೀಟದಂತಿರುವ ಜ್ಞಾನವನ್ನು ಅನುಭವ ಅಧ್ಯಯನದಿಂದ ನಮ್ಮದಾಗಿಸಿಕೊಳ್ಳಬೇಕು. ನಮ್ಮ ಬುದ್ಧಿಯಿಂದ ಅಭ್ಯಾಸದಿಂದ ಬೆಳೆಸಿಕೊಂಡ ಜ್ಞಾನ (ಚಿತ್ತದೊಳು ಬೆಳೆದ ಅರಿವು) ಮಣ್ಣಿನಲ್ಲಿ ಬೆಳೆದು ಬೇರುಬಿಟ್ಟ ಮರದಲ್ಲಿ ಬಿಟ್ಟ ಹೂವಿನಂತೆ, ಸಹಜ ಸೌಂದರ್ಯ ಸುಗಂಧಗಳಿಂದ ಕೂಡಿದ ಹೂವಿದ್ದಂತೆ. ಕಾಗದ ಹೂ, ಪ್ಲಾಸ್ಟಿಕ್

ಹೂವಿನಂತಲ್ಲ, ಅದು ಕೃತಕ. ಸಹಜವಲ್ಲ. ಆದ್ದರಿಂದ ಜ್ಞಾನಲಭ್ಯ ವಾಗುವುದು ಸತ್ಯ ತಿಳಿಯುವುದು ತಿಳಿವಳಿಕೆ ಅನುಭವಗಳಿಂದ ನಿಜವಾದ ವಿದ್ಯೆ (ವಸ್ತು ಸಾಕ್ಷಾತ್ಕಾರ) ಅಲಂಕಾರದಿಂದ ತೋರಿಕೆ ಯಿಂದ ಬರುವುದಿಲ್ಲ ನಮ್ಮ ಮನಸ್ಸಿನೊಳಗಿನ ವಿಚಾರ ಮಂಥನದಿಂದ (ಅಂತರೀಕ್ಷಣೆ) ವಿಜ್ಞಾನಿ ಸದಾ ಶೋಧನೆಯಲ್ಲಿ ನಿರತನಾದಂತೆ. ಸ್ವಾಧ್ಯಾಯದಿಂದ (ಸ್ವಂತ ಅಧ್ಯಯನದಿಂದ) ಬರುತ್ತದೆ. ಆದ್ದರಿಂದ ವಿದ್ಯಾರ್ಥಿ ಸದಾಚಿಂತನಶೀಲನಾಗಿರಬೇಕು. ಕೇವಲ ಪಾಂಡಿತ್ಯದಿಂದ (ಶಾಸ್ತ್ರಿತನ) ಕಂಠಪಾಠದಿಂದ ನಿಜವಾದ ಜ್ಞಾನ ಬರುವುದಿಲ್ಲ.

ದೇವರನ್ನು ಸದಾ ನೆನೆಯಬೇಕು

15

ಮರ ತನ್ನ ಹೆತ್ತ ಬೀಜವನಿಲ್ಲವೆನಿಸಿ ವಿ ।
ಸ್ತರಿಸುವಂದದಿ, ಸೃಷ್ಟಿ ತನ್ನ ಮೂಲವನು ॥
ಮರೆಮಾಚಿ ತಾನೆ ಮೆರೆಯುತ್ತಿಹುದು ಕಣ್ಗಳಿಗೆ ।
ನೊರೆ ಸೃಷ್ಟಿ ಪಾಲ್ ಬ್ರಹ್ಮ – ಮಂಕುತಿಮ್ಮ (ಪದ್ಯ 75)

ಒಂದು ಬೀಜನೆಟ್ಟರೆ ಅದು ಮರವಾಗಿ ಬೆಳೆದಾಗ ಬೀಜವೇ ವಿಸ್ತಾರ ವಾಗಿ ಮರವಾಗಿರುತ್ತದೆ. ಬೀಜ ಕಾಣಿಸುವುದಿಲ್ಲ. ಹಾಗೆಯೇ ಈ ಪ್ರಪಂಚ ಮೂಲತಃ ಭಗವಂತನ ಸೃಷ್ಟಿ ಯಾಗಿರುತ್ತದೆ. ಆದರೆ ಭಗವಂತ ಈ ಪ್ರಪಂಚದ ಸ್ವರೂಪದಲ್ಲಿ ಕಾಣಿಸಿಕೊಂಡಿರುತ್ತಾನೆ. ಗಿಡ, ಮರ, ಪಶು, ಪಕ್ಷಿ ಮಾನವ, ಗಾಳಿ ಬೆಳಕು. ಚಂದ್ರ, ಸೂರ್ಯ ಆಕಾಶ ಭೂಮಿ ಇತ್ಯಾದಿ ಎಲ್ಲವೂ ಅವನೇ ಆಗಿ ಮೂಲಸ್ವರೂಪ ನಮಗೆ ಕಾಣಿಸುವುದಿಲ್ಲ ಹಾಲಿನ ಪಾತ್ರೆಯಲ್ಲಿ ಬರಿನೊರೆಯೇ ಕಾಣುತ್ತದೆ. ಆದರೆ ನೊರೆ ಕೆಳಗೆ ಹಾಲಿರುತ್ತದೆ. ಮರಕಾಣಿಸಿದಾಗ ಅದು ಬೀಜದಲ್ಲಿ ಅಡಗಿರುತ್ತದೆ. ಹಾಗೆಯೇ ಜ್ಞಾನ, ಪ್ರತಿಭೆ ಸತ್ಯ, ಪಾಂಡಿತ್ಯ, ಸದ್ಗುಣ, ಗುರುವಿನ ಅನುಗ್ರಹ, ಹಿರಿಯರ ಮಾರ್ಗದರ್ಶನ ತಾಯಿತಂದೆಗಳ ಪೋಷಣೆ ಇವೆಲ್ಲ ಹೊರಗೆ ಕಾಣಿಸುವು ದಿಲ್ಲ. ಒಳಗೆಅಡಗಿರುತ್ತದೆ. ಹೊರಗೆ

ಅವು ಬೇರೆರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ನಾವು ನೊರೆಯನ್ನು ಗಮನಿಸಬೇಕಿಲ್ಲ ಅದರ ಕೆಳಗಿನ ಹಾಲನ್ನು ಗಮನಿಸಬೇಕು. ಹಾಗೇ ನಮ್ಮ ಅಭಿವೃದ್ಧಿ ಪ್ರಗತಿ ವಿಕಾಸ ಏಳಿಗೆ, ಹೊರಗೆ ನಾವು ಗಳಿಸುವ ಸಂಪತ್ತು ರ್‍ಯಾಂಕು, ಪ್ರಶಸ್ತಿ, ಅಧಿಕಾರ ಉದ್ಯೋಗ ವೈಭವ ಎಲ್ಲ ನೊರೆ ಇದ್ದಂತೆ. ಅದಕ್ಕೆ ಕಾರಣರಾದ ತಂದೆ ತಾಯಿಗಳು, ಗುರುಗಳು ಹಿರಿಯರು ಅವರ ತ್ಯಾಗ ಸೇವೆಗಳು ಹಾಲಿದ್ದಂತೆ. ಅವುಗಳನ್ನು ಕೃತಜ್ಞತೆಯಿಂದ ನೆನೆಯಬೇಕು. ಆದ್ದರಿಂದ ಸದಾದೇವರನ್ನೇ ನೆನೆಯಬೇಕು. ಜಗತ್ತನ್ನು ಕಂಡು ಮೆರೆಯಬಾರದು.

ಭಗವಂತನ ಆಟ-ಈ ಪ್ರಪಂಚ

16

ಬರೆವ ಹಲಗೆಯನೊಡೆದು ಬಾಲಕನು ತಾನದನು ।
ಮರಳಿಜೋಡಿಪೆನೆನ್ನುತಾಯಾಸಗೊಳುತ ॥
ಸರಿಚೌಕಗೈವಾಟದಲಿ ಜಗವ ಮರೆವಂತೆ ।
ಪರಬೊಮ್ಮ ಸೃಷ್ಟಿಯಲಿ–ಮಂಕುತಿಮ್ಮ । (ಪದ್ಯ 79)

ಈ ಪ್ರಪಂಚದಲ್ಲಿ ನಡೆಸುವ ಎಲ್ಲ ವ್ಯವಹಾರಗಳು ಚಟುವಟಿಕೆಗಳು ದೇವರ ಆಟ. ಆತ ವಿನೋದಪ್ರಿಯ. ಉತ್ತಮ ಕ್ರೀಡಾಪಟು. ಆಟದಲ್ಲಿ ಆನಂದ ಆತನಿಗೆ. ಅವನ ಲೀಲೆಗಳೆಲ್ಲ ಮುಗ್ಧಬಾಲಕನ ಆಟದಂತೆ. ಬಾಲಕ ತಾನು ಬರೆಯುವ ಹಲಗೆಯನ್ನು ಎತ್ತಿಹಾಕಿದಾಗ ಅಥವಾ ಕೈತಪ್ಪಿ ಬಿದ್ದಾಗ ಅದು ಒಡೆದು ಚೂರಾದಾಗ, ಆ ಚೂರುಗಳನ್ನು ಮರದ ಚೌಕಟ್ಟಿನಲ್ಲಿ ಜೋಡಿಸಲು ಒಂದೇ ಸಮನೆ ಪ್ರಯತ್ನಮಾಡುತ್ತಾನೆ. ಆಗ ಅವನಿಗೆ ಬೇರೆ ಕಡೆ ಗಮನವಿರುವುದಿಲ್ಲ. ಅದರಲ್ಲೇ ಮಗ್ನನಾಗಿರುತ್ತಾನೆ. ಹಾಗೆಯೇ ಭಗವಂತ ಈ ಪ್ರಪಂಚವೆಂಬ ಸ್ಲೇಟು ಚೂರು ಚೂರಾದಂತೆ ಆದಾಗ ಅದನ್ನು ಜೋಡಿಸುವುದರಲ್ಲೇ ತಲ್ಲೀನ ವಾಗಿರುತ್ತಾನೆ. ಎಂದರೆ ಜಗತ್ತಿನಲ್ಲಿ ಅನ್ಯಾಯ ಅಧಿಕವಾಗಿ ಜನರ ಆನಂದ–ಸುಖದೆಂಬುದು ಛಿದ್ರಛಿದ್ರವಾದಾಗ ಅದನ್ನು ಒಂದು ಗೂಡಿಸಲು ಪ್ರಯತ್ನಿಸುತ್ತಿರುತ್ತಾನೆ.

ದೇವರು-ಕಣ್ಣ ಮುಚ್ಚಾಲೆ ಆಟದ ಅಜ್ಜಿ

17

ಬನ್ನಿರಾಡುವ ಕಣ್ಣಮುಚ್ಚಾಲೆಯಾಟವನು ।
ಎನ್ನನರಸಿರಿ ಬನ್ನಿ ಮಕ್ಕಳಿರ ಬೇಗ ॥
ಬನ್ನಿರಾಟವ ಬೇಡವೆಂಬರನು ನಾಂ ಬಿಡೆನು ।
ಎನ್ನುವಜ್ಜಿಯೊ ಬೊಮ್ಮ–ಮಂಕುತಿಮ್ಮ ॥ (ಪದ್ಯ–82)

ಮನೆಯಂಗಳದಲ್ಲಿ ಅಜ್ಜಿಯ ಜತೆ ಮಕ್ಕಳು ಮೊಮ್ಮಕ್ಕಳು ಕಣ್ಣಾಮುಚ್ಚಾಲೆ ಆಟ ಆಡುವುದು ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿತ್ತು (ಅಜ್ಜಿ ಒಂದು ಕಡೆ ಕುಳಿತು ಒಬ್ಬ ಮಗುವಿನ ಕಣ್ಣನ್ನು ಮುಚ್ಚಿದಾಗ ಉಳಿದ ಮಕ್ಕಳು ಬಚ್ಚಿಟ್ಟುಕೊಳ್ಳುತ್ತಾರೆ. ಮನೆಯಲ್ಲಿ ಮಾಡ ಹಿಂದೆ, ಪೊದೆ ಹಿಂದೆ, ಕಂಬದ ಹಿಂದೆ, ಆಗ ವಿಶಾಲ ಅಂಗಳ ಹಿತ್ತಲು ಇರುತ್ತಿತ್ತು. ಕಣ್ಣುಬಿಟ್ಟ ಮಗು ಅವರನ್ನು ಹುಡುಕುತ್ತದೆ. ಸಿಕ್ಕಿಕೊಂಡವರು. ಔಟ್ ಆಗುತ್ತಾರೆ. ಕಣ್ಣು ಮುಚ್ಚಾಲೆ ಆಟ ಹಲವಾರು ರೀತಿ ಇದೆ. ಈ ಪದ್ಯದಲ್ಲಿ ಅಜ್ಜಿಯೇ ಬಚ್ಚಿಟ್ಟುಕೊಳ್ಳುವ ಕಣ್ಣು ಮುಚ್ಚಾಲೆ ಆಟವನ್ನು ಹೇಳುತ್ತಾಳೆ. ಆಟ ಆಡಲು ಬರುವುದಿಲ್ಲ ಎಂಬ ಮಕ್ಕಳನ್ನು ಬಿಡುವುದಿಲ್ಲ. ನೀವೆಲ್ಲಾ ಮಕ್ಕಳು ಬರಲೇ ಬೇಕು ಎಂಬ ಬಲವಂತ ಮಾಡುತ್ತಾಳೆ (ಬೇಡ ವೆಂಬರನು ನಾಂಬಿಡೆನು) ಅದೇ ರೀತಿಯಾಗಿ ಈ ಜಗತ್ತಿನಲ್ಲಿ

ನಡೆಯುವ ಎಲ್ಲ ಚಟುವಟಿಕೆಗಳು, (ವ್ಯಾಪಾರ, ವಿದ್ಯಮಾನ, ವ್ಯವಹಾರ, ಚಲನ ವಲನಗಳು) ಕಣ್ಣಮುಚ್ಚಾಲೆ ಆಟವಿದ್ದಂತೆ ಮುಚ್ಚುಮರೆ ಉಳ್ಳದ್ದು. ಇವೆಲ್ಲಾ ಪರಮಾತ್ಮನ ಆಟ. ಪರಮಾತ್ಮನೇ ಅಜ್ಜಿ ಇದ್ದಂತೆ ಎಂದು ಹೇಳಲಾಗಿದೆ. ಇದರರ್ಥ ಈ ಪ್ರಪಂಚದಲ್ಲಿ ನಡೆಯುವ ಎಲ್ಲಾ ಕೆಲಸ ಕಾರ್ಯ ಚಟುವಟಿಕೆಗಳು ಪರಮಾತ್ಮನ ಅನುಗ್ರಹದಿಂದ ನಡೆಯುತ್ತದೆ. ಇದರರ್ಥ ಎಲ್ಲರ ಹಿಂದೆ ದೇವರಿದ್ದಾನೆ ಎಂದು ತಿಳಿಯಬೇಕು.

ಪ್ರಪಂಚದ ಕಥೆ

18

ಅವುದಿರುವಿಕೆಗಾದಿ? ಎಂದು ಸೃಷ್ಟಿಯ ಮೊದಲು ?।
ಅವುದಬ್ಧಿಯ ತೆರೆಗಳಲ್ಲಿ ಮೊಟ್ಟಮೊದಲು ?।
ಅವುದೆಲರಿನ ನಿಲ್ಲದಲೆತಕ್ಕೆ ಪಡುಸೀಮೆ? ।
ಈ ವಿಶ್ವಕಥೆಯಂತು–ಮಂಕುತಿಮ್ಮ ॥ (ಪದ್ಯ–90)

ಯಾರು ಮೊದಲು? ಯಾರು ಕೊನೆ? ಯಾವುದು ಪ್ರಾರಂಭದಲ್ಲಿ ಹೇಗಿತ್ತು? ಆ ಮೇಲೆ ಏನಾಯಿತು? ಎಂಬ ಪ್ರಶ್ನೆಗಳು ಅನೇಕ ಸಂದರ್ಭಗಳಲ್ಲಿ ಬಹಳ ಜನರಿಗೆ ಉದ್ಭವಿಸುತ್ತದೆ. ಕಿರಿಯರಿಗೂ ಈ ರೀತಿ ಪ್ರಶ್ನೆಗಳು ಮನಸ್ಸಿಗೆ ಬರುವುದುಂಟು. ನಾವು ವಾಸಮಾಡುವ ಪ್ರಪಂಚ ಎಂದರೆ ಗಿಡ, ಮರ, ಹಕ್ಕಿ, ಹಾವು, ಹುಲಿ, ಸಿಂಹ ಬೆಟ್ಟ–ಗುಡ್ಡ ಇತ್ಯಾದಿ ಇರುವ ಈ ಪ್ರಪಂಚ ಯಾವಾಗ ಹುಟ್ಟಿತು? ಇದರ ಸೃಷ್ಟಿಕರ್ತ ಯಾರು? ಇವುಗಳಲ್ಲಿ ಮೊದಲು ಹುಟ್ಟಿದವು ಯಾವುವು? ಸಮುದ್ರದಲ್ಲಿ ಅಲೆಗಳು ತೆರೆತೆರೆಯಾಗಿ ಏರುತ್ತಾ ಇರುತ್ತವೆ. ಈ ಅಲೆಗಳಲ್ಲಿ ಮೊದಲು ಹುಟ್ಟಿದ ಅಲೆ ಯಾವುದು? ಯಾರು ಬಲ್ಲರು? ಗಾಳಿ ಎಲ್ಲಾ ಕಡೆ ಬೀಸುತ್ತಿರುತ್ತದೆ (ಗಡಿಸೀಮೆ) ಅದಕ್ಕೆ ಕೊನೆ ಮೊದಲು ಎಲ್ಲಿದೆ?

ಎಲ್ಲಿ ಶುರುವಾಗುತ್ತದೆ ಎಲ್ಲಿ ನಿಲ್ಲುತ್ತದೆ? ತಿಳಿಯದು. ಹೀಗೆ ನಾವಿರುವ ಜಗತ್ತಿನಲ್ಲಿ ಆಕಾಶ ಪ್ರಪಂಚ, ಮೊದಲಾದವು ಯಾವಾಗ ಪ್ರಾರಂಭವಾಯಿತು. ಯಾವರೀತಿ ಚಲಿಸುತ್ತಿವೆ ಬೆಳೆಯುತ್ತಿವೆ ಹೇಗೆ ಅಂತ್ಯಗೊಳ್ಳುತ್ತವೆ. ಇವುಗಳ ಚರಿತ್ರೆಯನ್ನು ಯಾರೂ ಹೇಳಲಾರದು. ಯಾರಿಗೂ ತಿಳಿಯದು. ಈ ಎಲ್ಲ ಪ್ರಶ್ನೆಗಳು ಕುತೂಹಲಕ್ಕೆ ಕಾರಣವಾಗಿದೆ. ಉತ್ತರವನ್ನು ಬಲ್ಲವರಿಲ್ಲ ಏಕೆಂದರೆ ಇವುಗಳನ್ನು ತಿಳಿದವನು ದೇವರೊಬ್ಬನೇ ಇನ್ನಾರೂ ಅಲ್ಲ.

ಶ್ಯಾಮಸುಂದರನವನೆ ಚಕ್ರಿ ನರಹರಿಯಂತೆ

19

ಶ್ಯಾಮಸುಂದರನವನೆ ಚಕ್ರಿ ನರಹರಿಯಂತೆ ।
ಸೋಮಶಂಕರನೆ ಭೈರವ ರುದ್ರನಂತೆ ॥
ಹೈಮವತಿ ಶಿವೆ ತಾನೆ ಕಾಳಿ ಚಂಡಿಕೆಯಂತೆ ।
ಪ್ರೇಮ ಘೋರಗಳೊಂದೆ!– ಮಂಕುತಿಮ್ಮ ॥(ಪದ್ಯ–95)

ಜಗತ್ತಿನಲ್ಲಿ ಎಲ್ಲೂ ಎರಡು ಬಗೆಯಲ್ಲಿ ಕಾಣುತ್ತವೆ. ಒಳ್ಳೆಯದು–ಕೆಟ್ಟದ್ದು, ಬೇಕಾದುದು–ಬೇಡವಾದುದು; ಚಿಕ್ಕದು–ದೊಡ್ಡದು; ಉಪಕಾರದ್ದು ಅಪಕಾ ರದ್ದು, ಸುಂದರವಾದುದ್ದು ಘೋರವಾದುದ್ದು; ಪ್ರೀತಿ ಉಂಟು ಮಾಡುವುದು–ಹೆದರಿಕೆ ಉಂಟುಮಾಡುವುದು ಹೀಗೆ ಎರಡೆರಡು ಬಗೆಗಳಲ್ಲಿ ಕಾಣುತ್ತವೆ. ಇದಕ್ಕೆ ನಮ್ಮಲ್ಲಿ ದೇವರು ಅವತಾರವೆತ್ತಿದ ಕಥೆಗಳೂ, ಪುರಾಣ, ಇತಿಹಾಸದ ಪ್ರಸಂಗಗಳೂ ಉದಾಹರಣೆಗಳಾಗಿವೆ. ಇವೆಲ್ಲಾ ಒಂದಕ್ಕೊಂದು ಬೇರೆಬೇರೆ ಯಾಗಿ ಪರಸ್ಪರ ವಿರುದ್ಧವಾಗಿ ಕಂಡರೂ. ಒಂದೇ ನಾಣ್ಯದ ಎರಡು ಮುಖ ಗಳಿದ್ದಂತೆ, ಹಗಲು ರಾತ್ರಿ ಸೇರಿ ಒಂದೇ ದಿನವೆಂದಂತೆ ಎಲ್ಲವೂ ದೇವರ ಸ್ವರೂಪವೇ ಆಗಿದೆ. ಅವನಿಚ್ಛೆಯೇ ಆಗಿದೆ. ಇದಕ್ಕೆ ಅನೇಕ ಉದಾಹರಣೆ ಗಳನ್ನು ಕಾಣಬಹುದು. ದೇವರು ಹತ್ತಾರು ಅವತಾರಗಳೆತ್ತಿದ್ದಾನೆ.

ನೀಲ ವರ್ಣದ ಸುಂದರನಾದ ಕೃಷ್ಣನಾಗಿ ಪ್ರೇಮರೂಪಿಯಾಗಿದ್ದಾನೆ (ಶ್ಯಾಮ ಸುಂದರ) ಶಿಶುಪಾಲವಧೆಗೆ ಚಕ್ರ ಹಿಡಿದು, ಘೋರನಾಗಿ ಕಾಣಿಸಿದ್ದಾನೆ. (ಚಕ್ರ) ಹಿರಣ್ಯಕಶಿಪುವನ್ನು ಕೊಲ್ಲಲು ನರಸಿಂಹ (ನರಹರಿ) ಯಾಗಿದ್ದಾನೆ. ಅಂತೆಯೇ ಸೌಮ್ಯರೂಪ ತಾಳಿ ಪ್ರಶಾಂತನಾದ ಚಂದ್ರಶೇಖರನೂ (ಸೋಮಶಂಕರ) ಅವನೇ. ಇನ್ನು ಉಗ್ರರೂಪದಲ್ಲಿ ರುಂಡಮಾಲಾಧರ ಭೈರವರೂಪನೂ ರುದ್ರನೂ ಆಗಿದ್ದಾನೆ. ಇನ್ನು ಹಿಮವಂತನ ಮಗಳಾಗಿ (ಹೈಮವತಿ) ಪಾರ್ವತಿ ಯೂ ಮಂಗಳಸ್ವರೂಪಳೂ ಲೋಕ ಸುಂದರಿಯೂ ಆಗಿರುವಂತೆಯೇ ಭಯಂಕರರೂಪ ತಾಳಿದ ಮಹಾಕಾಳಿ, ಚಂಡಿಕಾ ದೇವಿಯೂ ಆಗಿದ್ದಾಳೆ. ಆದ್ದರಿಂದ ಲೋಕದಲ್ಲಿ ಕಾಣುವ ಪ್ರೇಮರೂಪ-ಘೋರರೂಪದ ಶಕ್ತಿಗಳೂ, ವಸ್ತುಗಳು ದೇವತೆಗಳು ಎಲ್ಲವೂ ಭಗವಂತನ ರೂಪಗಳೇ ಆಗಿವೆ, ಬೇರೆಬೇರೆ ಅಲ್ಲ ಎಂದು ತಿಳಿಯಬೇಕು.

ಕಾಲ ಅಕ್ಷಯದೀಪ

20

ಕಾಲವಕ್ಷಯದೀಪವದರ ಪಾತ್ರೆಯಪಾರ ।
ಬಾಳ್ ಅದರಿನಾದೊಂದು ಕಿರುಹಣತೆ ಮಿಣುಕು ॥
ಗಾಳಿಯಾರಿಪುದೊಂದನಿನ್ನೊಂದ ಹೊತ್ತಿಪುದು ।
ತೈಲಧಾರೆಯಖಂಡ–ಮಂಕುತಿಮ್ಮ ॥ (ಪದ್ಯ–104)

ಕಾಲ ಎಂಬುದು ಯಾವತ್ತಿಗೂ ಆರದ ನಂದಾದೀಪ. ಏಕೆಂದರೆ ದೀಪಕ್ಕೆ ಎಣ್ಣೆಯಿರುವ ಪಾತ್ರೆ ದೊಡ್ಡದು ವಿಶಾಲವಾದುದು ಮುಗಿಯದ ಪ್ರಮಾಣದ ಎಣ್ಣೆ. ಹಾಗಾಗಿ ದೀಪ ಆರುವುದಿಲ್ಲ ಎಣ್ಣೆ ಮುಗಿಯುವುದಿಲ್ಲ. ಅದರಿಂದ ಹೊತ್ತಿಸಿದ ಸಣ್ಣ ಕಿರುಹಣತೆ ನಮ್ಮ ಬಾಳು. ಈ ಬಾಳು ಮಿನುಗುವ ದೀಪ. ಬೆಳುಗುತ್ತೆ. ಆದರೆ ಆರುತ್ತೆ ಆದರೆ ಆರಿದ ದೀಪವನ್ನು ನಿರಂತರವಾಗಿ ಉರಿಯುವ ನಂದಾದೀಪದಿಂದ ಹತ್ತಿಸಿಕೊಳ್ಳುವುದು. ಕಾಲ ಎಂಬ ಅಕ್ಷಯದೀಪ. ನಮ್ಮ ಬಾಳು ನಿರ್ದಿಷ್ಟ ಆಯುಷ್ಯನಂತರ ಮುಗಿಯುತ್ತದೆ. ಅದು ಮರಣ. ಮತ್ತೆ ನಮ್ಮ ಕರ್ಮಾನುಸಾರ ಇನ್ನೆಲ್ಲೋ ಇರುತ್ತೇವೆ. ಅಥವಾ ಜನಿಸುತ್ತೇವೆ. ಅದು ಜನನ. ಗಾಳಿ ದೀಪವನ್ನು ಆರಿಸಿದಾಗ ಮತ್ತೆ ಅದನ್ನು ಹೊತ್ತಿಸಿದಂತೆ ಸತತವಾಗಿ ಆತ್ಮ ಬೆಳಗುತ್ತಲೇ ಇರುತ್ತದೆ.

ಮುಗಿಯದ ಎಣ್ಣೆಯ ಬಟ್ಟಲಲ್ಲಿರುವ ದೀಪ ಆರದು. ಕಾಲ ಹಾಗೆ. ಅದಕ್ಕೆ ಆದಿ ಅಂತ್ಯಗಳಿಲ್ಲ. ಸದಾ ಪ್ರವಹಿಸುವ ತೈಲಧಾರೆ ಅದರದು ಅಖಂಡ. ಹುಟ್ಟು ಸಾವುಗಳಿಲ್ಲದ ಆತ್ಮ ಅದು. ಹೀಗೆ ಜಗತ್ತಿನಲ್ಲಿ ಕಾಲವೆಂಬುದು ಸತ್ಯನಿರಂತರ. ಶಾಶ್ವತ ಅದರಲ್ಲಿ ಬಂದು ಹೋಗುವ ಜೀವಕೋಟಿ ಹುಟ್ಟು ಸಾವುಗಳಿಂದ ಕೂಡಿರುತ್ತದೆ ನಶ್ವರ ಜೀವಿಗಳಾಗಿರುತ್ತಾರೆ.

ನಾಸ್ತಿಕ-ಭಕ್ತ-ವಿಜ್ಞಾನಿ-ಮುನಿ

21

ಅಜ್ಞಾತವಾದುದನಭಾವವೆನೆ ನಾಸ್ತಿಕನು।
ಅಜ್ಞೇಯವೆಂದದಕೆ ಕೈ ಮುಗಿಯೆ ಭಕ್ತ ॥
ಜಿಜ್ಞಾಸ್ಯವೆಂದು ಪರಿಕಿಸತೊಡಗೆ ವಿಜ್ಞಾನಿ ।
ಸ್ವಜ್ಞಪ್ತಿಶೋಧಿ ಮುನಿ–ಮಂಕುತಿಮ್ಮ ॥ (ಪದ್ಯ–107)

ನಮಗೆ ತಿಳಿಯದೆ ಇರುವುದು, ಕಾಣದೆ ಇರುವುದು ಅಜ್ಞಾತವಾದುದು ಎನ್ನುವವನು ನಾಸ್ತಿಕನು. ದೇವರು ಎಂದರೇನು ತಿಳಿಯುವುದಿಲ್ಲ, ಕಾಣುವುದಿಲ್ಲ ಆದ್ದರಿಂದ ದೇವರಿಲ್ಲ ಎನ್ನುತ್ತಾನೆ. ನಾಸ್ತಿಕನು, ನಮಗೆ ಎಟುಕದೇ ಇದ್ದರೂ ನಮ್ಮ ಅರಿವಿಗೆ ಅನುಭವಕ್ಕೆ ಬರದಿದ್ದರೂ (ಅಜ್ಞೇಯವಾಗಿದ್ದರೂ) ಅದು ಇದೆ ಅದು ಸತ್ಯವಾದುದು ಎಂದು ನಂಬಿರುತ್ತಾನೆ. ಅದಕ್ಕೆ ಕೈಮುಗಿದು ನಮಸ್ಕರಿಸುತ್ತಾನೆ, ಅವನೇ ಭಕ್ತ. ವಿಜ್ಞಾನಿ ಆದವನು, ಅದು ಇದೆ ಎಂಬುದು ನಿಜವಾದರೆ ನಮಗೆ ತಿಳಿಯಬೇಕು ನಮ್ಮ ಅನುಭವಕ್ಕೆ ಬರಬೇಕು ಎನ್ನುತ್ತಾನೆ. ಅದರ ಬಗ್ಗೆ ವಿಚಾರಮಾಡುತ್ತಾನೆ. ಪ್ರಯತ್ನಮಾಡುತ್ತಾನೆ. ಅವನೇ ಪ್ರಯೋಗಶೀಲ ವಿಜ್ಞಾನಿ.

ಇನ್ನು ಮುನಿ (ಋಷಿ) ಆದವನು ತನ್ನ ಒಳಮನಸ್ಸನ್ನು ಪರಿಶುದ್ಧ ವಾಗಿಟ್ಟುಕೊಂಡು ನಿರ್ಮಲಜ್ಞಾನದಿಂದ ತಾನು

ತಿಳಿದಿರುವುದನ್ನು ಶ್ರವಣ ಮನನ ನಿಧಿಧ್ಯಾಸನಗಳಿಂದ ಶೋಧಿಸಿ ಒಳಬೆಳಕನ್ನು ದರ್ಶನವನ್ನು ಕಾಣುತ್ತಾನೆ. ಆದ್ದರಿಂದ ಮುನಿಯನ್ನು ಸ್ವಜ್ಞಪ್ತಿಶೋಧಿ ಎನ್ನುತ್ತಾರೆ. ಲೋಕದಲ್ಲಿ ಗೊತ್ತಿಲ್ಲದ್ದನ್ನು ನಂಬುವುದಿಲ್ಲ ನಾಸ್ತಿಕ ಗೊತ್ತಿಲ್ಲದಿದ್ದರೂ ಇದ್ದಾನೆಂದು ನಂಬುವನು ಭಕ್ತ ಗೊತ್ತಿದ್ದನ್ನು ಪರಿಶೀಲಿಸಿ ಪ್ರಯೋಗಿಸಿ ಸತ್ಯವನ್ನು ಶೋಧಿಸುವವನು. ಮುನಿ ಹೀಗೆ ಮೂರು ಬಗೆ ಜನರನ್ನು ಈ ಪ್ರಕಾರದಲ್ಲಿ ಕಾಣುತ್ತೇವೆ.

ಬಾಳಿಗೆ ಚೈತನ್ಯವೇ ಆಧಾರ

22

ಶಿಲೆಯಾಗಿ ನಿದ್ರಿಸುತ್ತಿರ್ದಾಕೆ ರಾಮಪದ ।
ತಲದ ಸಂಸ್ಪರ್ಶದಿಂದೆದ್ದು ನಿಂತಂತೆ ॥
ಚಲಿಸದೆನಿಸಿದ ಜಡವನಾವ ಗಾಳಿಯೊ ಸೋಕೆ ।
ಬಲ ತೀವಿ ಚಲಿಪುದದು–ಮಂಕುತಿಮ್ಮ ॥ (ಪದ್ಯ 109)

ಜಗತ್ತಿನಲ್ಲಿ ಚಲಿಸದ ಜಡವಸ್ತು, ಚಲಿಸುವ ಚೈತನ್ಯದ ವಸ್ತು ಎಂಬುದಾಗಿ ಎರಡು ಬಗೆ ಇವೆ. ಜಡವಸ್ತುವಿಗೆ ಚೈತನ್ಯ ಬಂದರೆ ಜೀವ ಬರುತ್ತದೆ. ಆ ಚೈತನ್ಯವೇ ದೇವರು. ಗಾಳಿಬೀಸಿದಾಗ ಎಲೆ ಮೊದಲಾದ ವಸ್ತುಗಳೆಲ್ಲ ಚಲಿಸತೊಡಗುತ್ತವೆ. ಬಲವಾಗಿ ಗಾಳಿಬೀಸಿ, ಬಿರುಗಾಳಿ ಸುಂಟರಗಾಳಿ ಆದರೆ ದೊಡ್ಡದೊಡ್ಡ ಬಂಡೆಯಂಥ ವಸ್ತುಗಳು ಚಲಿಸು ತ್ತವೆ. ಭಗವಂತನ ಅನುಗ್ರಹ ಕೇವಲ ವಸ್ತುಗಳನ್ನು ಚಲಿಸುವ ಗಾಳಿ ಅಷ್ಟೇ ಅಲ್ಲ, ಪವಿತ್ರಗೊಳಿಸುವ ಶಕ್ತಿ ಆಗಿದೆ. ಶ್ರೀರಾಮನಪಾದ ಸೋಂಕಿದ ಕೂಡಲೇ ಜಡಶಿಲೆ ಆಗಿದ್ದ ಅಹಲ್ಯೆ ಪುನರ್‌ಜನ್ಮಪಡೆದು ಧನ್ಯಳಾದಳು. ಆದ್ದರಿಂದ ಚೈತನ್ಯರೂಪವೇ ಭಗವಂತ. ಬದುಕಿರುವ ಜೀವಿಗಳೆಲ್ಲದರಲ್ಲಿ ಭಗವಂತನಿದ್ದಾನೆ ಎಂದು ತಿಳಿಯಬೇಕು.

ಚೈತನ್ಯವಿದ್ದರೆ ಜಡಜೀವವಾಗುತ್ತದೆ. ಚೈತನ್ಯ ರಹಿತವಾದರೆ ಜೀವ ಜಡವಾಗುತ್ತದೆ. ಚೈತನ್ಯ ಎಂದರೆ ಜೀವಶಕ್ತಿ ಪರಮಾತ್ಮನ ಸ್ವರೂಪ ಎಂಬ ತತ್ತ್ವ ಇಲ್ಲಿದೆ.

ಜೀವಿ-ಭೂಮಿ-ಆಕಾಶಗಳ ಫಲ

23

ನಾವುಣ್ಣುವನ್ನಗಳು ನಾವು ಕುಡಿವುದಕಗಳು ।
ನಾವುಸಿರುವೆಲರುಗಳು ನಾವುಡುವ ವಸ್ತ್ರ ॥
ಭೂವ್ಯೋಮಗಳ ಯಂತ್ರ ಸಂಘದುತ್ಪನ್ನಗಳು ।
ಜೀವವೆರಡರ ಶಿಶುವು–ಮಂಕುತಿಮ್ಮ ॥ (ಪದ್ಯ 119)

ನಾವು ಎಂದರೆ ಮನುಷ್ಯರು ಹೇಗೆ ರೂಪುಗೊಂಡಿದ್ದೇವೆ ಎಂಬುದನ್ನು ಡಿವಿಜಿ ಇಲ್ಲಿ ಸರಳವಾಗಿ ತಿಳಿಸಿದ್ದಾರೆ. ಪ್ರಕೃತಿಯಲ್ಲಿ ಸಿಗುವ ಬೆಳೆಗಳನ್ನು ಆಹಾರವಾಗಿ ತಿನ್ನುತ್ತೇವೆ. ಭೂಮಿಯಲ್ಲಿ ಸಿಗುವ ನದಿ, ಝರಿ, ಕೆರೆ, ಬಾವಿ ಜಲಪಾತ ಮೊದಲಾದವುಗಳಲ್ಲಿ ಸಿಗುವ ನೀರನ್ನು (ಉದಕ) ಕುಡಿಯುತ್ತೇವೆ. ಇನ್ನು ನಾವು ಗಾಳಿ (ಎಲರು)ಯನ್ನು ಉಸಿರಾಡುತ್ತೇವೆ ಸಸ್ಯಗಳಿಂದ. ಇತರ ವಸ್ತುಗಳಿಂದ ಸಿದ್ಧಪಡಿಸುವ ಬಟ್ಟೆಗಳನ್ನು ಉಡುತ್ತೇವೆ. ಇವೆಲ್ಲದರಿಂದ ನಮ್ಮ ಜೀವನ ಸಾಗಿದೆ. ನಾವು ಬದುಕಿದ್ದೇವೆ. ಅಂದರೆ ಇವೆಲ್ಲ ಭೂಮಿ ಮತ್ತು ಆಕಾಶಗಳು (ಭೂವ್ಯೋಮಗಳು) ಸೇರಿ ಉಂಟುಮಾಡಿರುವ ಜೀವಾಧಾರವಾದ ಪದಾರ್ಥಗಳಾಗಿವೆ.

(ಯಂತ್ರ ಸಂಘದುತ್ಪನ್ನಗಳು) ಹೀಗೆ ಪ್ರಕೃತಿ, ಗಗನಗಳ ಸಂಘಟನೆ, ಸೃಷ್ಟಿವಸ್ತುಗಳಿಂದ ನಮ್ಮ ಪ್ರಾಣ, ಚೈತನ್ಯ ಜೀವ ಈ ಜಗತ್ತಿನಲ್ಲಿ ಉಳಿದುಕೊಂಡಿದೆ. ನಾವೆಲ್ಲ ಬಾಳನ್ನು ಸಾಗಿಸುತ್ತಿದ್ದೇವೆ.

ಇದನ್ನು ಅರ್ಥಮಾಡಿಕೊಂಡು ನಿಸರ್ಗ ಮಾಲಿನ್ಯ, ವಾಯುಮಾಲಿನ್ಯ ಮಾಡಬಾರದು. ಎಂದರೆ ಗಿಡಮರ, ನೀರು, ಗಾಳಿ ಮೊದಲಾದುವನ್ನು ಹಾಳು ಮಾಡಬಾರದು. ನಾವು ನಿರ್ಮಲವಾಗಿ ಬದುಕಿರುವುದೇ ಅವುಗಳಿಂದ ಎಂದು ತಿಳಿಯಬೇಕು.

ನಾವು ಹೊಸಬರಲ್ಲ

24

ರಾಮನಡಿಯಿಟ್ಟ ನೆಲ, ಭೀಮನುಸಿರಿದ ಗಾಳಿ ।
ವ್ಯೋಮದೆ ಭಗೀರಥಂ ತಂದ ಸುರತಟಿನಿ ॥
ಸೋಮನಂ ಪೆತ್ತ ಕಡಲೀ ಪುರಾತನಗಳಿರೆ ।
ನಾಮೆಂತು ಹೊಸಬರೆಲೊ–ಮಂಕುತಿಮ್ಮ ॥(ಪದ್ಯ 130)

ಈ ಜಗತ್ತು ಹಳೆಯದು. ಸಂಸ್ಕೃತಿ ಪರಂಪರಾಗತವಾಗಿ ಬಂದಿದೆ. ಒಂದರ್ಥದಲ್ಲಿ ಹೊಸದೆಂಬುದೇ ಇಲ್ಲ. ಹೊಸದು ಎಂದರೆ ಹಳೆಯದರ ಇನ್ನೊಂದು ರೂಪ ಅಷ್ಟೆ. ನಾವು ವಾಸಿಸುವ ದೇಶ ಒಂದು ಕಾಲದಲ್ಲಿ ಶ್ರೀರಾಮನು ಆಳಿದ ನೆಲ. ಮಹಾಭಾರತದ ಭೀಮಾದಿಗಳು ಉಸಿರಾಡುತ್ತಿದ್ದ ಗಾಳಿಯ ಪ್ರದೇಶದಲ್ಲೇ ನಾವಿದ್ದೇವೆ. ನಮ್ಮ ದೇಶದ ಗಂಗಾನದಿ ಭಗೀರಥನು ತನ್ನ ಸಾಹಸದಿಂದ ಆಕಾಶದಿಂದ ಧರೆಗಿಳಿಸಿದ ನದಿ. ರಾತ್ರಿಯ ಕಾಲದ ಚಂದ್ರ, ಪುರಾಣಕಾಲದ ಸಮುದ್ರಮಥನದಲ್ಲಿ ಬಂದವನು. ಹೀಗೆ ಗಾಳಿ, ನೀರು,ಬೆಳಕು ಎಲ್ಲಾ ಪ್ರಾಚೀನವಾಗಿರುವಾಗ ಅದರಲ್ಲಿ ವಾಸಿಸುವ ನಾವು ಹೊಸಬರಲ್ಲ ನಮ್ಮದು ಹೊಸದೇನಲ್ಲ ಎಂಬುದಾಗಿ ನಾವು ತಿಳಿಯಬೇಕು.

ಹೊಸತರಲ್ಲಿ ಹಳೆಯದಿದೆ

25

ಹಳೆಸೂರ್ಯ ಹಳೆಚಂದ್ರ ಹಳೆಭೂಮಿ ಹಳೆನೀರು ।
ಹಳೆಹಿಮಾಚಲಗಂಗೆ ಹಳೆವಂಶಚರಿತೆ ॥
ಹಳೆಯವಿವು ನೀನಿದರೊಳಾವುದನು ಕಳೆದೀಯೊ?
ಹಳದು ಹೊಸತರೊಳಿರದೆ?– ಮಂಕುತಿಮ್ಮ ॥(ಪದ್ಯ141)

ನಮ್ಮಲ್ಲಿ ಸಾಹಿತಿಗಳು, ವಿಜ್ಞಾನಿಗಳು, ಕಲಾವಿದರು ಸಾಹಿತ್ಯ ಸಂಶೋಧನೆ, ಚಿತ್ರ–ವಿಚಿತ್ರ ಸೃಷ್ಟಿಯ ಶಿಲ್ಪ, ಚಿತ್ರ, ನಾಟ್ಯ ಮೊದಲಾದ ಕಲೆಗಳಲ್ಲಿ ಹೊಸದನ್ನು ಇದುವರೆಗೆ ಇಲ್ಲದನ್ನು ಸೃಷ್ಟಿಸಿದ್ದೇವೆ. ಇವು ನನ್ನದೇ ತಯಾರಿ ಎಂದು. ಬೀಗುತ್ತಾರೆ. ಅಹಂಕಾರಪಡುತ್ತಾರೆ. ಒಂದರ್ಥದಲ್ಲಿ ಸ್ವಲ್ಪ ಮಟ್ಟಿಗೆ ನಿಜ. ಆದರೆ ಪೂರ್ತಿ ನಿಜವಲ್ಲ. ಏಕೆಂದರೆ ನಮಗೆ ಬೆಳಕು, ಶಾಖ ಕೊಡುವ, ಬೆಳೆಯ ಸೃಷ್ಟಿಗೆ ನೆರವಾಗುವ ಸೂರ್ಯ ಹೊಸಬನೇ? ಬೆಳು ದಿಂಗಳು ಕೊಡುವ ಚಂದ್ರ, ನಾವು ವಾಸಮಾಡುವ ನೆಲ, ಗಂಗಾನದಿ, ಹೊಳೆಗಳು, ಹಿಮಾಲಯ, ವಿಂಧ್ಯ ಮೊದಲಾದ ಪರ್ವತಗಳು ಇತ್ಯಾದಿ ಪ್ರಾಚೀನವಾದವು.

ನಮ್ಮ ವಂಶದ ಹಿರಿಯರ ಇತಿಹಾಸ, ಇವುಗಳನ್ನು ಗಮನಿಸಿದಾಗ ಇವುಗಳಾವುವೂ ಇಲ್ಲದೆ ನಾವು ಇವೆಲ್ಲವನ್ನು

ತೊರೆದು. ಏನನ್ನು ಸೃಷ್ಟಿಸು ತ್ತೇವೆ ಹೇಗೆ ಸಾಧ್ಯ? ನಾವು ಹೊಸದು ಎಂಬುದನ್ನು ಆಳವಾಗಿ ಗಮನಿಸಿ ದರೆ ಅದರಲ್ಲಿ ಹಳೆಯ ಭೂಮಿ, ನೀರು ಆಕಾಶದ ಅಂಶಗಳೆಲ್ಲ ಸೇರಿ ಕೊಂಡಿವೆ. ಉದಾಹರಣೆಗೆ ಕಾಫಿ, ಟೀ, ಕಷಾಯಗಳಲ್ಲಿ ನೀರು ಹಳೆಯದು, ಹೊಸ ರೀತಿಯ ಅಡಿಗೆ ಆಹಾರಗಳು ನೂರಾರು ವರ್ಷಗಳಿಂದ ಬೆಳೆಯುತಿ ರುವ ಸಸ್ಯಗಳ ಬಳಕೆಯದು. ಉಡುವಬಟ್ಟೆಯ ನಾರು ಹಳೆಯದು ಸೂರ್ಯನ ಶಾಖ ಸಂಗ್ರಹಿಸಿಕೊಡುವ ಸೋಲಾರ್ ಯಂತ್ರ ನೋಡಲು ಹೊಸದು ಅದಕ್ಕೆ ಬೇಕಾದ ಬಿಸಿಲು ಕೊಡುವ ಸೂರ್ಯ ಲಕ್ಷಾಂತರ ವರ್ಷ ದಷ್ಟು ಹಳಬ. ಹೀಗೆ ಎಲ್ಲದರಲ್ಲಿ ಅಡಗಿರುವ ಹಳೆಯದಾವುದನ್ನು ಬಿಡಲು (ಕಳೆಯಲು) ಸಾಧ್ಯವಿಲ್ಲ. ಆದ್ದರಿಂದ ಹಳೆ ಯದು ಹೊಸದರಲ್ಲಿ ಅಡಗಿದೆ. ಆದಕಾರಣ ನಮ್ಮ ಸೃಷ್ಟಿಯಲ್ಲಿ ಪೂರಾ ಹೊಸದಿಲ್ಲ.

ಹಳೆಯದೇ ಹೊಸದು

26

ಪೊಸರಸಂ ಬೇರಿಗನುದಿನಮೊದವಿ ಧರೆಯಿಂದ ।
ಸಸಿಗೆ ಹೊಸತಳಿರ ತಲೆಯಲಿ ಮುಡಿಸುವಂತೆ ॥
ಹೊಸ ಸೃಷ್ಟಿಸತ್ತ್ವಮೆತ್ತಣಿನೊ ಬರುತನುದಿನಂ ।
ಪೊಸತಾಗಿಪುದು ಜಗವ –ಮಂಕುತಿಮ್ಮ ॥ (ಪದ್ಯ 154)

ಈ ಭೂಮಿಯಲ್ಲಿ ನೀರು, ಸಸ್ಯ, ಗಾಳಿ, ಬೆಳಕು ಎಲ್ಲವೂ ಹಳೆಯದು. ನಿಜ, ಆದರೆ ಅವು ನಿತ್ಯನೂತನವಾದವು ಎಂದರೆ, ದಿನದಿನವೂ ಹೊಸ ರೂಪ ತಾಳುತ್ತವೆ. ಹೊಸದನ್ನು ದಿನವೂ ಸೃಷ್ಟಿಸುತ್ತವೆ. ಗಿಡಮರ ಬಳ್ಳಿ ಹೂಗಳನ್ನು ಹೊಸದಾಗಿ ಮೂಡಿಸುತ್ತವೆ. ನೂರಾರು ವರ್ಷಗಳಿಂದ ಗಿಡ ಮರಗಳಲ್ಲಿ ಬಿಡುವ ಹೂಗಳು ಒಂದೇತರ ಹಳೆಯದು. ನಿಜ ಒಂದರ್ಥ ದಲ್ಲಿ. ಆದರೆ ದಿನವೂ ಅರಳುವ ಮಲ್ಲಿಗೆ, ಗುಲಾಬಿ, ಸೇವಂತಿ, ಪಾರಿಜಾತ, ಇತ್ಯಾದಿ ಹೂಗಳು ಅದೇ ಹಳೆಯದೆ? ಅಲ್ಲವಲ್ಲ! ಹೊಸದಲ್ಲವೇ, ಭೂಮಿಯಲ್ಲಿರುವ ಬೇರುಗಳು ಪ್ರತಿದಿನವು (ಅನುದಿನವು) ರಸವನ್ನು ಹೀರುತ್ತಾ ಅದನ್ನು ಗಿಡಮರಗಳಿಗೆ ಧಾರೆಯೆರೆಯುತ್ತಾ ಗಿಡಮರ ಬಳ್ಳಿಗಳ ತುದಿಯಲ್ಲಿ ಹೂ ಕಾಯಿ ಹಣ್ಣು ಬಿಡುವಂತೆ ಮಾಡುತ್ತವೆ. ಈ ರೀತಿ ಪ್ರಕೃತಿಯಲ್ಲಿ ಹೊಸ ಸೃಷ್ಟಿ ಆಗಲು, ದಿನವೂ

ಬೇರೆ ಬೇರೆ ರೀತಿಯಲ್ಲಿ ಬೆಳೆ, ಸಸ್ಯ ಹೂ ಹಣ್ಣು ಎಲೆ ಕಾಯಿಗಳನ್ನು ಮಾರ್ಪಡಿಸುವ ಪಕ್ವಗೊಳಿಸುವ ಸಾಮರ್ಥ್ಯ, ರಸಪುಷ್ಟಿ ಎಲ್ಲಿಂದ ಹೇಗೆ ಭೂಮಿಯಲ್ಲಿರುವ ಬೇರುಗಳಿಗೆ ಬರುತ್ತವೆ? ಅವುಗಳಿಗೆ ಗಾಳಿ, ಬೆಳಕು, ಮಣ್ಣಿನಸಾರ ಹೇಗೆ ನೆರವಾಗುತ್ತವೆ? ಯಾರಿಗೂ ತಿಳಿಯದು. ಹುಲ್ಲು ತಿನ್ನುವ ಹಸುವಿನಲ್ಲಿ ಹಾಲು ಹೇಗೆ ಬರುತ್ತದೆ? ಕಸ ತಿನ್ನುವ ಕೋಳಿ ಸತ್ತ್ವವುಳ್ಳ ಮೊಟ್ಟೆಯನ್ನು ಹೇಗೆ ಕೊಡುತ್ತೆ? ಯಾರೂ ಅರಿಯರು. ಇವೆಲ್ಲಾ ತಿಳಿಯಲಾಗದ. ಆಶ್ಚರ್ಯ, ಅದ್ಭುತಕಾರ್ಯಗಳು. ಆದರೆ ಇವುಗಳಿಂದಲೇ ನಮ್ಮ ಬಾಳು. ಆದಕಾರಣ, ಇವುಗಳ ಸೃಷ್ಟಿಕರ್ತ ಭಗವಂತನಿಗೆ ನಾವು ಕೃತಜ್ಞರಾಗಿರಬೇಕು.

ಈ ಜಗತ್ತು ವಿಧಿಮಾಡಿದ ಅಡಿಗೆ

27

ತೋಯಿಸುತ ಬೇಯಿಸುತ ಹೆಚ್ಚುತ್ತ ಕೊಚ್ಚುತ್ತ !
ಕಾಯಿಸುತ ಕರಿಯುತ್ತ ಹುರಿಯುತ್ತ ಸುಡುತ ॥
ಈಯವನಿಯೊಲೆಯೊಳೆಮ್ಮಯ ಬಾಳನಟ್ಟು ವಿಧಿ ।
ಬಾಯ ಚಪ್ಪರಿಸುವನು–ಮಂಕುತಿಮ್ಮ ॥ (ಪದ್ಯ 156)

ಅಡುಗೆ ಮಾಡುವನು ನಾವು ತಿನ್ನುವ ರುಚಿಕರವಾದ ಆಹಾರವನ್ನು ತಿಂಡಿತೀರ್ಥಗಳನ್ನು ಸಿದ್ಧಪಡಿಸುತ್ತಾನೆ. ಅದಕ್ಕಾಗಿ ಮಾಡುವ ಕೆಲಸಗಳೇನು? ತಿನ್ನಬಹುದಾದ, ದವಸಧಾನ್ಯ ತರಕಾರಿಗಳನ್ನು ಶುದ್ಧಿಮಾಡಿ ಚೆನ್ನಾಗಿ ತೊಳೆಯುತ್ತಾನೆ (ತೋಯಿಸುತ) ಒಲೆಯ ಮೇಲೆ ಪಾತ್ರೆಯಲ್ಲಿ ಬೇಯಿಸುತ್ತಾನೆ (ಬೇಯಿಸುತ) ಅದಕ್ಕೆ ಮುಂಚೆ ಅವುಗಳನ್ನು ಹೋಳು ಹೋಳಾಗಿ, ಚೂರುಚೂರಾಗಿ ಹೆಚ್ಚುತ್ತಾನೆ ಕೊಚ್ಚುತ್ತಾನೆ. ಇನ್ನು ಅದನ್ನು ಬಿಸಿಮಾಡುತ್ತಾನೆ ಬಿಸಿಮಾಡಿ (ಕಾಯಿಸುತ) ಸುಡುತ್ತಾನೆ, ಎಣ್ಣೆಯಲ್ಲಿ ಕರಿಯುತ್ತಾನೆ (ಕರಿಯುತ) ಬಾಣಲಿಯಲ್ಲಿ ಹುರಿಯುತ್ತಾನೆ, (ಹುರಿಯುತ) ಒಲೆಯ ಬೆಂಕಿಯಲ್ಲಿ ಗೆಣಸಿನಂತೆ ಸುಡುತ್ತಾನೆ (ಸುಡುತ) ಹೀಗೆ ನಾನಾರೀತಿಯಲ್ಲಿ ಎಲ್ಲ ಪದಾರ್ಥಗಳನ್ನು ಬೇಯಿಸಿ ಹುರಿದು ಸುಟ್ಟು ನೆನಸಿ ಒಣಗಿಸಿ ಕತ್ತರಿಸಿ ನಾನಾ

ರೀತಿಯಲ್ಲಿ ಕ್ರಿಯೆಗಳಿಗೆ ಒಳಪಡಿಸಿದಾಗ, ನಾಲಿಗೆಯಲ್ಲಿ ನೀರೂರುವಂಥ . ಬಾಯಿಚಪ್ಪರಿಸುವಂಥ ತಿಂಡಿತೀರ್ಥ ಸಿದ್ಧವಾಗುತ್ತದೆ. ತಿಂದು ಸುಖಿಸುತ್ತೇವೆ ಹಾಗೆಯೇ ವಿಧಿ, ಅದೃಷ್ಟ, ಹಣೆಬರಹ ದೈವ, ಕರ್ಮಫಲ ಎಂದೆಲ್ಲಾ ಕರೆಯುವ ನಮಗೆ ತಿಳಿಯದ ಅರ್ಥವಾಗುವ ಕಾಣದ ಭಗವಂತನ ಸಂಕಲ್ಪ ಇಚ್ಛೆಗಳು, ಲೀಲೆಗಳು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಅವನು ಕೊಟ್ಟಿದ್ದನ್ನು ಅನುಭವಿಸುತ್ತೇವೆ. ಅವನಿಗೆ ಈ ಭೂಮಿಯಲ್ಲಿ ಇರುವ ನಮ್ಮೆಲ್ಲರ ಜೀವನ (ಈ ಅವನಿಯೊಳು ಎಮ್ಮಯ ಬಾಳು) ಅಡಿಗೆ ಪದಾರ್ಥಗಳಿದ್ದಂತೆ, ನಮ್ಮ ಕಷ್ಟ, ಸುಖ, ಸಂಕಟ, ನೋವು ನಲಿವು ಇತ್ಯಾದಿ ಎಲ್ಲ ಮೇಲೆ ಹೇಳಿದ ರೀತಿ ಅಡಿಗೆ ಮಾಡಿದ ಹಾಗೆ ಅವನು ಬಾಯಿಚಪ್ಪರಿಸುವ ಆಹಾರ ನಾವಾಗಿದ್ದೇವೆ ನಮ್ಮ ಬಾಳು ಆಗಿದೆ.

ಅನ್ನಋಣದ ಲಕ್ಷಣ

28

ಇಂದು ಮದುವೆಯ ಹಬ್ಬ; ನಾಳೆ ವೈಕುಂಠ ತಿಥಿ ।
ಇಂದು ಮೃಷ್ಟಾನ್ನಸುಖ, ನಾಳೆ ಭಿಕ್ಷಾನ್ನ ॥
ಇಂದು ಬರಿಯುಪವಾಸ, ನಾಳೆ ಪಾರಣೆ–ಯಿಂತು ।
ಸಂದಿರುವುದನ್ನಋಣ–ಮಂಕುತಿಮ್ಮ (ಪದ್ಯ 171)

ಬದುಕಿರಲು ಊಟ. ಊಟಕ್ಕಾಗಿ ಬದುಕುವುದಲ್ಲ ಇಷ್ಟಕ್ಕೂ ಅನ್ನಋಣ (ಊಟ) ಯಾರಿಗೆ ಯಾವಾಗ ಎಲ್ಲಿ ಲಭ್ಯವಾಗುತ್ತದೋ ಹೇಳಲಾಗುವುದಿಲ್ಲ. ಈವತ್ತು ಮದುವೆ ಊಟಕ್ಕೆ ಕರೆದು ಹಬ್ಬದೂಟ ಹಾಕಬಹುದು. ನಾಳೆ ಇನ್ನೊಬ್ಬರು ಸತ್ತವರ ವೈಕುಂಠ ತಿಥಿಗೆ ಕರೆದು ಭೋಜನವಿಡಬಹುದು. ಇವತ್ತು ಪಂಚಭಕ್ಷ್ಯ ಪರಮಾನ್ನ ಸಿಗಬಹುದು. ನಾಳೆ ತಿರುಪೆ ಬೇಡಿದ ಊಟವಿರಬಹುದು. ಏನೂ ಸಿಗದೆ ಬರಿ ಉಪವಾಸದಿಂದಿರುವ ದಿನ ಬರಬಹುದು ಅಥವಾ ಮರುದಿನ ಬೆಳಿಗ್ಗೆಯೇ ಪಾರಣೆ (ಉಪವಾಸದ ಅನಂತರ ಮಾಡುವ ಊಟ) ಊಟ ದೊರೆಯಬಹುದು. ಹೀಗಾಗಿ ಯಾವಾಗ ಯಾರಿಂದ ಹೇಗೆ ಊಟ ಸಿಗುತ್ತದೋ ತಿಳಿಯದು. ಹಕ್ಕಿಗಳು ಪ್ರಾಣಿಗಳು ಯಾವಾಗ ಏನು ಸಿಗುತ್ತವೋ ಅವುಗಳನ್ನು

ತಿನ್ನುತ್ತವೆ. ಎಲ್ಲಿ ಏನು ಸಿಗುತ್ತೆ ಹೇಗೆ ಸಿಗುತ್ತೆ ಯಾವಾಗ ಸಿಗುತ್ತೆ ಎಂದು ಯೋಚಿಸುವುದಿಲ್ಲ. ನಾಳೆಗಿಡುವುದಕ್ಕೆ ಚಿಂತಿಸುವುದಿಲ್ಲ ಆದುದರಿಂದ ನಾವು ಊಟಕ್ಕಾಗಿ ವಿಶೇಷವಾಗಿ ತಲೆಕೆಡಿಸಿಕೊಳ್ಳಬಾರದು. ಅನ್ನಋಣವನ್ನು ಯಾರೂ ಊಹಿಸಲಾರರು.

ಸಂಗಾತಿ ಆಯ್ಕೆ-ನುಡಿಗಟ್ಟಿನಾಟ

29

ನುಡಿಗಟ್ಟಿನಾಟದಕ್ಕರಚೀಟಿಯೊಟ್ಟಿನಲಿ ।
ತಡಕಿ ನಾವಾಯ್ದಾಯ್ದು ನುಡಿಜೋಡಿಪಂತೆ ॥
ಬಿಡಿಜೀವ ಸಂಗಾತಿಜೀವಗಳನರಸಿ ತಾಂ ।
ಪಡೆದಂದು ಪೂರ್ಣವದು–ಮಂಕುತಿಮ್ಮ ॥ (ಪದ್ಯ 187)

ಜೀವನದಲ್ಲಿ ಜೊತೆಗಾರರನ್ನು, ಸ್ನೇಹಿತರನ್ನು ಆರಿಸಿಕೊಳ್ಳಬೇಕಾದರೆ ಎಚ್ಚರವಿರಬೇಕು; ಒಂಟಿಯಾಗಿರ ಬಾರದು. ನಾಲ್ಕು ಜನರ ನಡುವೆ ಬಾಳಬೇಕು. ಸ್ನೇಹಿತರನ್ನು ಬಾಳಗೆಳೆಯರನ್ನು ಆರಿಸುವುದು ಹೇಗೆ? ಪದನಿರ್ಮಾಣ ಆಟ (ವರ್ಡ್‌ಬಿಲ್ಡಿಂಗ್) ಆಡುವಾಗ ನಾವು ಅಕ್ಷರಗಳನ್ನು ಒಂದೊಂದು ರಟ್ಟಿನ ಚೀಟಿಯಲ್ಲಿ ಒಂದೊಂದು ಅಕ್ಷರ ಬರೆದು ಅಂಥ ನೂರಾರು ರಟ್ಟಿನ ಚೀಟಿಗಳನ್ನು ಒಟ್ಟಿಗೆ ರಾಶಿ ಹಾಕು ತ್ತೇವೆ. ಅದರಲ್ಲಿ ಬೇಕಾದ ಅಕ್ಷರಗಳನ್ನು ಹುಡುಕಿತೆಗೆಯುತ್ತಾ ಆರಿಸುತ್ತಾ ಜೋಡಿಸಿ ಅರ್ಥಪೂರ್ಣ ಪದವನ್ನು (ನುಡಿಜೋಡಿ ಪಂತೆ) ರಚಿಸುತ್ತೇವೆ. ಇದೇ ನುಡಿಗಟ್ಟಿನಾಟ. ಇದೇರೀತಿ ಸೂಕ್ತರಾದ ಯೋಗ್ಯರಾದ ಗೆಳೆಯರನ್ನು ಗೆಳತಿಯನ್ನು ಬಾಳಿ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆಗ ಬಾಳು ಪೂರ್ಣವೆನಿ ಸುತ್ತದೆ ಎಂದರೆ ಸಾರ್ಥಕವನಿಸುತ್ತದೆ.

ರಸಿಕತೆಗೆ ಸೃಷ್ಟಿಯೇ ಗುರು

30

ಪರಿಪರಿಯ ರೂಪಕಾಂತಿಗಳ ಕಣ್ಣಾಗಿಸುವ ।
ಪರಿಪರಿಯ ಫಲಮಧುರಗಳ ರಸನೆಗುಣಿಪ ॥
ಪರಿಪರಿಯ ಕಂಠರವಗಳ ಕಿವಿಗೆ ಸೋಕಿಸುವ ।
ಗುರು ಸೃಷ್ಟಿ ರಸಿಕತೆಗೆ–ಮಂಕುತಿಮ್ಮ ॥ (ಪದ್ಯ 189)

ಈ ಪ್ರಕೃತಿ ಮಾತೆ ಗಿಡಮರಗಳಲ್ಲಿ, ಪಶುಪಕ್ಷಿ ಪ್ರಾಣಿಗಳಲ್ಲಿ ನಾನಾ ಬಗೆಯ ಸೌಂದರ್ಯಗಳನ್ನು ಸೃಷ್ಟಿಸಿ ನಮ್ಮ ಕಣ್ಣಿಗೆ ಆನಂದವುಂಟು ಮಾಡಿದ್ದಾಳೆ. ನವಿಲಿನಗರಿ, ಹುಲಿಯಬಣ್ಣ, ಹಕ್ಕಿಯ ರಂಗಿನವಿನ್ಯಾಸ ಮೊದಲಾದವು ಕಣ್ಣಿಗೆ ಚೆಲುವಾಗಿವೆ.ಬಗೆಬಗೆಯ ಹಣ್ಣುಗಳ ಸವಿ ನಾಲಗೆಗೆ ಸಿಹಿಯಾಗಿ ಉದರಕ್ಕೆ ಹಿತವಾಗಿವೆ. ಇನ್ನು ಹಕ್ಕಿಗಳ ಚಿಲಿಪಿಲಿ, ಕೋಗಿಲೆಯ ಕುಹೂ ಕುಹೂ, ನವಿಲಿನ ಕೇಕೆ, ಗಿಣಿಯ ನುಡಿ, ಕಿವಿಗೆ ಸಂಗೀತದ ಸವಿನೀಡುತ್ತವೆ. ಇವೆಲ್ಲದರಿಂದ ಸೊಬಗನ್ನು ಆಸ್ವಾದಿಸಲು ಪಂಚೇಂದ್ರಿಯ ಸುಖಪಡಲು ಸೌಂದರ್ಯದ ಪಾಠವನ್ನು ಸಂತೋಷಪಡುವ ರೀತಿಯನ್ನು ಕಲಿಸುವ ಗುರು ನಿಸರ್ಗಮಾತೆ ಆಗಿದ್ದಾಳೆ. ಅದಕ್ಕೆ ನಾವೆಲ್ಲ ನಿಸರ್ಗ ಆರಾಧಕರಾಗಬೇಕು. ನಮ್ಮ ಕಣ್ಣು, ಕಿವಿ, ಮೂಗು ಮೊದಲಾದ ಇಂದ್ರಿಯಗಳಿಂದ ಪ್ರಕೃತಿಯ ಸೊಬಗನ್ನು ಆಸ್ವಾದಿಸುವುದನ್ನು ಕಲಿಯಬೇಕು. ರಸಿಕತೆಯ ಆನಂದ, ತೃಪ್ತಿ, ಸಂತೋಷವನ್ನು ನೀಡುವ ಕಲೆಗೆ ಗುರುವೆಂದರೆ ಸೃಷ್ಟಿದೇವತೆಯಾದ ಪ್ರಕೃತಿಮಾತೆಯೇ ಆಗಿದ್ದಾಳೆ.

ನಾಲ್ಕು ರೀತಿ ಜನರು

31

ಮೊಗ ನಾಲ್ಕು ನರನಿಗಂತೆಯ ನಾರಿಗಂ ಬಗೆಯೆ ।
ಜಗಕೆ ಕಾಣಿಪುದೊಂದು, ಮನೆಯ ಜನಕೊಂದು ॥
ಸೊಗಸಿನೆಳಸಿಕೆಗೊಂದು, ತನ್ನಾತ್ಮಕಿನ್ನೊಂದು ।
ಬಗೆಯೆಷ್ಟೊ ಮೊಗವಷ್ಟು–ಮಂಕುತಿಮ್ಮ ॥ (ಪದ್ಯ 195)

ಲೋಕದಲ್ಲಿ ಜನರಲ್ಲಿ ಗಂಡಸರು, ಹೆಂಗಸರು ಎಂದು ಎರಡು ವಿಧವಾಗಿದ್ದಾರೆ ಅಂತೆಯೇ ಪ್ರಾಣಿ, ಸಸ್ಯಗಳಲ್ಲಿ ಹೆಣ್ಣು-ಗಂಡು ಎಂಬ ಭೇದವಿದೆ. ಇದು ಭಗವಂತನ ಸೃಷ್ಟಿಯ ಫಲ. ಲೋಕದಲ್ಲಿ ಇರುವ ಗಂಡಿಗಾಗಲಿ ಹೆಣ್ಣಿಗಾಗಲಿ ನಾಲ್ಕು ರೀತಿಯ ಬದುಕು ಇರುತ್ತವೆ ಎಂದರೆ ನಾಲ್ಕು ರೀತಿಯಲ್ಲಿ ಜೀವಿಸುತ್ತಾರೆ. ಒಂದೊಂದು ಕಡೆ ಒಂದೊಂದು ರೀತಿ ಇರುತ್ತಾರೆ. 1) ಹೊರಗಡೆ ಪ್ರಪಂಚಕ್ಕೆ ಕಾಣಿಸುವ ರೀತಿ ಒಂದುಬಗೆ (ಜಗಕೆ ಕಾಣಿಸುವುದೊಂದು) ಉದಾಹರಣೆಗೆ ಶಾಲೆಗೆ ಬರುವಾಗ ಒಗೆದ ಬಟ್ಟೆ ಹಾಕಿಕೊಂಡು ಅಲಂಕಾರ ಮಾಡಿಕೊಂಡು ಬರುತ್ತೇವೆ. 2) ಮನೆಯಲ್ಲಿ ಇರುವ ಹಿರಿಯರಲ್ಲಿ ಪ್ರೀತಿ, ಗೌರವ ವಿಶ್ವಾಸದಿಂದ ನಡೆದು ಕೊಳ್ಳುತ್ತೇನೆ. ಹೇಳಿದ ಮಾತು ಕೇಳುತ್ತೇವೆ. ಅವರಿಂದ ಕಲಿಯುತ್ತೇವೆ. ವಿಧೇಯವಾಗಿರುತ್ತೇವೆ. ಇಂದು ಇನ್ನೊಂದು ರೀತಿ. 3) ರೀತಿ ಇನ್ನು ನಮ್ಮ ಮನೆಯಲ್ಲಿ ಇಷ್ಟದಂತೆ ಆಸೆಯಂತೆ,

ಬಟ್ಟೆಬರೆ ಆರಿಸಿಕೊಳ್ಳುತ್ತೇವೆ. ಆಟವಾಡುತ್ತೇವೆ ಅಲಂಕಾರ ಮಾಡಿಕೊಳ್ಳುತ್ತೇವೆ. ಮಾತಾಡಿಕೊಳ್ಳುತ್ತೇವೆ. ನಮ್ಮ ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತೇವೆ ಇದು ಮಗದೊಂದು ರೀತಿ. ಸೊಗಸಿನೆಳಸಿಕೆಗೊಂದು ರೀತಿ 4) ಇವೆಲ್ಲದರ ಜತೆಗೆ ಎಲ್ಲದರಲ್ಲೂ ನಾನು ನನ್ನದು ಎನ್ನುವ ನಮ್ಮೊಳಗೆ ಗೊತ್ತಿಲ್ಲದೆ ಹೀಗೆ ಮಾಡು ಹಾಗೆ ಮಾಡು ಅನ್ನಿಸುವ ಎಲ್ಲರೂ ಹೇಗೆ ಹೇಗೆ ವರ್ತಿಸಬೇಕೆಂದು ಪ್ರೇರಿಸುವ ಸದಾ ನಮ್ಮೊಂದಿಗಿರುವ ನಮಗೆ ಕಾಣಿಸದ ಆತ್ಮವೊಂದು ನಮ್ಮ ದೇಹದಲ್ಲಿ ಹೃದಯದಲ್ಲಿ ಬುದ್ಧಿಯಲ್ಲಿ ಆವರಿಸಿಕೊಂಡಿರುತ್ತದೆ. ಹೀಗೆ ಮುಖ್ಯವಾಗಿ ಹೀಗೆ ನಾಲ್ಕು ರೀತಿ ಇದ್ದಾರೆ. ಇದಲ್ಲದೆ ಇನ್ನೂ ಎಷ್ಟೋ ರೀತಿಯಲ್ಲಿ ಬಗೆ ಬಗೆಯ ಜನರಿದ್ದಾರೆ.

ಡಯೋಜಿನಿಸ್ ಕಥೆ

32

ಸತ್ಯವಂತನನರಸಲೆನುತ ಪೇಟೆಗಳೊಳಗೆ ।
ಹಟ್ಟಹಗಲೊಳೆ ದೀವಿಗೆಯ ಹಿಡಿದು ನಡೆದು ॥
ಕೆಟ್ಟುದೀ ಜಗವೆಂದು ತೊಟ್ಟಿಯೊಳೆ ವಸಿಸಿದನು ।
ತಾತ್ತ್ವಿಕ ಡಯೋಜೆನಿಸ್–ಮಂಕುತಿಮ್ಮ ॥ (ಪದ್ಯ 198)

ಎಲ್ಲರ ಜೀವನದಲ್ಲೂ ಒಂದು ಬಗೆ ಅನುಭವವಿರುತ್ತದೆ. ನಾನು ಪ್ರಾಮಾಣಿಕ, ಸತ್ಯವಂತ, ನ್ಯಾಯವಾಗಿ ಬಾಳುತ್ತೇನೆ. ತಾನು ಸತ್ಯವನ್ನು, ದೇವರನ್ನು ನ್ಯಾಯವನ್ನು ಹುಡುಕಿಕೊಂಡು ಹೊರಟಿದ್ದೇನೆ. ಆದರೆ ನನಗೆ ಈ ಜನರಲ್ಲಿ ಸುಳ್ಳುಗಾರರು ಅನ್ಯಾಯದವರು ಮೋಸಗಾರರು ಮೊದ ಲಾದವರೇ ಕಾಣಿಸುತ್ತಾರೆ. ಜನರು ಉಪಕಾರಿಗಳು ಸದ್ಗುಣಿಗಳು ಎಂದು ಕಾಣಿಸುವುದಿಲ್ಲ. ಆದರ್ಶವೇ ಇಲ್ಲ ಇವರ ಸಹವಾಸವೇ ಬೇಡವೆಂದು ಜನರಿಂದ ದೂರವಾಗಿರುವರು ಇದ್ದಾರೆ. ಈ ರೀತಿ ಸತ್ಯವನ್ನು ಹುಡುಕಿಕೊಂಡು ಹೋದವರು ನಮ್ಮಲ್ಲಷ್ಟೇ ಅಲ್ಲ ಪ್ರಪಂಚದಲ್ಲಿ ಸಾವಿರಾರು ವರ್ಷಗಳಿಂದ ಬೇಕಾದಷ್ಟು ಜನರಿದ್ದಾರೆ ಎಂದು ಗ್ರೀಕ್‌ದೇಶದ ವೇದಾಂತಿ. ಸಜ್ಜನ,

ಡಯೋಜೆನಿಸ್ ಎಂಬುವನ ಕಥೆಯನ್ನು ಈ ಪದ್ಯದಲ್ಲಿ ಹೇಳಿದ್ದಾರೆ.

ಡಯೋಜೆನಿಸ್ ಎಂಬ ತತ್ತ್ವಜ್ಞಾನಿ (ಕ್ರಿ.ಪೂ. 412–322) ಗ್ರೀಸ್ ದೇಶದಲ್ಲಿ ಇದ್ದನು ಅವನು ಜನರಲ್ಲಿ ಸತ್ಯವಂತರಾದನು ಸಜ್ಜನರಾದವರು, ಶ್ರೇಷ್ಠರಾದವರು ನ್ಯಾಯವಂತರಾದವರು ನಿಜವಾಗಿ ಆದರ್ಶಪ್ರಾಯರಾದವರು ಯಾರಿದ್ದಾರೆ ಎಂದು ಹುಡುಕಿಕೊಂಡು, ನಡುಹಗಲಿನಲ್ಲಿ ದೀಪ ಹಿಡಿದು (ದೀವಿಗೆ) ಊರೊಳಗೆ ಪೇಟೆಪೇಟೆಯಲ್ಲಿ ಹುಡುಕತೊಡಗಿದನು. ಯಾರೂ ಕಾಣಲಿಲ್ಲ ಎಂದರೆ ಮರೆಯಾಗಿದ್ದಾರೆ. ಕತ್ತಲಲ್ಲಿ ಇದ್ದವರಾದರೆ, ಇದ್ದವರು ದೀಪ ಇದ್ದರೆ ಕತ್ತಲಲ್ಲಿ ಕಾಣುತ್ತಾರೆ ಎಂದು ಬೆಳಕಿನ ದೀಪ ಹಿಡಿದಿದ್ದ. ಹಗಲಿನಬೆಳಕು ಹೊರಗಿನದು ಅವನು ಹುಡುಕುತ್ತಿದ್ದುದು ನಮ್ಮ ಹೃದಯ ಬುದ್ಧಿಯಲ್ಲಿದ್ದ ಒಳಗಿನ ಬೆಳಕು. ಅದು ಇದ್ದವರು ಯಾರೋ ಸಿಗಲಿಲ್ಲ. ಆಗ ಈ ಜನರ ಸಹವಾಸನೇ ಬೇಡ ಅಂತ ಮನೆಯೊಳಗೆ ತೊಟ್ಟಿ ಕಟ್ಟಿಸಿ ಅದರೊಳಗೆ ಒಂಟಿಯಾಗಿ ವಾಸಮಾಡಿದನಂತೆ.

ನಿರಾಸೆ ಹೊಂದಬಾರದು

33

ಒಣಗಿ ಬೇಸಗೆಯಿಂದ ಮಣ್ಣಾಗಿ ಕಾಣದಿಹ ।
ತೃಣ ಮೊಳೆಯುವುದು ಮರಳಿ ಹನಿಯೆರಡು ಬೀಳೆ ॥
ಅಣಗಿರ್ದು ನರನಾಶೆಯಂತು ಕಷ್ಟದ ದಿನದಿ ।
ಕುಣಿವುದನುಕೂಲ ಬರೆ–ಮಂಕುತಿಮ್ಮ ॥ (ಪದ್ಯ 207)

ಮನುಷ್ಯ ನಿರಾಸೆ ಹೊಂದಿ ಕುಗ್ಗಬೇಕಿಲ್ಲ. ಎಂತಹ ಕಷ್ಟ ಬಂದರೂ ಆಶಾಭಾವನೆ ಹೊಂದಿರಬೇಕು. ಕಷ್ಟಗಳು ಶಾಶ್ವತವಲ್ಲ. ಬೇಸಿಗೆಯಲ್ಲಿ ಉರಿಬಿಸಿಲಿಗೆ ಹುಲ್ಲು, ಗಿಡಗಳು ಬಾಡಿ ಒಣಗಿಹೋಗಿ ರುತ್ತವೆ. ನೆಲವು ಬರಡಾಗಿರುತ್ತದೆ. ಆದರೆ ಎಲ್ಲಿಂದಲೋ ಒಂದೆರಡು ಹನಿ ಮಳೆಬಿದ್ದರೆ ಸಾಕು, ಮತ್ತೆ; ಗಿಡ ಚಿಗುರುತ್ತದೆ; ಹುಲ್ಲು ಕಾಣಿಸುತ್ತದೆ. (ತೃಣ ಮೊಳೆಯುತ್ತದೆ.) ಹಾಗೆ ಕಷ್ಟದಲ್ಲಿ ನಿರಾಸೆಯಲ್ಲಿ ಮುಳುಗಿದ ಮನುಷ್ಯನಿಗೆ ದೈವಾನುಗ್ರಹದಿಂದ ಎಲ್ಲಿಂದಲೋ ಹೇಗೋ ಅಡಗಿದ್ದು ಬರುವ ಮಳೆಯಂತೆ ಮರೆ ಯಾಗಿದ್ದು (ಅಣಗಿರ್ದು) ನೆರವುಬರುತ್ತದೆ. ಮನಸ್ಸು ಉತ್ಸಾಹ ಗೊಂಡು ಗರಿಕೆದರುತ್ತದೆ ಬದುಕು ಉಲ್ಲಾಸಮಯದ ಸಮಯ ವಾಗುತ್ತದೆ. ಆದರೆ ಸಮಯಕ್ಕೆ ಕಾಯಬೇಕು ಅಷ್ಟೆ. ಆದಕಾರಣ ಮನುಷ್ಯ ಸದಾ ಆಶಾಜೀವಿ ಆಗಿರಬೇಕು.

ಆಸೆಗಳಿಗೆ ಮಿತಿ ಇರಲಿ

34

ತಂಗಳುಣಿಸಾದೊಡಂ ಸಾಕೆನುವನುಪವಾಸಿ ।
ಸಿಂಗಾರ ಸಂಗಾತಿ ಬೇಕುಂಡವನಿಗೆ ॥
ಬಂಗಾರ ಪದವಿ ಪ್ರತಿಷ್ಠೆ ಬೇಕಾಬಳಿಕ ।
ಹಿಂಗದಾಯೆದೆಚಿಲುಮೆ–ಮಂಕುತಿಮ್ಮ ॥ (ಪದ್ಯ 210)

ಮನುಷ್ಯನ ಆಸೆಗೆ ಕೊನೆಮೊದಲೇ ಇಲ್ಲ. ಒಂದಾದ ಮೇಲೆ ಒಂದರಮೇಲೆ ಆಸೆ ಉಂಟಾಗುತ್ತದೆ. ಹೊಟ್ಟೆಗಿಲ್ಲದೆ ಉಪವಾಸವಿದ್ದಾಗ ತಂಗಳನ್ನ ಸಿಕ್ಕರೂ (ತಂಗಳುಣಿಸಾದೊಡಂ) ಸಾಕೆನಿಸುತ್ತದೆ. ಹೊಟ್ಟೆಪಾಡು ಕಳೆದರೆ ಚೆಲುವೆಯಾದ ಜೊತೆಗಾತಿಯೊಬ್ಬಳು ಬೇಕು ಅನ್ನಿಸುತ್ತದೆ. ಮದುವೆ ಆಗಿ ಹೆಂಡತಿ ಸಿಕ್ಕರೂ ಆಸೆ ಅಲ್ಲಿಗೇ ನಿಲ್ಲುವುದೇ? ಇಲ್ಲ ಬಂಗಾರದ, ಒಡವೆ ವಸ್ತುಗಳು ಬೇಕು ಅನ್ನಿಸುತ್ತದೆ. ಸಮಾಜದಲ್ಲಿ ದೊಡ್ಡ ದೊಡ್ಡ ಪದವಿಸ್ಥಾನಗಳನ್ನು ಬಯಸುತ್ತಾನೆ. ಕೀರ್ತಿಪ್ರಶಸ್ತಿಗಳನ್ನು ಬಯಸುತ್ತಾನೆ. ಹೀಗೆ ಕೊನೆಯಿಲ್ಲದ ಆಸೆಗಳನ್ನು ಎಲ್ಲರಲ್ಲಿ ಕಾಣುತ್ತೇವೆ ಎಲ್ಲರೂ ಆಸೆಗಳಿಗೆ ಕಡಿವಾಣ ಹಾಕುವುದು ತುಂಬಾ ಅಗತ್ಯವಾಗಿದೆ. ಇದರರ್ಥ ಇಷ್ಟೆ. ಆಸೆಗಳು ಎಲ್ಲರಲ್ಲೂ ಇರುವುದು ತಪ್ಪಲ್ಲ ಆದರೆ ಆಸೆ ಅತ್ಯಾಶೆ, ದುರಾಸೆ ಆಗಬಾರದು ಪರಿಮಿತ ಆಸೆ ಇರಬೇಕು ಅಥವಾ ಕನಿಷ್ಠ ಪ್ರಮಾಣದ ಆಸೆ ಇರಬಹುದು. ಸರಳ ಜೀವನ ಸಂತೃಪ್ತ ಜೀವನ ಇದ್ದರೆ ಆಸೆಗಳಿಗೆ ಕಡಿವಾಣ ಹಾಕಲು ಶಕ್ಯ.

ಪರಮಾತ್ಮನ ಸೃಷ್ಟಿ - ಸುಂದರ ಜಗತ್ತು

35

ಆಗಸದ ಬಾಗು, ಚಂದ್ರಮನ ಗುಂಡಿನ ನುಣ್ಪು ।
ಸಾಗರದ ತೆರೆವಂಕು, ಗಿಡಬಳ್ಳಿ ಬಳುಕು ॥
ಮೇಘವರ್ಣಚ್ಛಾಯೆ–ಯೀಸೃಷ್ಟಿಯಿಂ ನಮ್ಮೊ ॥
ಳಾಗಿಹುದು ರೂಪರುಚಿ–ಮಂಕುತಿಮ್ಮ ॥ (ಪದ್ಯ 217)

ಈ ಲೋಕದಲ್ಲಿ ಪ್ರಕೃತಿಯ ರೂಪಾಕಾರಗಳು ನಮಗೆ ಸೌಂದರ್ಯ ವನ್ನು ಸಂತೋಷವನ್ನು ಕೊಟ್ಟಿವೆ. ಬೋಗುಣಿ ಬೋರಲು ಹಾಕಿದಂತೆ ಕಾಣುವ ವಿಸ್ತಾರವಾದ ಆಕಾಶ, ಗುಂಡಾಗಿ ನುಣುಪಾಗಿ ಹೊಳಪಾಗಿ ಕಾಣುವ ಹುಣ್ಣಿಮೆ ಚಂದಿರ; ಅಂಕುಡೊಂಕಾಗಿ ಚಲಿಸುವ ಅಲೆಅಲೆಯಾಗಿ ಬರುವ ಸಮುದ್ರದ ತೆರೆಗಳು, ಬಗೆಬಗೆಯ ಗಿಡಮರಬಳ್ಳಿಗಳ ಬಳಕು ಕುಲುಕುಗಳು ತೊನೆದಾಡುವ ಬಗೆಗಳು, ಬಗೆಬಗೆಯ ಬಣ್ಣಗಳ ಮೋಡಗಳ ವಿನ್ಯಾಸಗಳು (ಮೇಘವರ್ಣಚ್ಛಾಯೆ) ಅವುಗಳ ನೆರಳುಗಳು ಇವೆಲ್ಲದರಿಂದ ರೂಪಗಳಲ್ಲಿ ಆಕಾರ ವಿನ್ಯಾಸಗಳಲ್ಲಿ ನಮಗೆ ಆಕರ್ಷಣೆ, ಚೆಲುವುಗಳನ್ನು ಪರಮಾತ್ಮನು ಉಂಟು ಮಾಡಿದ್ದಾನೆ. ಹಾಗಾಗಿ ಈ ಪ್ರಪಂಚವನ್ನು ಸುಂದರ ತಾಣವನ್ನಾಗಿ ರೂಪಿಸಿದ್ದಾನೆ. ಇದರಿಂದ ನಮಗೆ ಈ ಪ್ರಪಂಚದ ಬಗ್ಗೆ ಆಸಕ್ತಿ ಆಕರ್ಷಣೆ ಉಂಟಾಗಿದೆ. (ಆಗಿಹುದು ರೂಪರುಚಿ)

ಪುರುಷಯತ್ನ-ಧನ್ಯತೆಯ ಬೆದಕಾಟ

36

ನೂತ್ನತೆಯ ಪೂರ್ಣತೆಯನನ್ಯೂನತೆಯ ಗಳಿಪ ।
ಯತ್ನಮೇ ಪೌರುಷಪ್ರಗತಿ; ಅದೆ ಪ್ರಕೃತಿ ॥
ವಿಜ್ಞಾನ ಶಾಸ್ತ್ರ ಕಲೆ ಕಾವ್ಯ ವಿದ್ಯೆಗಳೆಲ್ಲ ।
ಧನ್ಯತೆಯ ಬೆದಕಾಟ–ಮಂಕುತಿಮ್ಮ ॥ (ಪದ್ಯ 227)

ಸದಾ ಹೊಸದನ್ನು ಹುಡುಕುವುದು ನಮ್ಮೆಲ್ಲರ ಸ್ವಭಾವ. ಹೊಸತರಹ ತಿಂಡಿಬೇಕು. ಬಟ್ಟೆ ಬೇಕು. ಆಟಪಾಟಬೇಕು, ಹೊಸಕಥೆ, ದಿವ್ಯನಾಟಕ ಬೇಕು. ಹೀಗೆ ಪ್ರತಿಸಲವೂ ಬೇರೆಬೇರೆ ಹೊಸದು ಬೇಕು ಎನ್ನುತ್ತೇವೆ. ಇದಕ್ಕಾಗಿ ನಾನಾ ರೀತಿಯಲ್ಲಿ ಈಗಿರುವ ಲೋಪ ದೋಷಗಳನ್ನು ಕೊರತೆಯನ್ನು ಹೋಗಲಾಡಿಸಿ ಇನ್ನೂ ಚೆನ್ನಾಗಿರುವಂತೆ, ಹೊಸದಾಗಿರುವಂತೆ (ನೂತ್ನತೆಯನ್ನು) ಯಾವುದೇ ದೋಷ ಕೊರತೆ ಗಳಿಲ್ಲದಂತೆ (ಪೂರ್ಣತೆಯನ್ನು) ಸಾಧಿಸಬೇಕು ಎಂದು ಪ್ರಯತ್ನಿಸುತ್ತಾನೆ. ಅದಕ್ಕಾಗಿ ನಾವು ಓದುವ ಪರಿಶ್ರಮ, ಪ್ರಯತ್ನ ಪ್ರಯೋಗ, ಸಾಧನೆ, ಸಾಹಸಗಳೇ ನಿಜವಾದ ಮಾನವರ ಪ್ರಗತಿ, ಉನ್ನತಿ ಅಭ್ಯುದಯ ಇದಕ್ಕಾಗಿ ವಿಜ್ಞಾನದಲ್ಲಿ ಸಂಶೋಧನೆ ಮಾಡುತ್ತೇವೆ. ಶಾಸ್ತ್ರಗಳಲ್ಲಿ ಸತ್ಯ ವನ್ನು ಹುಡುಕಾಡುತ್ತೇವೆ. ಶಿಲ್ಪಿ ಚಿತ್ರ ನಾಟ್ಯ ಮೊದಲಾದ ಕಲೆಗಳಲ್ಲಿ

ಸೌಂದರ್ಯದ ಮೂಲಕ, ಪರಿಪೂರ್ಣತೆ ಕಾಣಲು ಯತ್ನಿಸುತ್ತೇವೆ. ಕಥೆ ಕಾವ್ಯ ನಾಟಕ ಪ್ರಬಂಧ ಶಾಸ್ತ್ರ ವಿದ್ಯೆಗಳಲ್ಲಿ ಕಲ್ಪನೆಗಳಿಂದ ಚರ್ಚೆಗಳಿಂದ ಹುಡುಕಲೆತ್ನಿಸುತ್ತೇವೆ. ಈ ಎಲ್ಲಬಗೆಯ ಪ್ರಯತ್ನ ಗಳು ಸಾರ್ಥಕವಾದ ರೀತಿಯಲ್ಲಿ ಪರಿಪೂರ್ಣವಾಗಿ ಆದರ್ಶ ಪ್ರಾಯವಾಗಿ ಪೂರ್ತಿಸುಖದಿಂದ ನಾವು ಬಾಳಬೇಕು ಬದುಕಬೇಕು ಎಂಬುದಕ್ಕೆ ಸಾರ್ಥಕರೀತಿಯ ಪ್ರಯತ್ನ (ಧನ್ಯತೆಯ ಬೆದಕಾಟ) ಗಳಾಗಿವೆ.

ಹಳತು ಹೊಸತು ಬೇರೆಯಲ್ಲ

37

ಬೀಳುವುದ ನಿಲ್ಲಿಪುದು, ಬಿದ್ದುದನು ಕಟ್ಟುವುದು ।
ಹಾಲೊಡೆಯೆ ಕಡೆದುದನು ತಕ್ರವಾಗಿಪುದು ॥
ಹಾಳ ಹಾಳಾಗಿಪುದು, ಹಳದ ಹೊಸತಾಗಿಪುದು ।
ಬಾಳಿಗಿದೆ ಚಿರಧರ್ಮ–ಮಂಕುತಿಮ್ಮ ॥ (ಪದ್ಯ 232)

ಇತಿಹಾಸ, ಚರಿತ್ರೆ ಎಂದರೆ ಮಾನವ ನಡೆದುಬಂದ ಕಥೆ. ಸಾವಿರಾರು ವರ್ಷಗಳು ಅವನುಮಾಡಿದ ಕೆಲಸಗಳ ಸಾಹಸ–ಸಾಧನೆಗಳ ಕಥೆ ಅವನ ಸೋಲು ಗೆಲುವುಗಳ ಕಥೆ. ಕಾಡುಮನುಷ್ಯ ನಾಡಮನುಷ್ಯನಾಗಿ ನಾಗರಿಕನಾದ ಕಥೆ.

ಮನುಷ್ಯ ಇತಿಹಾಸದಲ್ಲಿ ತಾನು ಮುಂದುವರೆಯಲು ಸುಖಹೊಂದಲು ನಾನಾರೀತಿಯ ಸಾಹಸಮಾಡುತ್ತಾ ಬಂದಿದ್ದಾನೆ. ಬಿದ್ದುಹೋದ ಕಟ್ಟಡಗಳನ್ನು (ಅರಮನೆ, ದೇವಸ್ಥಾನ ಕೋಟೆ ಇತ್ಯಾದಿ) ಜೀರ್ಣೋದ್ಧಾರ ಮಾಡಿದ್ದಾನೆ. (ಬೀಳುವುದ ನಿಲ್ಲಿಸುದು). ಇನ್ನು ಪೂರ್ತಿ ನೆಲಸಮವಾದ ಊರುಗಳನ್ನು ಮತ್ತೆ ಕಟ್ಟಿದ್ದಾನೆ. (ಬಿದ್ದುದನು ಕಟ್ಟುವುದು) ಪುನರುತ್ಥಾನ ಕಾರ್ಯ ಕೈಗೊಂಡಿದ್ದಾನೆ. ಇಷ್ಟಲ್ಲದೆ ಹಾಲು ಕೆಟ್ಟಾಗ ಒಡೆದರೆ (ಹಾಲೊಡೆದು) ಮೊಸರಾದಾಗ ಇದನ್ನು ಕಡೆದು ಮಜ್ಜಿಗೆಮಾಡಿ (ತಕ್ರವಾಗಿಪುದು) ಉಪಯೋಗಕ್ಕೆ

ಬರುವಂತೆ ಮಾಡಿದ ಹಾಗೆ (ಪರಿವರ್ತನೆ ಕಾರ್ಯಗಳನ್ನು ಸಾಧಾರಣಕ್ರಮಗಳನ್ನು ಕೈಗೊಂಡಿದ್ದಾನೆ. ಮೊದಲಿಗಿಂತ ಹೆಚ್ಚು ಉಪಯೋಗಕ್ಕೆ ಬರುವ ಹಾಗೆ ಮಾಡಲು ಯತ್ನಿಸಿದ್ದಾನೆ ಹೀಗೆ ಯಾವುದಕ್ಕೂ ಬಳಸಲಾಗದೆ ಹಾಳಾಗಿದ್ದರೆ ನಾಶ ಮಾಡುವುದು (ಹಾಳ ಹಾಳಾಗಿಪುದು) ಜೀವ ಹೋದಮೇಲೆ ಹಾಳಾದ ದೇಹವನ್ನು ಸುಟ್ಟಂತೆ ಅಥವಾ ಹೂಳಿದಂತೆ ಮಾಡುವಾಗ ವ್ಯರ್ಥವಾದ ಕಸವನ್ನು ತಿಪ್ಪೆಗೆ ಎಸದಂತೆ. ಕೆಟ್ಟದ್ದನ್ನು ನಾಶ ಮಾಡಿದ್ದಾನೆ. ಇನ್ನು ಹಳೆಯಕಟ್ಟಡ ಹಾಳಾದಕೆರೆ ಹಾಳಾದು ಬದುಕುಗಳನ್ನು ಉದ್ಧರಿಸಿದ್ದಾನೆ ಹೊಸಭವನಕ್ಕೆ ಸುಣ್ಣಬಣ್ಣ ಬಳಿದಂತೆ ಹಳೆಯ ವಿಚಾರಗಳನ್ನು ಹೊಸರೀತಿಯಲ್ಲಿ ಚಿಂತಿಸಿದ್ದಾನೆ. (ಹಳದ ಹೊಸತಾಗಿವುದು) ಹೀಗೆ ಬದಲಾಯಿಸು ವುದು, ಹೊಸದು ಮಾಡುವುದು ಇಲ್ಲದ್ದನ್ನು ನಿಜಮಾಡು ವುದೇ ಮಾನವನ ಇತಿಹಾಸ ಎನ್ನುತ್ತಾರೆ ಡಿವಿಜಿ.

ಜಗತ್ತು ಅರ್ಥಪೂರ್ಣ ಸೃಷ್ಟಿ

38

ಕಣ್ಣೆರಡದೇಕೆರಡುಮೊಂದೆ ಪಕ್ಕದೊಳೇಕೆ? ॥
ಬೆನ್ನೊಳೊಂದೆದೆಯೊಳೊಂದಿರಲು ಸುಕರವಲ? ॥
ಅನ್ಯಾಯ ವಿಕಟಂಗಳೆನಿತೊ ಸೃಷ್ಟಿಕ್ರಮದಿ ।
ಸೊನ್ನೆ ಜನವಾಕ್ಕಲ್ಲಿ–ಮಂಕುತಿಮ್ಮ ॥ (ಪದ್ಯ–234)

ಭಗವಂತನ ಸೃಷ್ಟಿಯಲ್ಲಿ ಒಂದು ಕ್ರಮವಿದೆ. ಅರ್ಥವಿದೆ. ಅದು ನಮಗೆ ತಿಳಿದಿಲ್ಲ. ನಾವು ನಮಗೆ ಅನಿಸಿದಂತೆ ಈ ಸೃಷ್ಟಿ ಬೇರೆ ರೀತಿ ಇದ್ದರೆ ಚೆನ್ನಾಗಿತ್ತು ಎಂದು ಎಷ್ಟೋವೇಳೆ ಅಂದುಕೊಳ್ಳುತ್ತೇವೆ. ಅದು ಸರಿ ಯಲ್ಲ. ಉದಾಹರಣೆಗೆ, ನಮಗೆ ಕಣ್ಣುಗಳೆರಡು ಒಂದರ ಪಕ್ಕ ಒಂದು ಮುಖದಲ್ಲಿದೆ. ಅದರಿಂದ ಮುಂದೆ ನೋಡುತ್ತೇವೆ. ಹಿಂದೆ ಕಾಣುವುದಿಲ್ಲ. ಅದರ ಬದಲಿಗೆ ಒಂದು ಕಣ್ಣು ಬೆನ್ನಿನ ಹಿಂದೆ ಇನ್ನೊಂದು ಮುಖದಲ್ಲಿ ಇದ್ದರೆ ಎಷ್ಟು ಚೆನ್ನ ಎಂದುಕೊಳ್ಳುತ್ತೇವೆ. ಆಗ ತುಂಬ ಅನುಕೂಲ (ಸುಕರ) ಅನ್ನಿಸುತ್ತದೆ. ಹಾಗೆಯೇ ಈ ಜಗತ್ತಿನಲ್ಲಿ ಸೃಷ್ಟಿಯಾಗಿರುವ ವಸ್ತುಗಳಲ್ಲಿ ಜೀವಿಗಳಲ್ಲಿ ಎಷ್ಟೋಪಾಲು ಅನ್ಯಾಯವಾದುದು ವಿಷಾದವಾದುದು, ಅಸಹ ಜವಾದುದು ಸುಂದರವಲ್ಲದು ಎನ್ನಿಸುತ್ತದೆ ಜನರ ಮಾತಿನಲ್ಲಿ. ಆದರೆ ಜನರ ಈ ಬಗೆಯಮಾತಿಗೆ

(ಜನವಾಕ್) ಏನೂ ಬೆಲೆಇಲ್ಲ ಅಂಥ ಮಾತು ಗಳು ಸೊನ್ನೆಗೆ ಸಮಾನವಾದುದು. ಅರ್ಥವಿಲ್ಲದ್ದು ಏಕೆಂದರೆ ಭಗವಂತನ ಸೃಷ್ಟಿಯರಹಸ್ಯ ಜಟಿಲವಾದುದು. ಅರ್ಥವಾಗುವುದು ಕಷ್ಟ. ಉದಾಹರಣೆಗೆ, ಯಾರೋ ಒಬ್ಬ ಸಣ್ಣಕುಂಬಳಬಳ್ಳಿಗೆ ದೊಡ್ಡ ಕುಂಬಳಕಾಯಿ ಏಕಿರಬೇಕು ಎಂದುಕೊಂಡ ಮಾವಿನಮರದಲ್ಲಿ ಅದು ಇರಬೇಕಿತ್ತು ಎಂದುಕೊಂಡ. ದಾರಿಯಲ್ಲಿ ಅವನ ತಲೆ ಮೇಲೆ ಗಾಳಿಗೆ ಮಾವಿನಕಾಯಿ ಉದುರಿ ಪೆಟ್ಟಾಯಿತು. ಆಗ ಅನ್ನಿಸಿತು ಮಾವಿನ ಮರದಲ್ಲಿ ಕುಂಬಳಕಾಯಿ ಬಿಟ್ಟಿದ್ದರೆ ನನ್ನಗತಿ ಏನಾಗುತ್ತಿತ್ತು ದೇವರೇ! ಎಂದುಕೊಂಡನು.

ಎಲ್ಲವೂ ಸಮಾನವಲ್ಲ

39

ನೆಲವೊಂದೆ, ಹೊಲ ಗದ್ದೆ ತೋಟ ಮರಳೆರೆ ಬೇರೆ ।
ಜಲವೊಂದೆ, ಸಿಹಿಯುಪ್ಪು ಜವುಗೂಟೆ ಬೇರೆ ॥
ಕುಲವೊಂದರೊಳೆ ಸೋದರವ್ಯಕ್ತಿಗುಣ ಬೇರೆ ।
ಹಲವುಮೊಂದುಂ ಸಾಜ–ಮಂಕುತಿಮ್ಮ ॥ (ಪದ್ಯ 237)

ಜಗತ್ತಿನಲ್ಲಿ ಮೂಲರೂಪದಲ್ಲಿ ಒಂದೇ ಆದರೂ ಹೊರಗೆ ಬೇರೆ ಬೇರೆ ರೂಪಗಳಲ್ಲಿದ್ದು ವ್ಯತ್ಯಾಸ ಕಾಣುತ್ತದೆ. ನಮಗಿರುವ ಭೂಮಿ ಒಂದೇ ಆದರೂ ಅದರಲ್ಲಿ ಹೊಲ, ಗದ್ದೆ, ತೋಟ, ಮರುಭೂಮಿ, ಎರೆನೆಲ ಇತ್ಯಾದಿ ವ್ಯತ್ಯಾಸಗಳಿವೆ. ನೀರು ಒಂದೇ ಆದರೂ ಸಿಹಿನೀರು, ಉಪ್ಪುನೀರು, ಜವುಳು ನೀರು, ಊಟೆ ನೀರು, ಮೊದಲಾದ ಪರಿಗಳಿವೆ. ಹಾಗೆಯೇ ಒಂದೇ ಕುಟುಂಬದಲ್ಲಿ ಹುಟ್ಟಿದವರಾದರೂ ಅಣ್ಣ–ತಮ್ಮಂದಿರಲ್ಲಿ, ಅಕ್ಕ ತಂಗಿಯರಲ್ಲಿ ಗುಣಸ್ವಭಾವಗಳಲ್ಲಿ ವ್ಯತ್ಯಾಸಗಳಿರುತ್ತವೆ. ಆದ್ದರಿಂದ ಲೋಕದಲ್ಲಿ ವ್ಯತ್ಯಾಸಗಳು ಸ್ವಾಭಾವಿಕ, ಪ್ರಕೃತಿಯಲ್ಲಿ ಏಕರೂಪತೆ ಸಮಾನತೆ ಇಲ್ಲ. ವೈವಿಧ್ಯವಿದೆ ಎಂದರಿಯಬೇಕು. ಅರ್ಥಮಾಡಿಕೊಳ್ಳಬೇಕು. ಈ ರೀತಿಯ ವ್ಯತ್ಯಾಸಗಳು ನಿನ್ನೆ ಮೊನ್ನೆಯದಲ್ಲ ಬಹುಕಾಲದಿಂದ ನಿಸರ್ಗದಲ್ಲಿ ಕಂಡುಬಂದ ಸ್ವಾಭಾವಿಕ ಸಂಗತಿಗಳಾಗಿವೆ.

ವ್ಯತ್ಯಾಸವಿದ್ದರೂ ಹೊಂದಾಣಿಕೆ ಇದೆ

40

ಬೆರಳುಗಳ ನೋಡವುಗಳೊಂದರಂತೊಂದಿಲ್ಲ ।
ಕರಧರ್ಮಕುಚಿತವಾ ಹೆಚ್ಚು ಕಡಮೆಗಳು ॥
ಪುರುಳ ಪಿಡಿವುವೆ ಬೆರಳ್ಗಳೆಲ್ಲಮೊಂದುದ್ದವಿರೆ? ।
ಸರಿಯಹುದು ಕಾರ್ಯದಲಿ –ಮಂಕುತಿಮ್ಮ ॥(ಪದ್ಯ 240)

ಸೃಷ್ಟಿಯಲ್ಲಿ ವ್ಯತ್ಯಾಸಗಳಿದ್ದರೂ, ಜನಗಳಲ್ಲಿ ವ್ಯತ್ಯಾಸ ಕಂಡುಬಂದರೂ ಅವುಗಳ ನಡುವೆ ಸಾಮರಸ್ಯವಿದೆ; ಸಮನ್ವಯ ವಿದೆ; ಹೊಂದಾಣಿಕೆಯಿದೆ ಎಂಬುದನ್ನು ಗಮನಿಸಬೇಕು. ಉದಾಹರಣೆಗೆ, ಮನುಷ್ಯನ ಕೈ ಬೆರಳುಗಳು ಒಂದೇ ಸಮನೆ ಇಲ್ಲ ಒಂದೊಂದು ಒಂದೊಂದು ಅಳತೆ, ಗಾತ್ರ, ಆಕಾರ, ಆದರೆ ಅವೆಲ್ಲ ಒಟ್ಟುಗೂಡಿದರೆ ಹಿಡಿತ ಸಿಗುತ್ತದೆ. ಏನನ್ನಾದರೂ ಹಿಡಿಯಲು ಶಕ್ಯವಾಗುತ್ತದೆ. ಹೊರನೋಟಕ್ಕೆ ಅಸಮತೆ ಕಂಡರೂ ಒಳಗೆ ಸಮತೆ ಇದೆ. ಒಬ್ಬ ತಾಯಿಗೆ ಹಲವು ಮಕ್ಕಳು ಇದ್ದರೆ, ಅವರಿಗೆ ತಾಯಿ ಪ್ರೀತಿ ಒಂದೇ. ಹೊರನೋಟಕ್ಕೆ ಅವರು ಬೇರೆಬೇರೆಯಾಗಿ ಕಾಣಿಸಬಹುದಷ್ಟೆ.

ಉದಾಹರಣೆಗೆ ಹಲವು ಮಕ್ಕಳಿಗೆ ಊಟ ಬಡಿಸುವಾಗ ಒಬ್ಬನಿಗೆ ಜಾಸ್ತಿ ಸಲ(ಹಸಿವು ಹೆಚ್ಚಿರುತ್ತದೆ) ಇನ್ನೊಬ್ಬನಿಗೆ ಒಂದೆಸಲ ಬಡಿಸಿದಿರೆ ಅದು ತಾಯಿ ಮಕ್ಕಳಿಗೆ ಮಾಡುವ ಪಕ್ಷಪಾತವಲ್ಲ ಸಮಂಜಸ ಕ್ರಮ ವಾಗಿರುತ್ತದೆ ತಾಯಿಗೆ ಮಕ್ಕಳ ಹಸಿವಿನ ಪ್ರಮಾಣ, ತಿಂಡಿಯ ಅಭಿರುಚಿ ಇತ್ಯಾದಿ ಎಲ್ಲವೂ ತಿಳಿದಿರುತ್ತದೆ. ಹಾಗಾಗಿ ಬಡಿಸುವುದರಲ್ಲಿ ವ್ಯತ್ಯಾಸ ಕಂಡರೂ ಎಲ್ಲರಿಗೂ ತಾಯಿ ಬಡಿಸಿದ ಊಟ ತೃಪ್ತಿ ತಂದಿರುತ್ತದೆ. (ಸರಿಯಿಹುದು ಕಾರ್ಯದಲಿ)

ದ್ವೇಷಿಯಲ್ಲೂ ಪ್ರೀತಿ ಇರುತ್ತದೆ

41

ಕೊಲೆಗಡಿಕನೆನಿಪ ಹುಲಿ ಸಲಹದೇಂ ಮರಿಗಳನು? ।
ಒಲುಮೆಕರುಳಡಗಿಹುದು ಪಗೆತನದ ಪೊಡೆಯೊಳ್ ॥
ನಲುಮೆಯನು ಹೊರಹೊಮ್ಮಿಸುವುದು ನರನುನ್ನತಿಕೆ।
ಒಲವಾತ್ಮವಿಸ್ತರಣ–ಮಂಕುತಿಮ್ಮ ॥ (ಪದ್ಯ 245)

ಪ್ರೀತಿ ಪ್ರೇಮ ಎಂಬುದು ನೆಲದೊಳಗಿನ ನಿಧಿಯಂತೆ ನಮ್ಮೆಲ್ಲರ ಹೃದಯದಲ್ಲಿ ಇರುತ್ತದೆ. ಅದು ಹೊರಗೆ ಕಾಣುವುದಿಲ್ಲ. ನೆಲದೊಳಗೆ ಜಲವಿದ್ದಂತೆ. ಹಾಗೆಯೇ ಹೊರಗೆ ದ್ವೇಷವಿದ್ದರೂ ಅದರ ಒಳಗೆ ಪ್ರೀತಿ ಅಡಗಿರುತ್ತದೆ. ಹೊರನೋಟಕ್ಕೆ ಪ್ರಾಣಿಗಳನ್ನೂ ಮನುಷ್ಯರನ್ನೂ ತಿನ್ನುವ ಕೊಲೆಗಡುಕ ಪ್ರಾಣಿ; ಆದರೆ ಅದಕ್ಕೂ ಪ್ರೀತಿ ಇರುವುದರಿಂದ ತನ್ನ ಮರಿಗಳನ್ನು ಸಾಕುತ್ತದೆ. ಹಾಗೆ ಮನುಷ್ಯನು ತನ್ನ ಅಂತರಂಗದಲ್ಲಿ ಪ್ರೀತಿಯನ್ನು ಹೊರಹೊಮ್ಮಿಸಿ ಜಗತ್ತಿಗೆ ತೋರಿಸಬೇಕು. ಅದೇ ಮನುಷ್ಯರ ಉನ್ನತಿಗೆ, ಅವನ ಶ್ರೇಷ್ಠತೆಗೆ ಸಾಕ್ಷಿ

ಹೀಗೆ ಪ್ರಾಣಿಗಳಲ್ಲಾಗಲಿ ಮನುಷ್ಯರಲ್ಲಾಗಲಿ ಕಂಡು ಬರುವ ಪ್ರೀತಿ–ಒಲವು ವಿಸ್ತಾರವಾದಂತೆಲ್ಲಾ ಭಗವಂತನ ಅಂಶ ಅಂತರಾತ್ಮದಲ್ಲಿ ಹೆಚ್ಚು ಹೆಚ್ಚಾಗಿ ಕಂಡುಬರುತ್ತದೆ (ಒಲವಾತ ವಿಸ್ತರಣ) ಆಗ ನಾವು ಭಗವಂತನಿಗೆ ಬೇಕಾದವರಾಗುತ್ತೇವೆ.

ಎಲ್ಲದಕ್ಕು ಸಿದ್ಧನಿರು

42

ಒಲ್ಲೆನೆನದಿರು ಬಾಳನ್, ಒಲವದೇನೆನ್ನದಿರು ।
ಉಲ್ಲಾಸಕೆಡೆಮಾಡು ನಿನ್ನಿನಾದನಿತು ।
ನಿಲ್ಲು ಕೆಚ್ಚೆದೆಯಿಂದಲನ್ಯಾಯಗಳನಳಿಸೆ ।
ಎಲ್ಲಕಂ ಸಿದ್ಧನಿರು–ಮಂಕುತಿಮ್ಮ ॥ (ಪದ್ಯ 258)

ಕಷ್ಟ ಬಂದಾಗ, ದುಃಖವಾದಾಗ, ರೋಗರುಜಿನ, ನೋವು ಒಂದಾಗ "ದೇವರೇ ನನ್ನನ್ನು ಏಕೆ ಹುಟ್ಟಿಸಿದೆ. ಈ ಬಾಳು ಸಾಕಾಗಿದೆ ಬೇಡ ಬದುಕುವುದು ಇನ್ನು" 'ಎಂದು ಜೀವನವನ್ನು ತಿರಸ್ಕರಿಸಿ ಸಾಯಲು ಯತ್ನಿಸುವುದನ್ನು ಮಾಡಬಾರದು. ದೇವರ ಅನುಗ್ರಹ, ಪ್ರೀತಿ, ದಯೆ ನನ್ನ ಮೇಲೆ ಎಲ್ಲಿದೆ? ಎಂದುಕೊಳ್ಳಬಾರದು (ಒಲವದೇನೆನ್ನದಿರು) ಅದರ ಬದಲಾಗಿ ಅನನುಕೂಲವನೇ ಅನುಕೂಲವೆಂದು ತಿಳಿದು, ಮನಸ್ಸನ್ನು ಆದಷ್ಟು ಸಂತೋಷದಲ್ಲಿರಿಸಲು ಯತ್ನಿಸಬೇಕು ಕೈಲಾದಷ್ಟು (ನಿನ್ನಿಂ ಆದ ಅನಿತು) ಆನಂದಪಡುವ, ಉಲ್ಲಾಸ ಉತ್ಸಾಹ ಉಂಟುಮಾಡುವ, ವಿಚಾರಗಳ ಕೆಲಸಗಳಿಗೆ, ಸಾಹಿತ್ಯ, ಸಂಸ್ಕೃತಿ, ಕಲೆಗಳತ್ತ ಮನಸ್ಸು ಮಾಡದೇ ಬೇಸರವಾಯಿತು ಎಂದರೆ ಸಂಗೀತ ಕೇಳಿ: ಚಿಂತೆ

ಮಾಡುತ್ತಾ ಕೂಡಬೇಡಿ. ಹಾಗೆಯೇ ಇತರರು ನಿನಗಾಗಲಿ ಬೇರೆಯವರಾಗಲಿ ಅನ್ಯಾಯ, ಮೋಸ, ವಂಚನೆ, ದ್ರೋಹ ಮಾಡಿದರೆ ಅದನ್ನು ನಿರ್ಭಯವಾಗಿ (ಕೆಚ್ಚೆದೆಯಿಂದ) ಅಂಜದೆ, ಅಳುಕದೆ, ಹೆದರದೆ, ಅವುಗಳ ವಿರುದ್ಧ ಹೋರಾಡಲು ಪ್ರತಿಭಟಿಸಲು ಸಿದ್ಧವಿರಬೇಕು. ಹೀಗೆ ನಮಗಾಗುವ ಬೇಸರ, ಹಿಂಸೆ ತೊಂದರೆಗಳನ್ನು ಎದುರಿಸಲು ಪ್ರಯತ್ನಿಸಬೇಕು. ಅದರಿಂದ ಬರುವ ಎಲ್ಲಾ ಬಗೆಯ ಕಷ್ಟನಷ್ಟಗಳನ್ನು ಸಹಿಸಲು ಸಿದ್ಧವಿರಬೇಕು ಯಾವುದಕ್ಕೂ ಅಂಜಬಾರದು.

ಸಮಬಾಳು-ಸಮಾನತೆ

43

ಎಲ್ಲರಿಗಮಾಗಿ ತಾನ್, ಎಲ್ಲರುಂ ತನಗಾಗಿ ।
ನಿಲ್ಲುವೇಕಾತ್ಮತೆಯ ಬಾಳ್ವೆಯಿಂ ಕಲಿಯಲ್ ॥
ಸಲ್ಲುವುಪಕರಣಗಳು ಮನೆ ರಾಜ್ಯ ಸಂಸಾರ ।
ವಲ್ಲಗಳೆಯದಿರವನು–ಮಂಕುತಿಮ್ಮ ॥ (ಪದ್ಯ 270)

ನಾವು ಎಲ್ಲರೂ ಒಂದೆ. ಸರ್ವರಿಗು ಸಮಪಾಲು ಸರ್ವರಿಗು ಸಮಬಾಳು ಎಲ್ಲಾ ಜನರು ಸುಖವಾಗಿರಬೇಕು. ಇವೇ ಮೊದಲಾದ ಮಾತುಗಳನ್ನು ಘೋಷಣೆಗಳನ್ನು ಭಾಷಣಗಳಲ್ಲಿ ಬರಹಗಳಲ್ಲಿ ಕಾಣುತ್ತೇವೆ. ಎಲ್ಲರಿಗಾಗಿ ತಾನು ಬಾಳಬೇಕು. ತನ್ನೊಂದಿಗಿರುವ ಸುತ್ತಮುತ್ತಲಿರುವ ಎಲ್ಲ ಜನರೊಂದಿಗೆ ಅವರಲ್ಲಿ ತಾನೊಬ್ಬ, ಅವರು ನಮಗಾಗಿ ಇರುವವರು ಎಂಬ ಏಕಾತ್ಮಭಾವನೆಯಿಂದ ಒಟ್ಟಾಗಿ ಇರಬೇಕು ಒಬ್ಬರಿಗೊಬ್ಬರು ನೆರವಾಗಿ ಬಾಳಬೇಕು. ಇದು ನಮಗೆ ಜೀವನಪಾಠ ಆಗಬೇಕು. ಆಗ ಇತರರು ನಮಗೆ ಬೇರೆಯವರು ಆಗದವರು ಎಂಬ ಭಾವನೆಯಾಗಲಿ ನಾವು ಬೇರೆಯವರಿಗೆ ಬೇಕಾಗಿಲ್ಲ ಎಂಬ ಭಾವನೆ ಬರುವುದಿಲ್ಲ ಎಲ್ಲರೂ ನನಗೆ, ನಾನು ಎಲ್ಲರಿಗಾಗಿ ಎಂಬ ಬಾಂಧವ್ಯ ಬೆಳೆಯುತ್ತದೆ. ಹೀಗಾಗಬೇಕಾದರೆ, ನಮ್ಮ ಕುಟುಂಬ ಸಂಸಾರ ರಾಜ್ಯ, ಇವೆಲ್ಲ ನಮ್ಮ ಒಟ್ಟಾಗಿರುವ

ಬಾಳಿಗೆ ಸಾಧನಗಳು (ಉಪಕರಣಗಳು) ಎಂದು ತಿಳಿದು ಜೀವಿಸಬೇಕು. ಇವೆಲ್ಲದರಿಂದ ನಾವು ಬೆಳೆಯಬೇಕು. ದೊಡ್ಡವರಾಗಬೇಕು. ಇದನ್ನೇ ದೊಡ್ಡವರು ಆತ್ಮೋದ್ಧಾರ ಮತ್ತು ಲೋಕೋದ್ಧಾರ ಎಂದು ಹೇಳಿದ್ದಾರೆ. ಎರಡರಲ್ಲೂ ಪ್ರತಿಯೊಬ್ಬರೂ ನಿರತರಾಗಬೇಕು ಎಂದು ಹೇಳಿದ್ದಾರೆ.

ಹಸಿವೇ ಎಲ್ಲಕ್ಕು ಮೂಲ

44

ಆನೆಗಾರ್ ಇರುವೆಗಾರ್ ಕಾಗೆಗಾರ್ ಕಪ್ಪೆಗಾರ್ ।
ಕಾಣಿಸುವರನ್ನವನು? ಹಸಿವವರ ಗುರುವು ॥
ಮಾನವನುಮಂತುದರಶಿಷ್ಯನವನಾ ರಸನೆ ।
ನಾನಾವಯವಗಳಲಿ-ಮಂಕುತಿಮ್ಮ ॥ (ಪದ್ಯ 278)

ಹಸಿವು, ಹೊಟ್ಟೆಪಾಡು ಎಲ್ಲ ಪ್ರಾಣಿಗಳಿಗೆ ಮನುಷ್ಯರಿಗೆ ಮೂಲ ಲಕ್ಷಣ. ಆನೆ, ಇರುವೆ ಕಾಗೆ, ಕಪ್ಪೆಗಳಿಗೆ ಆಹಾರ ದೊರಕಿಸಿಕೊಳ್ಳಲು ನಾನಾ ರೀತಿ ಅಲೆದಾಟಮಾಡುತ್ತವೆ ಹಸಿವು ಅದಕ್ಕೆ ಕಾರಣ. ಹಸಿವಿಲ್ಲದಿದ್ದಲ್ಲಿ ಅವು ಬೇಟೆ ಆಡುವುದು, ವಲಸೆಹೋಗುವುದು ಇತರ ಪ್ರಾಣಿಗಳನ್ನು ಹಿಂಸಿಸುವುದು ಮಾಡುತ್ತಿರಲಿಲ್ಲ. ಅಂತೆಯೇ ಮನುಷ್ಯನೂ ಹಸಿವು ನಿವಾರಣೆಗಾಗಿ, ತನ್ನ ನಾಲಿಗೆ ರುಚಿಯನ್ನು ತಣಿಸಲು ಹೊಟ್ಟೆ ತುಂಬಿಸಿಕೊಂಡು ತೃಪ್ತಿ ಹೊಂದಲು ಪ್ರಯತ್ನಿಸುತ್ತಾನೆ. ದೇಹದ ನಾನಾ ಭಾಗಗಳ ಸುಖಕ್ಕಾಗಿ ಶ್ರಮ ಪಡುತ್ತಾನೆ. ಕಣ್ಣಿನ ಹಸಿವಿಗೆ ಸುಂದರನೋಟದ ಹಸಿವು, ನಾಲಿಗೆ ರುಚಿಗೆ ರುಚಿಕರ ಆಹಾರ; ಕಿವಿಗಳ ಆನಂದಕ್ಕೆ ಸಂಗೀತ; ಸುಗಂಧದ ಗಾಳಿ ಮೂಗಿಗೆ ಬಯಸುತ್ತಾನೆ ಹೀಗೆ ಅಂಗಾಂಗಗಳ ಸುಖಕ್ಕೆ ಪ್ರಯತ್ನಿಸುತ್ತಾನೆ. ಪ್ರಾಣಿಗಳಂತೆಯೇ

ಹಸಿವಿನ ನಿವಾರಣೆಗೆ ಪ್ರಯತ್ನಿಸುವುದರಲ್ಲಿ ಮನುಷ್ಯನೂ ಒಬ್ಬಪ್ರಾಣಿಯೇ ಎನ್ನಬಹುದು. ಉದರನಿಮಿತ್ತಂ ಬಹುಕೃತ ವೇಷಂ. ಎಲ್ಲರು ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ ಮೊದಲಾದ ಮಹಾತ್ಮರ ಮಾತುಗಳನ್ನೇ ಈ ಪದ್ಯದಲ್ಲಿ ಬೇರೆ ರೀತಿ ಹೇಳಿದ್ದಾರೆ ಅಷ್ಟೇ. ಹಸಿವು ಎಲ್ಲದಕ್ಕು ಮೂಲಕಾರಣ ಎಂಬುದು ಡಿವಿಜಿಯವರ ಇಲ್ಲಿಯ ಮಾತು.

ಸದಾ ಸಜ್ಜನರಿಗೆ ನೆರವಾಗಬೇಕು

45

ರಾಮನಿರ್ದಂದು ರಾವಣನೊಬ್ಬನಿರ್ದನಲ ।
ಭೀಮನಿರ್ದಂದು ದುಶ್ಯಾಸನನದೊರ್ವನ್ ॥
ಈ ಮಹಿಯೊಳನ್ಯಾಯಕಾರಿಯಿಲ್ಲದುದೆಂದು?।
ರಾಮಭಟನಾಗು ನೀಂ–ಮಂಕುತಿಮ್ಮ ॥ (ಪದ್ಯ 288)

ಲೋಕದಲ್ಲಿ ಸಜ್ಜನರು ಇದ್ದ ಕಡೆ ದುರ್ಜನರೂ ಇರುತ್ತಾರೆ. ಜಗತ್ತಿನಲ್ಲಿ ಹಗಲು–ರಾತ್ರಿ ಬೆಳಕು–ಕತ್ತಲೆ ಎರಡೂ ಇರುವುದು ನಿಸರ್ಗ ನಿಯಮ. ಇತಿಹಾಸವೇ ಅದಕ್ಕೆ ಸಾಕ್ಷಿ. ತ್ರೇತಾಯುಗದಲ್ಲಿ ರಾಮನಿದ್ದನು, ರಾವಣನೂ ಇದ್ದನು. ದ್ವಾಪರಯುಗದಲ್ಲಿ ಭೀಮನಿದ್ದನು. ದುಶ್ಯಾಸನನೂ ಇದ್ದನು. ಹೀಗಾಗಿ ಈ ಲೋಕದಲ್ಲಿ ಶಿಷ್ಟರು ಇದ್ದಂತೆಯೇ ದುಷ್ಟರು ಎಲ್ಲಾ ಕಾಲದಲ್ಲೂ ಇರುತ್ತಾರೆ. ದುಷ್ಟರನ್ನು ನಿಗ್ರಹಿಸಲು ನಾವು ರಾಮನಂತೆ ಮಹಿಮಾವಂತರೂ ಭೀಮನಂತೆ ಸಾಹಸವಂತರೂ ಆಗದಿದ್ದರೂ ಚಿಂತೆಯಿಲ್ಲ. ಸುಮ್ಮನಿರಬಾರದು. ಸಜ್ಜನರನ್ನು ಕಾಪಾಡಬಲ್ಲ ರಾಮನಂಥವರಿಗೆ ಬೆಂಬಲಿಸುವ ಭಕ್ತ ಹನುಮನಂತೆ ಭಂಟ ನಾಗುವುದನ್ನು ಕಲಿಯಬೇಕು. ಭೀಮನಂಥ ಸಾಹಸವಂತರನ್ನು ಮೆಚ್ಚಬೇಕು. ಇದು ಪ್ರತಿಯೊಬ್ಬರ ಕರ್ತವ್ಯ ಎಂಬುದು ಮಂಕುತಿಮ್ಮನ ಮಾತು.

ನಿನ್ನನ್ನು ನೀನು ತಿದ್ದಿಕೊ

46

ತಿದ್ದಿಕೊಳೊ ನಿನ್ನ ನೀಂ; ಜಗವ ತಿದ್ದುವುದಿರಲಿ ।
ತಿದ್ದಿಕೆಗಮೊಂದು ಮಿತಿಯುಂಟು ಮರೆಯದಿರು ॥
ಉದ್ದ ನೀಂ ಬೆರಳನಿತು ಬೆಳೆದೀಯೆ ಸಾಮಿಂದೆ ।
ಸ್ಪರ್ಧಿಯೆ ತ್ರಿವಿಕ್ರಮಗೆ? ಮಂಕುತಿಮ್ಮ ॥ (ಪದ್ಯ 292)

ಲೋಕದಲ್ಲಿ ಎರಡು ರೀತಿ ಉದ್ಧಾರದ ಮಾರ್ಗಗಳಿವೆ ಒಂದು ಆತ್ಮೋದ್ಧಾರ ಮಾರ್ಗ ಎಂದರೆ ತನ್ನನ್ನು ತಾನು ತಿದ್ದಿಕೊಳ್ಳುವುದು. ಇನ್ನೊಂದು ಲೋಕದಲ್ಲಿ ಇತರರನ್ನು ತಿದ್ದುವುದು. ಲೋಕೋದ್ಧಾರ ಮಾರ್ಗ. ತಿದ್ದುವುದು ಎಂದರೆ, ಅವರನ್ನು ಸರಿಹಾದಿಗೆ, ಸತ್ಯದ ದಾರಿಗೆ ಕರೆತರುವುದು. ಕೆಟ್ಟವರನ್ನು ಒಳ್ಳೆಯವರನ್ನಾಗಿ ಮಾಡುವುದು. ಉಳಿದವರಿಗೆ ಉಪಕಾರ ಮಾಡಲು, ಉದ್ಧಾರ ಮಾಡುವ ಮೊದಲು ತನ್ನನ್ನೇ ತಾನು ನೆಟ್ಟಗಾಗಿಸಿಕೊಳ್ಳುವುದು ಮುಖ್ಯ. ನಾವೇ ಆರೋಗ್ಯವಂತರಾಗದಿದ್ದರೆ ಉಳಿದವರ ಆರೋಗ್ಯ ನೋಡಿಕೊಳ್ಳುವುದು ಹೇಗೆ? ನಾವೇ ತಿರುಪೆ ಬೇಡುವಂತೆ ಇದ್ದರೆ ದಾನ ಮಾಡುವುದು ಎಲ್ಲಿ ಬಂತು? ನಾವೇ ಕೆಟ್ಟವರಾಗಿದ್ದರೆ ಉಳಿದವರಿಗೆ ಬುದ್ಧಿ ಹೇಳುವುದೇನಿದೆ? ಆದ್ದರಿಂದ ಮೊದಲು 'ಆರೋಗ್ಯವಂತರು ಸಜ್ಜನರು ಶ್ರೀಮಂತರು

ನಾವಾಗಬೇಕು. ಆಗ ಇತರರನ್ನು ಉದ್ಧಾರ ಮಾಡಲು ಸಾಧ್ಯ. ಆದರೆ ನಮ್ಮ ಆರೋಗ್ಯ ರಕ್ಷಣೆಗೆ, ಆಹಾರ, ಐಶ್ವರ್ಯಗಳಿಕೆಗೆ ಒಂದು ಮಿತಿ ಇರಬೇಕು ಅತಿಯಾಗಿ ಸಂಪಾದಿಸುವ ಸ್ಪರ್ಧೆಗಳು ಆಗಬಾರದು, ನಾವು ಬೆಳೆಯಬೇಕು ಆದರೆ ಅದಕ್ಕೆ ಮಿತಿ ಇದೆ ಎಂಬುದನ್ನು ಮರೆಯಬಾರದು. ಅಂಗಸಾಧನೆ, ಯೋಗ ವ್ಯಾಯಾಮ ಮಾಡಿದಾಗ ಆರೋಗ್ಯ ಸುಧಾರಿಸಬಹುದು ಸಾಕಷ್ಟು ಎತ್ತರ ಬೆಳೆಯಬಹುದು ಹಾಗಂತ ಮೂರು ಲೋಕಗಳನ್ನು ಆವರಿಸಿ ಬೆಳೆದ ವಾಮನನಂತೆ ಬೆಳೆಯಲು ಶಕ್ಯವೇ ಇಲ್ಲ. ಎಂದರೆ ಅತಿ ಅನ್ನುವುದು ಸಲ್ಲದು. ನಮ್ಮ ಬೆಳವಣಿಗೆ ಅಭಿವೃದ್ಧಿಗೆ ಒಂದು ಮಿತಿ ಇದೆ ಎಂದು ತಿಳಿಯಬೇಕು. ವ್ಯಾಯಾಮದಿಂದ ಬೆರಳನಿತು ಉದ್ದ ಬೆಳೆಯಬಹುದು (ನೀಂ ಬೆಂಳನಿತು ಬೆಳೆದೀಯೆ) ಹತ್ತಾರು ಅಡಿ ಎತ್ತರವಲ್ಲ ಎನ್ನುತ್ತಾರೆ ಡಿವಿಜಿ.

ಸುಖ ಜೀವನದ ಬಾಳಾಗಲಿ

47

ಉಪ್ಪಿಷ್ಟು ಹುಳಿಯಿಷ್ಟು ಕಾರ ಸಿಹಿಯಷ್ಟಿಷ್ಟು ।
ಒಪ್ಪಿರ್ದೊಡದು ಭೋಜ್ಯವಂತು ಜೀವಿತಮುಂ ॥
ತಪ್ಪು ಸರಿ ಬೆಪ್ಪು ಜಾಣಂದಕುಂದುಗಳ ಬಗೆ ।
ಯಿಪ್ಪತ್ತು ಸೇರೆ ರುಚಿ–ಮಂಕುತಿಮ್ಮ ॥ (ಪದ್ಯ 294)

ಹಬ್ಬ–ಹರಿದಿನಗಳಲ್ಲಿ, ಜಾತ್ರೆ–ಉತ್ಸವಗಳಲ್ಲಿ, ಸಮಾರಾಧನೆ ಗಳಲ್ಲಿ ಭೋಜನವೆಂದರೆ ಭರ್ಜರಿ ಊಟ; ನಾನಾ ರೀತಿಯ ಸಿಹಿ, ಖಾರಗಳ ಭಕ್ಷಭೋಜ್ಯಗಳಿಂದ ಕೂಡಿರುತ್ತವೆ. ಅಂಥ ಊಟವನ್ನು ಷಡ್ರಸಾನ್ನಭೋಜನ ಎನ್ನುತ್ತಾರೆ. ಅದರಲ್ಲಿ ಉಪ್ಪು, ಹುಳಿ, ಕಾರ, ಸಿಹಿ, ಒಗರುಗಳು ನಿಯಮಿತ ಪ್ರಮಾಣದಲ್ಲಿ ಸೇರಿರುತ್ತದೆ. ತಿನ್ನುವ ಆಹಾರ ರುಚಿಕರವಾಗಿ ಇನ್ನಷ್ಟು ಮತ್ತಷ್ಟು ತಿನ್ನಬೇಕು ಎನ್ನಿಸುತ್ತದೆ. ಹಾಗೆಯೇ ನಮ್ಮ ಬದುಕು ಸಹ. ತಪ್ಪು ಸರಿ, ಬೆಪ್ಪು, ಜಾಣತನ, ಕುಂದು, ಕೊರತೆಗಳೆಂಬ ಬಗೆಬಗೆಯ ಅನು ಭವಗಳ, ಗುಣಗಳ ರುಚಿಗಳು. ಸ್ವಭಾವಗಳು ಹತ್ತಾರು ಸೇರಿ ನಮ್ಮ ಜೀವನ ಸ್ವಾರಸ್ಯಕರವಾಗಿ ಆನಂದಕರವಾಗಿ ಕುತೂಹಲಕರವಾಗಿ ಷಡ್ರಸಾನ್ನಭೋಜನ ದಂತೆ ವೈವಿಧ್ಯಮಯವಾಗಿ ಸವಿಯಾಗಿ ಇರುತ್ತದೆ. ಇದನ್ನು ಅರ್ಥಮಾಡಿ ಕೊಳ್ಳಬೇಕು. ಸುಖ–ದುಃಖಗಳು

ಕಷ್ಟ–ನಷ್ಟಗಳು ಕುಂದು ಕೊರತೆಗಳು ಆನಂದ ಅನಿಷ್ಟಗಳು ಯಾವುದೇ ರೀತಿಯ ಅನುಭವಗಳನ್ನು. ಅವು ನಮ್ಮ ಬಾಳಿನ ಸವಿಯನ್ನು ಹೆಚ್ಚಿಸುವ ಸಾಧನಗಳೆಂದು ತಿಳಿದು ಎಲ್ಲವನ್ನು ಒಂದೇ ರೀತಿಯಾಗಿ ಅನುಭವಿಸುವುದನ್ನು ಕಲಿಯಬೇಕು ಆಗ ನಮ್ಮ ಬಾಳು ಸವಿಸವಿಯಾದ ಭೋಜನದಂತೆ ಆಗುತ್ತದೆ. (ಬಗೆಯಿಪ್ಪತ್ತು ಸೇರೆ ರುಚಿ)

ನಿಸರ್ಗದಿಂದ ಎಲ್ಲರಿಗೂ ಸಂತೋಷ

48

ಗಿಡದಿ ನಗುತಿರುವ ಹೂ ಪ್ರಕೃತಿಸಖನಿಗೆ ಚೆಂದ ।
ಮಡದಿ ಮುಡಿದಿರುವ ಹೂ ಯುವಕಂಗೆ ಚೆಂದ ॥
ಗುಡಿಯೊಳಗೆ ಕೊಡುವ ಹೂ ದೈವಭಕ್ತಗೆ ಚೆಂದ ।
ಬಿಡಿಗಾಸು ಹೂವಳಗೆ–ಮಂಕುತಿಮ್ಮ ॥ (ಪದ್ಮ 300)

ಪ್ರಕೃತಿ ಎಂದರೆ ಗಿಡ ಮರಗಳ ಪಶುಪಕ್ಷಿಗಳ, ಹಣ್ಣು ಹೂಗಳ ಪ್ರಪಂಚ ಎಂದರೆ ತಪ್ಪಿಲ್ಲ. ಪ್ರಕೃತಿ ಒಂದು ನಂದನವನ ಇದ್ದಂತೆ. ನಾನಾ ರೀತಿ ಜನರಿಗೆ ನಾನಾ ಬಗೆಯ ಸಂತೋಷ ಕೊಡುತ್ತದೆ. ಉದಾಹರಣೆಗೆ, ಪಾರಿಜಾತ, ಗುಲಾಬಿ ಮಲ್ಲಿಗೆಯ ಅಂದಚೆಂದದ ಸುವಾಸನೆಯ ಹೂಗಳು ಗಿಡಗಳಲ್ಲಿ ಅರಳುತ್ತವೆ. ಅದನ್ನು ಗಿಡದಿಂದ ಬಿಡಿಸಿಕೊಂಡು ತೆಗೆದು ಕೊಂಡವರು. ಯುವಕರು ತಮ್ಮ ಹೆಂಡತಿಗೆ ಮುಡಿಯಲು ಕೊಟ್ಟು ಸಂತೋಷಪಡಬಹುದು; ಭಕ್ತರಾದವರು. ಗುಡಿಯಲ್ಲಿ ದೇವರಿಗೆ ಪೂಜೆಗೆ ಅರ್ಪಿಸಿ ಆನಂದಪಡಬಹುದು: ಇನ್ನು ನಿಸರ್ಗ ಪ್ರಿಯರಾದವರು ಗಿಡ ದಲ್ಲಿ ಅರಳಿರುವ ಹೂವನ್ನು ಕೀಳದೆ ಹಾಗೆಯೇ ನೋಡುತ್ತ ನಲಿಯ ಬಹುದು; ಹೀಗೆ

ಹೂವುಗಳು ಬಗೆಬಗೆಯ ಜನರಿಗೆ ಬಗೆಬಗೆಯ ಸಂತೋಷವನ್ನು ಕೊಟ್ಟರೆ, ಆ ಹೂವುಗಳನ್ನು ಗಿಡದಿಂದ ಬಿಡಿಸಿ ಕಾಸಿಗೆ ಮಾರುವವಳಿಗೆ ಅದನ್ನು ಕೊಳ್ಳುವವರು ಕೊಡುವ ಕಾಸೇ ಆನಂದ ತರುತ್ತದೆ. ಆದ್ದರಿಂದ ಒಬ್ಬರ ಆನಂದ ಇನ್ನೊಬ್ಬರದಲ್ಲ. ಆದರೆ ಎಲ್ಲರಿಗೂ ಅವರವರದೇ ರೀತಿ ಆನಂದದಾಯಕವಾಗಿರುತ್ತದೆ. ಯಾವು ದೇ ಬಗೆಯ ಆನಂದವಾಗಲಿ ಪ್ರಕೃತಿಯಿಂದ ಎಲ್ಲರಿಗೂ ಸಂತೋಷವಿದೆ ಎಂಬುದು ಇಲ್ಲಿ ತಿಳಿಸಿರುವ ಸಂಗತಿ ಆಗಿದೆ.

ಸಿಕ್ಕಿದ್ದೆಲ್ಲಾ ಬಯಸಬಾರದು

49

ಇಲ್ಲಿ ಚೆನ್ನಲ್ಲಿ ಚೆನ್ನೆಲ್ಲೊ ಚೆನ್ನೆನುತೆಣಿಸಿ ।
ಹುಲ್ಲುಬಯಲೊಂದಡೆಯಿನೊಂದಕ್ಕೆ ನೆಗೆದು ॥
ಮೆಲ್ಲದೆಯೆ ಧಾವಿಸುತ ದಣಿವ ಕರುವನು ಪೋಲ್ತೊ ।
ಡೆಲ್ಲಿಯೋ ಸುಖ ನಿನಗೆ? –ಮಂಕುತಿಮ್ಮ ॥ (ಪದ್ಯ 301)

ಮನುಷ್ಯ ಸುಖವನ್ನು ಇರುವುದರಲ್ಲಿ ಇದ್ದ ಕಡೆ ಹುಡುಕಿಕೊಳ್ಳಬೇಕು. ಆ ದೇಶದಲ್ಲಿ ಈ ದೇಶದಲ್ಲಿ ಆ ಕ್ಷೇತ್ರದಲ್ಲಿ ಈ ಕ್ಷೇತ್ರದಲ್ಲಿ ಎಂದು ಒಂದು ರಂಗದಿಂದ ಇನ್ನೊಂದು ರಂಗಕ್ಕೆ ನೆಗೆಯುತ್ತಿದ್ದರೆ ಸುಖವಿಲ್ಲ. ಕರುವೊಂದು ಹುಲ್ಲು ಬಯಲಲ್ಲಿ ಇದ್ದ ಕಡೆ ಮೇಯದೆ ಅಲ್ಲಿ ಚೆನ್ನಾಗಿದೆ ಎಂದು ಆ ಕಡೆಗೆ ಇಲ್ಲಿ ಚೆನ್ನಾಗಿದೆ ಎಂದು ಈ ಕಡೆಗೆ ಚಂಗ ಚಂಗನೆ ನೆಗೆಯುತ್ತಾ ಇದ್ದರೆ, ಅದು ಹುಲ್ಲು ಮೇಯದೆ ಉಪವಾಸ ವಿರಬೇಕಾಗುತ್ತದೆ. ಆದ್ದರಿಂದ ಇತರರ ಉದ್ಯೋಗಗಳನ್ನು ನೋಡಿ. ಅದಕ್ಕಾಗಿ ಒಂದರಿಂದ ಇನ್ನೊಂದಕ್ಕೆ ಅಲೆ ದಾಡುತ್ತಿದ್ದರೆ ಪ್ರಯೋಜನ ವಿಲ್ಲ. ತನಗೆ ಸೂಕ್ತವಾದ, ದೊರೆತ ಉದ್ಯೋಗದಲ್ಲೇ ಸಾಧನೆ ಮಾಡ ಬೇಕು. ತನ್ನ ಇತಿಮಿತಿ ತಿಳಿದುಕೊಂಡು ಇದ್ದಲ್ಲಿಯೇ ಸಾಧನೆ ಮಾಡಿದರೆ ಅದೇ ಸುಖ.

ದೂರದ ಬೆಟ್ಟ ನುಣ್ಣಗೆ ಎಂಬಂತೆ ಇತರರ ಹಿರಿಮೆ-ಗರಿಮೆ ಸಾಧನೆ ಅಂತಸ್ತು ಉದ್ಯೋಗಗಳು ಆಕರ್ಷಕವೆನಿಸಿದರೂ ನಮಗೂ ಬೇಕು ಅವೆಲ್ಲ ಎನಿಸಿದರೂ ನಮ್ಮ ಶಕ್ತಿ ಸಾಮಾರ್ಥ್ಯ ಅವಕಾಶಗಳ ಹಿನ್ನೆಲೆಯಲ್ಲಿ ನಮ್ಮ ಯೋಗ್ಯತೆಗೆ ತಕ್ಕಂತ ಕೆಲಸಗಳಲ್ಲಿ ತೊಡಗಬೇಕು ಹುಲಿಯನ್ನು ನೋಡಿ ನರಿ ಬರೆ ಹಾಕಿಸಿಕೊಂಡಿತು ಎಂಬಂತಾಗ ಬಾರದು.

ಬುಗರಿ ಆಟದ ಪಾಠ

50

ತಿರುತಿರುಗಿ ತಿರುಗುತ್ತೆ ಬುಗುರಿ ತಾನೇ ಸೋತು ।
ತಿರೆಗುರುಳುವುದು ತನ್ನ ಬಲವ ತಾಂ ಕಳೆದು ॥
ನರನುಮಂತೆಯೆ ಸುತ್ತಿ ಸುತ್ತಿ ಕಡೆಗೊಂದು ದಿನ ।
ತೆರುವನಸ್ಥಿಯ ಧರೆಗೆ–ಮಂಕುತಿಮ್ಮ ॥ (ಪದ್ಯ 316)

ಬುಗುರಿ ಆಟ ಎಲ್ಲ ಮಕ್ಕಳಿಗೂ ಗೊತ್ತಿರುವ ಆಟ. ಆಡುವ ಆಟ, ಬಾಚಿ ಇರುವ ಮರದ ಬುಗುರಿಗೆ ಚಾಟಿಸುತ್ತಿ ಬೀಸಿ ಬುಗುರಿ ಎಸೆದು ಆಡುವ ಆಟದಲ್ಲಿ ಬುಗುರಿ ನೆಲದಮೇಲೆ ಗರಗರನೆ ತಿರುಗುತ್ತಿರುತ್ತದೆ. ಹಾಗೇ ತಿರುಗುತ್ತ ತಿರುಗುತ್ತ ವೇಗ ಕಡಿಮೆ ಆಗುತ್ತಾ ಕೊನೆಗೊಂದು ಸಲ ನೆಲಕ್ಕೆ ಉರುಳುತ್ತದೆ. ಈ ಮಕ್ಕಳ ಬುಗುರಿ ಆಟ ದೊಡ್ಡವರಿಗೆ ಒಂದು ಪಾಠ ಕಲಿಸುತ್ತದೆ. ಮನುಷ್ಯನು, ಹಣ, ಅಧಿಕಾರ, ಅಂತಸ್ತು ವಿದ್ಯೆ ಕಲಿತು ಅಹಂಕಾರಪಟ್ಟು, ನನ್ನ ಸಮಾನವಿಲ್ಲ ಯಾರೂ ಎಂಬಂತೆ ಎಲ್ಲ ವಿಚಾರಗಳಲ್ಲೂ ಮೆರೆಯುತ್ತಾನೆ. ಬುಗುರಿ ಗರಗರ ಎಂದು ವೇಗವಾಗಿ ತಿರುಗಿದಂತೆ, ಎಲ್ಲರಲ್ಲೂ ಎಲ್ಲಕಡೆ ಬೀಗಿ ಮೆರೆಯುತ್ತಾನೆ. ಅವನ ಶಕ್ತಿ ಹಣ, ಅಧಿಕಾರ ಆರೋಗ್ಯ ಇದ್ದುದ್ದು ಬುಗುರಿ ವೇಗ ಕ್ರಮೇಣ ಕಡಿಮೆ ಆದಂತೆ ಕುಗ್ಗುತ್ತಾ ಬರುತ್ತದೆ.

ಕೊನೆಗೊಂದು ದಿನ ದೇಹ ಶಿಥಿಲಗೊಂಡು ಧರೆಗೆ ಉರುಳುತ್ತಾನೆ (ತೆರುವನು ಅಸ್ಥಿಯಧರೆಗೆ) ಮಣ್ಣುಪಾಲಾಗುತ್ತಾನೆ ಬುಗುರಿ ಉರುಳಿದ ಹಾಗೆ ಆಗುತ್ತದೆ.

ಆದ್ದರಿಂದ ಹಣ ಅಧಿಕಾರ ಅಂತಸ್ತು ಶಕ್ತಿ ಸಾಮರ್ಥ್ಯ ಇದ್ದಾಗ ಮೆರೆಯದೆ, ವಿಜೃಂಭಿಸದೆ ವಿನಯದಿಂದ ಉಪಕಾರಿ ಯಾಗಿ ಬಾಳಬೇಕೆಂಬ ಪಾಠವನ್ನು ಮಕ್ಕಳ ಬುಗುರಿ ಆಟ ತಿಳಿಸುತ್ತದೆ.

ಅವರವರ ಅನುಭವ ಅವರವರಿಗೆ

51

ಸತ್ಯಾನುಭವವೆಲ್ಲರಿಂಗಮೊಂದೆಂತಹುದು ? ।
ಬೆಟ್ಟದಡಿಯೊಳಗೊಬ್ಬ; ಕೋಡಬಳಿಯೊಬ್ಬ ॥
ಎತ್ತರದ ದೃಶ್ಯ ಕಣಿವೆಯೊಳಿಹನಿಗಾದೀತೆ ? ।
ನೇತ್ರದಂದದೆ ನೋಟ–ಮಂಕುತಿಮ್ಮ ॥ (ಪದ್ಯ 333)

ನಮ್ಮ ನಮ್ಮ ಅನುಭವಗಳಿಂದ ಸತ್ಯವನ್ನು ಕಂಡುಕೊಳ್ಳಬೇಕು. ಇನ್ನೊಬ್ಬರ ಅನುಭವ ನಮಗೆ ಆಧಾರವಾಗದು. ಅದು ನಮ್ಮ ಅನುಭವ ಆಗದು. ಬೆಟ್ಟದ ಮೇಲೆ ನಿಂತವರಿಗೆ ಕಾಣುವ ಊರ ದೃಶ್ಯ ಬೆಟ್ಟದ ಬುಡದಲ್ಲಿ ಇದ್ದವರಿಗೆ ಸಿಗದು. ಬೆಟ್ಟದ ಬುಡದಲ್ಲಿದ್ದ ವನಿಗೆ ಕಾಣುವ ವಿವರಗಳು ಹುಳು ಹುಪ್ಪಟೆ, ಗಿಡ, ಹೂ, ಬಳ್ಳಿಗಳ ವಿವರ ಕೋಡುಗಲ್ಲಿ ನಲ್ಲಿ ಇರುವವನಿಗೆ ಕಾಣದು. ನಾವು ನಿಂತನೆಲೆಯಲ್ಲಿ ನಮ್ಮಕಣ್ಣಿಗೆ ಕಾಣುವುದೇ. ನಮಗೆ ತಿಳಿಯುವ ಸತ್ಯ. ಆದ್ದರಿಂದ ನಾವು ಬಾಳಿನಲ್ಲಿ ನಮ್ಮ ಅನುಭವದಿಂದಲೇ ಬರುವ ಬೆಳಕಿನಿಂದ ದಾರಿಯನ್ನು ನಾವು ಕಂಡುಕೊಳ್ಳಬೇಕು.

ಬೆಟ್ಟದ ಮೇಲಿದ್ದೇವೆಯೇ ಬೆಟ್ಟದ ಕೆಳಗಿದ್ದೇವೆಯೇ ಎಂದು ತಿಳಿದು ಬೆಟ್ಟಪ್ರದೇಶದ ವೀಕ್ಷಣೆ ಮಾಡುವಂತೆ ಜಗತ್ತಿನಲ್ಲಿ ಜನರ ನಡುವೆ ನಾವು ಎಲ್ಲಿದ್ದೇವೆ ಹೇಗೆವರ್ತಿಸಬೇಕು ಎಂಬುದನ್ನು ತಿಳಿದು ಬಾಳಬೇಕು.

ನಿನ್ನಿಂದಲೇ ಎಲ್ಲ ಸಾಧ್ಯವಿಲ್ಲ

52

ನಿನ್ನ ಜೀವಿತವೆಲ್ಲ ನಿನ್ನ ಕೈಮಾಳ್ಕೆಯೇಂ ? ।
ಅನ್ಯಶಕ್ತಿಗಳೆನಿತೊ ಬೆರೆತಿರುವುವಲ್ಲಿ ॥
ಅನ್ನವಿಡುವರು, ತಿಳಿವನೀವರ್, ಒಡನಾಡುವರು ।
ನಿನ್ನ ಬಾಳ್ಗಿವರರೆ? –ಮಂಕುತಿಮ್ಮ ॥ (ಪದ್ಯ 336)

ಯಾವುದೇ ಕೆಲಸ–ಸಾಧನೆ ಒಬ್ಬರಿಂದಲೇ ಆಗುವುದಿಲ್ಲ. ನನ್ನಿಂದಲೇ ಆಯಿತು ಎಂಬ ಅಹಂ ಇರಬಾರದು. ನಾವು ಮಾಡಿದ ಸಾಧನೆಗೆ ಇತರರ ನೆರವು ನಾನಾ ರೀತಿಯಲ್ಲಿ ದೊರಕಿರುತ್ತದೆ. ನಾವು ಒಂದು ಸಾಧನೆ ಮಾಡಲು ಸಾಧ್ಯವಾಗಿದ್ದರೆ ಅದಕ್ಕೆ ಅನೇಕರು ಕಾರಣ ಕರ್ತರು ಅನ್ನ ಹಾಕಿ ಬೆಳೆಸಿದ ತಾಯಿ ತಂದೆಯರು; ಜ್ಞಾನದಾನ ಮಾಡಿದ ಗುರುಗಳು; ಧೈರ್ಯ ತುಂಬಿ ಜತೆಗೇ ಇದ್ದ ಸ್ನೇಹಿತರು ಕಾರಣಕರ್ತ ರಾಗುತ್ತಾರೆ ಎಂಬುದನ್ನು ಮರೆಯಬಾರದು. ಇತರರ ಸಹಾಯವನ್ನು ಎಂದೂ ಮರೆಯಬಾರದು. ನಾವೇ ಸರ್ವಸಮರ್ಥರು ಎಂಬ ಅಹಂ ಭಾವನೆಯನ್ನು ಎಂದೂ ತಾಳಬಾರದು. ಯಾವುದೇ ಕಾರ್ಯ ಸಾಧನೆಗೆ ಇತರರ ನೆರವು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇದ್ದೇ ಇರು ತ್ತದೆ. ಅದನ್ನು ನಾವು ಮರೆಯಬಾರದು. ಇತರರ ಸಹಾಯ ನಮಗೆ ಆದುದನ್ನು ತಿಳಿದಾಗ ಅವರಿಗೆ ಕೃತಜ್ಞತೆ ಸಲ್ಲಿಸುವುದು ನಮ್ಮ ಕರ್ತವ್ಯ.

ಅನೇಕ ಕುಟುಂಬಗಳ ಕಥೆ

53

ಪೂಸರದಿ ಕಾಂತಿ ಸೌರಭ ಮೊದಲನೆಯ ತಾಸು ।
ವಾಸನೆಯ ಹಳಸು ಕೊಳಕೊಳಚೆಯಾ ಬಳಿಕ ॥
ಮಾಸಿ ನಲನಲುಗಿ ಮುಳ್ಳಹುದು ಮೂರನೆ ತಾಸು ।
ಸಂಸಾರಕಥೆಯದುವೆ – ಮಂಕುತಿಮ್ಮ ॥ (ಪದ್ಯ 342)

ನಾವು ಚಿಕ್ಕಂದಿನಲ್ಲಿದ್ದಾಗ ತಾಯಿ ತಂದೆಯರ ಪೋಷಣೆಯಲ್ಲಿ ಹಿರಿಯ ಮಾರ್ಗದರ್ಶನದಲ್ಲಿ ದಿನೇದಿನೇ ಬೆಳೆಯುತ್ತೇವೆ. ಹೂವು ಗಿಡದಲ್ಲಿ ಬಿಡಲು ಮೊಗ್ಗಾದಾಗ ಸರಸರನೆ ಬೆಳಗಾಗುವಷ್ಟರಲ್ಲಿ ಅರಳುತ್ತದೆ. ಸುಗಂಧಸೂಸುತ್ತದೆ. ಒಂದೆರಡು ಗಂಟೆಗಳಲ್ಲಿ ಅರಳುವ ಕೆಲಸ ಸಾಗುತ್ತದೆ. ಆ ಮೇಲೆ ಹೊತ್ತಾಗುತ್ತಾ ಬಂದ ಹಾಗೆಲ್ಲಾ ಹೂವು ದಿನಕಳೆದಂತೆಲ್ಲಾ ಕೆಲವು ಅದೇ ದಿನ ಕೆಲವು ಮಾರನೇದಿನ, ಕೆಲವು ಒಂದೆರಡು ದಿನದ ನಂತರ ಮಾಸುತ್ತಾ ಒಣಗುತ್ತಾ ಮುದುರುತ್ತಾ ಬಾಡುತ್ತದೆ. ಒಣಗಿ ಹೋಗುತ್ತದೆ. ಹಳೆಯದಾಗುತ್ತಾ ಬಂದು ಒಣಗುತ್ತಾ ಕೊಳೆಯುತ್ತಾ ದುರ್ವಾಸನೆ ನೀಡಲಾರಂಭಿಸುತ್ತದೆ. ಇಲ್ಲವೇ ವಾಸನೆ ಇಲ್ಲದ ಹೂವಾಗುತ್ತದೆ. ಹೀಗೆ ಅರಳಿ ಘಮಘಮಿಸುತ್ತಿದ್ದ ಹೂ ಬಾಡಿ ಕೊಳೆತು ಮುಳ್ಳಾಗಿ ಚುಚ್ಚಿದ ಹಾಗೆ ಮನಸ್ಸಿಗೆ ಹಿಂಸೆಯಾಗುತ್ತದೆ. ಹೀಗೆ ಹೂವಿನ ಕಥೆಯೆ ಅನೇಕರ ಬಾಳಿನ ಕಥೆ ಆಗಿದೆ.

ಕುಟುಂಬಗಳ ಕಥೆ ಆಗಿದೆ. ಬಾಲ್ಯ ಯೌವನಗಳಲ್ಲಿ ಘಮಘಮ ಪರಿಮಳಿಸುವ ಹೂವಿನಂತೆ ಆದ ವಿದ್ಯಾರ್ಥಿಗಳಾಗಿ ಬೆಳೆದವರು ದುಷ್ಟರ ಸಾಹಸದಿಂದ, ದುರ್ಗುಣಗಳಿಂದ ದುರ್ವಾಸನೆಯ ಹೂವಿನಂತಾಗಿ ತಾಯಿ ತಂದೆಯವರಿಗೆ ಹಿರಿಯರಿಗೆ ಮುಳ್ಳಾಗಿ, ಅನಿಷ್ಟವಾಗಿ ಪರಿಣಮಿಸುತ್ತಾರೆ. ಇದು ಅನೇಕ ಕುಟುಂಬಗಳಲ್ಲಿ ಕಂಡುಬರುವ ಸಂಗತಿ ಆಗಿದೆ. (ಸಂಸಾರದ ಕಥೆಯದುವೆ)

ಮುಂಚೆಯೋಚಿಸಿ ಕೆಲಸ ಮಾಡು

54

ಹೇರಾಳು ಮೂಟೆಗೂಲಿಯ ಬೇಡಿ ಹೆಗಲೊಡ್ಡಿ ।
ಭಾರವನು ನಾಲ್ಕು ಮಾರೊಯ್ದುಷ್ಟರೊಳಗೇ ॥
ದೂರವಿನ್ನೆಷ್ಟೆನುತಲಾತುರಿಪನ್ ಅದನಿಳಿಸೆ ।
ಕಾರುಬಾರುಗಳಷ್ಟೆ – ಮಂಕುತಿಮ್ಮ ॥ (ಪದ್ಯ 346)

ಯಾವುದೇ ಕೆಲಸವನ್ನು ಮಾಡುವ ಮೊದಲು ಆ ಬಗ್ಗೆ ಚೆನ್ನಾಗಿ ಚಿಂತಿಸಬೇಕು. ಕೆಲಸ ಎಷ್ಟಿದೆ? ಯಾವ ರೀತಿಯದು? ಅದನ್ನು ಮಾಡಲು ನಮಗಿರುವ ಶಕ್ತಿ ಬುದ್ಧಿ ಎಷ್ಟು? ಅದು ಆ ಕೆಲಸವನ್ನು ಸಮರ್ಪಕವಾಗಿ ಪೂರೈಸಲು ಸಾಕಾದೀತೇ? ಇತ್ಯಾದಿ ಅನೇಕ ವಿಷಯಗಳನ್ನು ಕುರಿತು ಚಿಂತಿಸಬೇಕು. ಇಲ್ಲದಿದ್ದರೆ ನಾವು ಮಾಡುವ ಕೆಲಸಗಳೆಲ್ಲ ಸಮರ್ಪಕ ವಾಗದು; ಸಂಪೂರ್ಣವಾಗದು; ಸಂತೃಪ್ತಿತಾರದು. ಒಬ್ಬ ಮೂಟೆ ಹೊರುವ ಕೂಲಿಯನ್ನು ಗಮನಿಸೋಣ. ಒಬ್ಬ ದೊಡ್ಡ ಕೂಲಿಯಾಳು ಮೂಟೆ ಹೊರಲು ಕೂಲಿಗೆ ಕರೆದಾಗ ಕೂಡಲೇ ಬಂದೆ ಸ್ವಾಮಿ ಎಂದು ಬಂದು ಮೂಟೆ ಹೊರುತ್ತಾನೆ. ಮಾಲೀಕ ಹೇಳಿದ ಕಡೆಗೆ ನಡೆಯುತ್ತಾನೆ. ಭಾರ ಎಷ್ಟಿದೆ, ಎಷ್ಟು ದೂರ ಹೋಗಬೇಕು ಎಂದು ಮೊದಲೇ ಯೋಚಿಸಲ್ಲ. ಹಾಗಾಗಿ ಭಾರಹೊತ್ತ ಮೂಟೆ ಆಳು ಸ್ವಲ್ಪದೂರ

ನಡೆಯುತ್ತಲೇ ಮೂಟೆ ಭಾರದಿಂದ ತತ್ತರಿಸಿ ಯಾವಾಗ ಈ ಮೂಟೆಯನ್ನು ನೆಲಕ್ಕೆ ಇಳಿಸುತ್ತೇನೋ ಎಂದು ಪರಿತಪಿಸಿ (ಮೂಟೆ ಇಳಿಸಲು) ಆತುರಗೊಳ್ಳುತ್ತಾನೆ. ಹಾಗೆಯೇ ಜೀವನದಲ್ಲಿ ಕುಟುಂಬಗಳಲ್ಲಿ ಹಿರಿಯರಾಗಲಿ, ಕಿರಿಯರಾಗಲಿ, ಕರ್ತವ್ಯ ಗಳನ್ನು ಮಾಡಬೇಕಾದ ಕೆಲಸಗಳನ್ನು ಒಪ್ಪಿಕೊಂಡು ಆಮೇಲೆ ಅವುಗಳನ್ನು ಮಾಡಲಾಗದೆ ತತ್ತರಿಸುತ್ತಾರೆ. ಆದ್ದರಿಂದ ಎಲ್ಲರೂ ಕೆಲಸ ನಿರ್ವಹಣೆಗೆ ಮುಂಚೆ (ಕಾರುಬಾರುಗಳಷ್ಟೆ) ಯೋಚಿಸಿ ಕೆಲಸ ಮಾಡಬೇಕು.

ಹೊಟ್ಟೆ ಬಟ್ಟೆ ಕಥೆಯೇ ಎಲ್ಲರದು

55

ಹೊಟ್ಟೆ ರಾಯನ ನಿತ್ಯದಟ್ಟಹಾಸವೊ ಬಾಳು ।
ಧೃಷ್ಟ ಧಣಿಯೂಳಿಗಕೆ ಸೊಟ್ಟು ಮೈ ಬಾಗು ॥
ಹಿಟ್ಟಿಗಗಲಿದ ಬಾಯಿ. ಬಟ್ಟೆಗೊಡ್ಡಿದ ಕೈಯಿ ।
ಇಷ್ಟೆ ನಮ್ಮೆಲ್ಲ ಕಥೆ–ಮಂಕುತಿಮ್ಮ (ಪದ್ಯ 352)

ಪ್ರತಿಯೊಬ್ಬರೂ ನಿತ್ಯಜೀವನದಲ್ಲಿ ಒಂದೇ ಬಗೆಯ ಜನರಾಗಿದ್ದಾರೆ. ವಿದ್ಯೆಯಲ್ಲಿ ಕಲೆಯಲ್ಲಿ ಪ್ರತಿಭೆಯಲ್ಲಿ ಬೇರೆ ಬೇರೆ ಸಾಧನೆಯ ಸಾಹಿತಿ, ಕಲಾವಿದ, ಶಿಲ್ಪಿ, ನಟ, ಗಾಯಕ ಕುಶಲಕರ್ಮಿ ಏನೇನೋ ಆಗಿದ್ದರೂ ಅಧಿಕಾರಿ, ಮುಖಂಡ ನಾಯಕ, ಕೂಲಿ, ನೌಕರ, ಕಾರ್ಮಿಕ ಏನೇ ಆಗಿ ದ್ದರೂ ಎಲ್ಲರ ಬದುಕಿನಕಥೆ ಒಂದೇ. ಹೊಟ್ಟೆ – ಬಟ್ಟೆಗಾಗಿ ದುಡಿಯು ವರು ಆಗಿದ್ದಾರೆ. ಹಸಿವಿಗೆ ಆಹಾರ, ಚಳಿಗೆ ಬಟ್ಟೆ, ಮಲಗಲು ನೆಲ ಹಣಕ್ಕಾಗಿ ದುಡಿಯಲು ಕೆಲಸ ಇವು ಯಾರಿಗೂ ತಪ್ಪಿದ್ದಲ್ಲ. ಎಲ್ಲ ರೀತಿಯ ಕೆಲಸಕಾರ್ಯಗಳ ಹಿಂದಿರುವ ಗುರಿ ಒಂದೇ, ಹೊಟ್ಟೆ ಪಾಡಿಗಾಗಿ ನಿತ್ಯವೂ ಏನುಬೇಕಾದರೂ ಮಾಡಬಲ್ಲೆ (ಅಟ್ಟಹಾಸದ ಬಾಳು) ಎನ್ನುತ್ತಾನೆ. ಅದಕ್ಕಾಗಿ ದಯೆಯಿಲ್ಲದೆ ಕ್ರೂರವಾಗಿ ನಡೆಯಿಸಿ ಕೊಳ್ಳುವ ಮಾಲೀಕನ ಬಳಿ ಕೆಲಸ ಮಾಡುತ್ತಾನೆ. ಅವನು

ಹೇಳಿದ್ದಕ್ಕೆಲ್ಲಾ ಮೈಬಗ್ಗಿಸಿ ದುಡಿಯುತ್ತಾನೆ. ಅದರಿಂದ ಬರುವ ದುಡ್ಡಿನಿಂದ ಊಟ ಪಡೆಯಲು ಬಾಯಿಬಾಯಿ ಬಿಡುತ್ತಾನೆ. ಮೈಯನ್ನು ಚಳಿಗಾಳಿಯಿಂದ ರಕ್ಷಿಸಲು ಬಟ್ಟೆ ಪಡೆದುಕೊಳ್ಳಲು ಕೈಚಾಚು ತ್ತಾನೆ. (ಹಿಂದಿನ ಕಾಲದಲ್ಲಿ ದುಡಿಯುವ ಜನಕ್ಕೆ ಧಣಿಗಳು ಹಣಕೊಡು ತ್ತಿರಲಿಲ್ಲ ದವಸ ಧಾನ್ಯಗಳನ್ನು ಬಟ್ಟೆಬರೆಗಳನ್ನು ಕೂಲಿ ಯಾಳುಗಳಿಗೆ ಶ್ರಮಿ ಕರಿಗೆ, ರೈತರಿಗೆ ಕೊಡುತ್ತಿದ್ದರು) ಇದು ಎಲ್ಲ ಕೂಲಿಯಾಳುಗಳ ಕಥೆ ಅಷ್ಟೇ ಅಲ್ಲ ಅಧಿಕಾರಿಗಳಾಗಿ ದುಡಿದವರಿಗೂ ಹೊಟ್ಟೆಗೆ ಆಹಾರ, ಮೈಗೆ ಬಟ್ಟೆ ಇರಲು ತಾವು ಬೇಕೇಬೇಕು. ಎಲ್ಲರ ಕಥೆ ಒಂದೇ.

ಮನಸ್ಸಿನ ಹತೋಟಿಗೆ ಅಲೆದಾಡಬೇಕಿಲ್ಲ

56

ಮನೆಯ ತೊರೆದೋಡಲೇಂ?ವನಗುಹೆಯ ಸಾರಲೇಂ? ।
ತನುವನುಗ್ರವ್ರತಗಳಿಂದೆ ದಂಡಿಸಲೇಂ ? ॥
ಬಿನದಗಳನರಸಿ ನೀನೂರೂರೊಳಲೆದೊಡೇಂ ? ।
ಮನವ ತೊರೆದಿರಲಹುದೆ – ಮಂಕುತಿಮ್ಮ ॥(ಪದ್ಯ 373)

ಎಲ್ಲರಿಗೂ ಮನಸ್ಸು ಅಂತ ಒಂದಿದೆ. ಇದು ಬೇಕು ಅದು ಬೇಡ ಎನ್ನುವ, ಯಾಕೆ ಬೇಕು ಯಾಕೆ ಬೇಡ ಎಂದು ಚಿಂತಿಸುವ ಮನಸ್ಸು ಎಲ್ಲರಿಗೂ ಇದೆ. ಈ ಮನಸ್ಸಿನ ಕಡೆ ಸದಾ ನಮ್ಮ ಗಮನ ಇರಬೇಕು. ಅದು ಬಿಟ್ಟು ನನ್ನ ಮನಸ್ಸು ಸರಿ ಇಲ್ಲ, ನೆಮ್ಮದಿ ಇಲ್ಲ ಅಂತ ಮನೆಬಿಟ್ಟು ಹೋಗಿ ಕಾಡಿಗೆ ಹೋಗಿ ತಪಸ್ಸು ಮಾಡುತ್ತೇನೆ ಎಂದೋ, ಇಲ್ಲವೇ ಉಗ್ರವಾದ ವ್ರತಗಳಿಂದ ದೇಹವನ್ನು ದಂಡಿಸುವುದರಿಂದಲೇ ಈ ಮನಸ್ಸ ನ್ನು ಸಂತೋಷಪಡಿಸುತ್ತೇನೆ ಎಂದೋ, ಸಂಗೀತ, ನೃತ್ಯ. ನಾಟಕಗಳಿಂದ, ಊರೂರನ್ನಲೆದು ಪ್ರವಾಸಗಳಿಂದ ಮನಸ್ಸನ್ನು ಹಿಡಿತದಲ್ಲಿಡಲು ಯತ್ನಿಸುತ್ತೇನೆ ಎಂದರೆ ಅದು ಸಾಧ್ಯವಿಲ್ಲದ ಮಾತು. ಸ್ವಪ್ರಯತ್ನದಿಂದ ಇದ್ದಕಡೆ ಯೇ ಮನಸ್ಸನ್ನು ಹತೋಟಿಯಲ್ಲಿಡಲು ಯತ್ನಿಸಬೇಕು. ಅದು ಬಿಟ್ಟರೆ ಬೇರೆ ದಾರಿಯೇ ಇಲ್ಲ.

ಹೊಟ್ಟೆಪಾಡು ದೊಡ್ಡ ಸಮಸ್ಯೆ

57

ಉದರದೈವಕೆ ಜಗದೊಳೆದುರು ದೈವವದೆಲ್ಲಿ ? ।
ಮೊದಲದರ ಪೂಜೆ : ಮಿಕ್ಕೆಲ್ಲವದರಿಂದ ॥
ಮದಿಸುವುದದಾರಿಸೆ, ಕುದಿವುದು ನಿರಾಕರಿಸೆ ।
ಹದದೊಳಿರಿಸುವುದೆಂತೊ? –ಮಂಕುತಿಮ್ಮ ॥ (ಪದ್ಯ 377)

ಹೊಟ್ಟೆಪಾಡಿಗೆ ದುಡಿಯಬೇಕು. ಹಸಿವನ್ನು ಹೋಗಲಾಡಿಸಿ ಕೊಳ್ಳಬೇಕು ಎಂಬ ಮಾತನ್ನು ಸುಲಭವಾಗಿ ಹೇಳಿಬಿಡುತ್ತೇವೆ. ಆದರೆ ಆ ಕೆಲಸ ಸುಲಭದ್ದಲ್ಲ. ಹೊಟ್ಟೆ ಹೊರೆಯುವುದು ಹೊಟ್ಟೆ ತುಂಬಿಸಿ ಕೊಳ್ಳುವುದು ಹಸಿವನ್ನು ಹೋಗಿಸುವುದು ಸುಲಭದ ಕೆಲಸವಲ್ಲ. ಅದರ ಮುಂದೆ ದೇವರು ದಿಂಡರು ಯಾವುದೂ ಮುಖ್ಯವಲ್ಲ ದೊಡ್ಡದಲ್ಲ. ಕವಿ ಹೇಳುವಂತೆ 'ಕೊಡು. ಮೊದಲು ಇದನ್ನು (ಹಸಿವಿಗೆ ಆಹಾರ) ಆ ಮೇಲೆ ಉಳಿದಿದೆಲ್ಲ. ಮೊದಲು ಅನ್ನಕ್ಕೆ (ಹಸಿವಿನ ನಿರ್ಧಾರಕೆ) ಅಗ್ರಪ್ರಾಧಾನ್ಯ (ಮೊದಲದರ ಪೂಜೆ) ಎಲ್ಲ ಪೂಜೆಗಳಲ್ಲಿ ಮೊದಲು ಗಣಪತಿ ಪೂಜೆ, ಧ್ಯಾನ ಮಾಡಿದಂತೆ ಉಳಿದಿದ್ದೆಲ್ಲ ಆಮೇಲೆ. ಇದರ ನಂತರದ ಸ್ಥಾನ ಅವಕ್ಕೆ (ಮಿಕ್ಕೆಲ್ಲವದರಿಂದ) ಆದರೆ ಇಲ್ಲಿರುವ ಕಷ್ಟವೇನೆಂದರೆ ಹೊಟ್ಟೆಪಾಡಿಗೆ ಆಹಾರ ಸಂಪಾದಿಸುವಾಗ, ಸುಲಭದ ದಾರಿ ಕಂಡಾಗ. ಅಧಿಕ ಆಹಾರ ಸಂಗ್ರಹಿಸಿದಾಗ ಹೊಟ್ಟೆ ತುಂಬಿದ ಮೇಲೆ

ಹಸಿವನ್ನು ಮರೆತ ಮೇಲೆ ನಮಗೆ ಅಹಂಕಾರ, ದರ್ಪ ಕಾಣಿಸಿಕೊಳ್ಳುತ್ತವೆ. ಹಸಿವಿನ ಕಷ್ಟವನ್ನು ಮರೆಯುತ್ತೇವೆ. ಉಳಿದವರ ಹಸಿವನ್ನು ಗಮನಿಸುವುದಿಲ್ಲ. ನಮ್ಮ ಹಸಿವು. ನಿವಾರಣೆ ಆಗದಿದ್ದರೆ, ಅನ್ನಸಿಗದಿದ್ದರೆ ತಿರಸ್ಕಾರಕ್ಕೆ ಕಷ್ಟಕ್ಕೆ ಒಳಗಾದಾಗ ಮನಸ್ಸು ಕುದಿಯುತ್ತದೆ. ಉಗ್ರವಾಗುತ್ತದೆ. ಹತೋಟಿ ಮೀರಿ ವರ್ತಿಸುತ್ತೇವೆ. ಹೀಗಾಗಿ ಅನ್ನ ಸಿಕ್ಕಿ ಹಸಿವು ಹೋದರೆ ಒಂದು ಕಷ್ಟ (ಅಹಂಬರುವುದು) ಹಸಿವಿನಿಂದ ತೊಳಲಿದರೆ ಒಂದು ಕಷ್ಟ. (ಹಸಿವಿನ ಸಮಸ್ಯೆ) ಈ ಎರಡನ್ನು ಸರಿದೂಗಿಸುವುದು ಬಲುಕಷ್ಟ.

ಜನರಮನ ಅರ್ಥವಾಗದು

58

ಜನಕಜೆಯ ದರುಶನದಿನಾಯ್ತು ರಾವಣ ಚಪಲ ।
ಕನಕಮೃಗದರುಶನದೆ ಜಾನಕಿಯ ಚಪಲ ॥
ಜನವವನ ನಿಂದಿಪುದು, ಕನಿಕರಿಪುದಾಕೆಯಲಿ ।
ಮನದ ಬಗೆಯರಿಯದದು–ಮಂಕುತಿಮ್ಮ ॥ (ಪದ್ಯ 383)

ಜನರಾಡುವ ಮಾತಿನಲ್ಲಿ ಸತ್ಯವಿರುವುದಿಲ್ಲ. ಅವರು ಮುಖನೋಡಿ ಮಣೆ ಹಾಕುವವರು. ಅವರನ್ನು ಅರ್ಥ ಮಾಡಿ ಕೊಳ್ಳಲಾಗದು. ರಾವಣ ಸೀತೆಯನ್ನು ಕಂಡು ಮೋಹಗೊಂಡಿದ್ದನ್ನು ನಿಂದಿಸುತ್ತಾರೆ. ಆದರೆ ಜಿಂಕೆ ಕಂಡು ಸೀತೆ ಮೋಹಗೊಂಡಿದ್ದಕ್ಕೆ ಮರುಕ ತೋರುತ್ತಾರೆ. ಇಬ್ಬರೂ ಮೋಹಗೊಂಡು ಚಪಲಚಿತ್ತ ರಾದರು. ಅನ್ಯವಸ್ತುವಿನಲ್ಲಿ ಮೋಹಗೊಂಡು ಚಪಲಚಿತ್ತರಾದದ್ದು ಇಬ್ಬರದೂ ತಪ್ಪಾದರೂ ಸೀತೆ ರಾಮನ ಹೆಂಡತಿ ಸಾಧ್ವಿ, ಆದ್ದರಿಂದ ಅವಳದು ತಪ್ಪಿಲ್ಲ. ರಾವಣ ದುಷ್ಟ. ಅವನೇನು ಮಾಡಿ ದರೂ ತಪ್ಪು ಎಂಬ ರೀತಿ ಜನ ವರ್ತಿಸುತ್ತಾರೆ. ಜನರ ಮನ ಸತ್ಯವ ನ್ನಾಡುವು ದಿಲ್ಲ. ಇದನ್ನು ಅರ್ಥಮಾಡಿಕೊಳ್ಳಬೇಕು. ಜನರ ಅಪವಾದ–ಕನಿಕರಗಳ ಬಗ್ಗೆ ಎಚ್ಚರದಿಂದಿರಬೇಕು. ನಮ್ಮ ಮನಸ್ಸು ಹೇಗೆ ವಾಲುತ್ತದೆ ಎಂಬುದನ್ನು ಎಚ್ಚರದಿಂದ ಗಮನಿಸಬೇಕು.

ತಿರುಕನ ಕನಸನ್ನು ಕಾಣಬಾರದು

59

ಸುಳ್ಳಲ್ಲ ಕಥೆಯ ತಿರುಕನು ಕಂಡ ಸವಿಗನಸು ।
ಚೆಲ್ಲಿತಲ್ಲವೆ ಹಿಟ್ಟು ಘಟವನವನೊದೆಯೆ ? ॥
ಜಳ್ಳು ಸುಖದುಃಖವಿರಬಹುದಾದೊಡದರ ಮೊನೆ ।
ಮುಳ್ಳಹುದು ಜೀವಕ್ಕೆ? –ಮಂಕುತಿಮ್ಮ ॥ (ಪದ್ಯ 390)

ಶಾಲೆಯ ಪಠ್ಯಗಳಲ್ಲಿ ನಾವೆಲ್ಲ ಓದಿದ ಕಥೆ ನೆನಪಿರಬಹುದು. ಅದೇ ತಿರುಕನ ಕನಸು ಕಥೆ. ಒಬ್ಬ ತಿರುಪೆಯವನು ಮಡಕೆಯಲ್ಲಿ ಹಿಟ್ಟನ್ನು ತಿರುಪೆ ಮಾಡಿ ತಂದಿಟ್ಟುಕೊಂಡು ಮುದ್ದೆಮಾಡಿ ತಿಂದು ಜೀವಿಸುತ್ತಿದ್ದನು. ಒಮ್ಮೆ ಅವನು ನಿದ್ದೆಯಲ್ಲಿ ಕನಸೊಂದನು ಕಂಡನು. "ತಾನೇ ರಾಜನಾಗಿ ಆಳು ಕಾಳು ಸಂಪತ್ತಿನ ವೈಭವ ದಿಂದ ಅರಮನೆಯಲ್ಲಿ ದರ್ಬಾರು ನಡೆಸುತ್ತಿದ್ದಾಗ ಅವಿಧೇಯನಾದ ಸೇವಕನನ್ನು ಕೋಪದಿಂದ ಒದ್ದನು. ಆಗ ಅವನ ಕಾಲಬಳಿ ಇದ್ದ ಮಡಕೆ ಒಡೆದು ಹಿಟ್ಟು ಚೆಲ್ಲಿ ಅವನಿಗೆ ಊಟವಿಲ್ಲವಾಯಿತು. ಅವನ ರಾಜ್ಯಭಾರದ ಕನಸು ಸುಳ್ಳಾಗಿತ್ತು, ಒದ್ದಿದ್ದು ನಿಜವಾಗಿತ್ತು. ನಮ್ಮ ನಿಜ ಜೀವನವೂ ಹಾಗೆಯೇ ತಿರುಕನ ಕನಸಿನ ಹಾಗೆ ಸುಳ್ಳಿನ ಸುಖಗಳಿಂದ ಕೂಡಿದ ಕೇವಲ ನಮ್ಮ ಕಲ್ಪನೆಗಳಲ್ಲಿ ಆಸೆಗಳಲ್ಲಿ ಕಾಣಿಸುವಂಥೆ ಸುಖಗಳು ವಾಸ್ತವ ಜೀವನದಲ್ಲಿ ನಿಜವಲ್ಲದ

ಸುಖಗಳು, ಆದರೆ ಅವುಗಳ ಪರಿಣಾಮ ಮನಸ್ಸಿನ ಮೇಲೆ ದೇಹದ ಮೇಲೆ ಆಗುತ್ತದೆ. ಕೆಟ್ಟ ಕನಸನ್ನು ಕಂಡು ಹೆದರಿದವನು ಕಿಟಾರನೆ ಕಿರುಚಿಕೊಂಡಂತೆ ಇಲ್ಲದ್ದನ್ನೆಲ್ಲ ಕೆಟ್ಟದಾಗಿ ಮನಸ್ಸಿನಲ್ಲಿ ಕಲ್ಪಿಸಿ ಕೊಂಡರೆ ಅದರಿಂದ ಮನಸ್ಸು ಕೆಡುತ್ತದೆ. ಕೆಟ್ಟಮನಸ್ಸಿನ ಪರಿಣಾಮ ದೇಹದಮೇಲೆ ಆಗುತ್ತದೆ. ಅದರ ಪರಿಣಾಮ ಜೀವನದ ಮೇಲೆ ಮುಳ್ಳು ಚುಚ್ಚಿದಂತೆ ದುಃಖಕ್ಕೆ ಕಾರಣವಾಗುತ್ತದೆ. ಆದ್ದರಿಂದ ತಿರುಕನಹಾಗೆ ಇಲ್ಲದ್ದೆಲ್ಲ ಕಲ್ಪಿಸಿಕೊಂಡು ಸುಳ್ಳು ಕನಸಿನ ಹಾಗೆ ಬಾಳಬಾರದು, ನಿಜ ಜೀವನ ನೋಡಿ ಪಾಠ ಕಲಿಯಬೇಕು. ವಾಸ್ತವ ದೃಷ್ಟಿಯಿಂದ ಬಾಳಬೇಕು.

ಕಾಯಕವೇ ಕೈಲಾಸ

60

ಮರಣಶಯ್ಯೆಯದೆಂದು ತಿಳಿದೊಡಂ ರೋಗಿಯನು ।
ಹರಣಮಿರುವನ್ನೆಗಂ ಪರಿಚರಿಸುವಂತೆ ॥
ಸ್ಥಿರವಲ್ಲವೀ ಲೋಕವಾದೊಡಮದುಳ್ಳನಕ ।
ಚರಿಸು ನೀನಾಳಾಗಿ–ಮಂಕುತಿಮ್ಮ ॥ (ಪದ್ಯ 401)

ಈ ಪ್ರಪಂಚ ಜಲಪ್ರಳಯ, ಜ್ವಾಲಾಮುಖಿ, ಭೂಕಂಪ ಮುಂತಾದವುಗಳಿಂದ ನಶಿಸುತ್ತದೆ. ಈ ಬಾಳು ಸ್ಥಿರವಿಲ್ಲ ಎಂಬುದು ಎಲ್ಲರಿಗೂ ತಿಳಿದಿದೆ. ಹಾಗೆಯೇ ಒಬ್ಬ ವ್ಯಕ್ತಿ ದೀರ್ಘಾಯುವಾಗಿ ಬಾಳಿ ಬದುಕಿದರೂ ಒಂದು ದಿನ ಸಾಯುತ್ತಾನೆ. ಅವನು ರೋಗರುಜಿನದಿಂದ ಸಾಯುವುದು ಖಚಿತವಾದರೂ ಸುಮ್ಮನಾಗದೆ ಕೊನೆಯವರೆಗೂ ಅವನಿಗೆ ಔಷಧೋಪಚಾರಗಳನ್ನು ವೈದ್ಯರ ನೆರವಿನಿಂದ ನೀಡುತ್ತಾರೆ. ಹಾಗೆ ಜಗತ್ತು ಸ್ಥಿರವಿಲ್ಲ, ವ್ಯಕ್ತಿ ಶಾಶ್ವತವಲ್ಲ ಎಂಬುದು ಸತ್ಯವಾದರೂ ಇರುವವರೆಗೆ ಈ ಜಗತ್ತಿನಲ್ಲಿ ದುಡಿದು ಬಾಳಬೇಕು. ವ್ಯಕ್ತಿಗಳಿಗೆ ಸೇವೆ ಮಾಡಬೇಕು. ಇದು ಮಾನವ ಧರ್ಮ. ಸದಾ ಸೇವಾ ನಿರತನಾಗಿರಬೇಕು (ಚರಿಸುನೀನಾಳಾಗಿ).

ಇಳೆಯ ಸೊಗಸು ಸದಾ ನೂತನ

61

ಎಳೆಯ ತರು ದಿನದಿನವು ಹೊಸತಳಿರ ತಳೆವಂತೆ ।
ತಿಳಿನೀರು ಚಿಲುಮೆಯಲಿ ನಿಲದುಕ್ಕುವಂತೆ ॥
ಎಳೆ ಮಕ್ಕಳೊಳು ತಿಳಿವು ಮೊಳೆತು ಬೆಳೆವುದು ನೋಡು
ಇಳೆಯೊಳಗದೊಂದು ಸೊಗ –ಮಂಕುತಿಮ್ಮ ॥ (ಪದ್ಯ 419)

ಜೀವನದಲ್ಲಿ ಬೆಳವಣಿಗೆ ಸತತವಾಗಿರಬೇಕು. ಎಳೆಯ ಗಿಡದಲ್ಲಿ ದಿನದಿಂದ ದಿನಕ್ಕೆ ಹೊಸಹೊಸ ಎಲೆಗಳು ಚಿಗುರುತ್ತಾ ಇರುತ್ತವೆ. ಕಾರಂಜಿಯಲ್ಲಿ ತಿಳಿಯಾದ ನೀರು ಒಂದೇಸಮನೆ ಉಕ್ಕುತ್ತಿರುತ್ತದೆ. ಚಿಕ್ಕಮಕ್ಕಳು ದಿನದಿನಕ್ಕೂ ಚುರುಕಾಗುತ್ತಾ ಬೆಳೆಯುತ್ತಿರುತ್ತಾರೆ. ಇವೆಲ್ಲವನ್ನು ಕಂಡಾಗ ನಿಜವಾದ ಉತ್ಸಾಹ, ಸೌಂದರ್ಯ ಹೇಗಿರಬೇಕು ಎಂದು ತಿಳಿಯುತ್ತದೆ. ಪ್ರಕೃತಿಯಲ್ಲಿ ಸಹಜವಾದ ಬೆಳವಣಿಗೆಯಿಂದ ಹುಮ್ಮಸ್ಸಿನ ಚೈತನ್ಯವನ್ನು ಸದಾ ಹೊರಸೂಸುವುದರಿಂದ ಈ ಜಗತ್ತಿನಲ್ಲಿ ಬಾಳಿಗೆ ಚೆಲುವು ಸಂತೋಷ ಉಂಟಾಗುತ್ತದೆ. (ಇಳೆಯೊಳಗದೊಂದು ಸೊಗ). ಆದ್ದರಿಂದ ಪ್ರಕೃತಿಯಂತೆ ಸದಾ ಉತ್ಸಾಹ, ಸೊಗಸು ಸಂಭ್ರಮ ಗಳಿಂದ ಕೂಡಿದ ಮನಸ್ಸಿನಿಂದ ಬಾಳಬೇಕು. ಹಾಗೆ ಬಾಳಿದಾಗಲೆ ಜಗತ್ತಿ ನಲ್ಲಿ ಸೊಗಸನ್ನೂ ಬದುಕಿನಲ್ಲಿ ಆನಂದವನ್ನೂ ಕಾಣುತ್ತೇವೆ.

ಮಕ್ಕಳು ಬೆಳೆದಮೇಲೆ ದಿಕ್ಕವರಿಗವರವರೆ

62

ಮಕ್ಕಳ ಭವಿಷ್ಯಕ್ಕೆ ಕಕ್ಕುಲಿತೆಗೊಳಬೇಡ ।
ಪಕ್ಕಾಗುವುದು ಭಾಗ್ಯವೆಂತೆಂತೊ ಜಗದಿ ॥
ದಕ್ಕಿತೇಂ ಕುರುಪಾಂಡುತನಯರ್ಗೆ ರಾಜ್ಯಸುಖ ? ।
ದಿಕ್ಕವರಿಗವರವರೆ ಮಂಕುತಿಮ್ಮ ॥ (ಪದ್ಯ 420)

ಮಕ್ಕಳು ತಾವೇನಾಗಿದ್ದೇವೆ ಏನಾಗಬೇಕು ಎಂಬುದನ್ನು ಚಿಕ್ಕಂದಿನಲ್ಲಿ ಯೋಚಿಸುವುದಿಲ್ಲ ತಂದೆ, ತಾಯಿ ಗುರು ಹಿರಿಯರು ಹೇಳುವ ಮಾತನ್ನೆಲ್ಲ ಕೇಳಿ ಅದರಂತೆ ನಡೆಯುವುದಷ್ಟೇ ಅವರ ಕೆಲಸ. ಆದರೆ ಅವರು ಬೆಳೆದಂತೆಲ್ಲಾ ಯುವಕರಾದಂತೆಲ್ಲಾ ಅವರವರ ದಾರಿ ಗುರಿಗಳ ಬಗ್ಗೆ ಚಿಂತಿಸಬೇಕು ಚಿಕ್ಕಮಕ್ಕಳ ಹಾಗೆ ನಿಶ್ಚಿಂತೆಯಿಂದ ಇರಲು ಸಾಧ್ಯವಿಲ್ಲ ಆದರೆ ಆ ಬಗ್ಗೆ ತಾಯಿತಂದೆ ಮೊದಲಿಂದ ಕೊನೆವರೆಗೆ ಮಕ್ಕಳು ದೊಡ್ಡವರಾದರೂ ಅವರ ಬಗ್ಗೆ ಚಿಂತಿಸುತ್ತಲೇ ಇರುತ್ತಾರೆ. ಹಾಗೆ ಮಕ್ಕಳು ಮುಂದಕ್ಕೆ ಏನಾಗುತ್ತಾರೋ ಎಂದು ಅವರು ದೊಡ್ಡವರಾದ ಮೇಲೂ ಚಿಂತೆಗೆ ಕಳವಳಕ್ಕೆ, ಆತಂಕಕ್ಕೆ (ಕಕ್ಕುಲತೆಗೆ) ಅತಿಮೋಹಕ್ಕೆ ಒಳಗಾಗುವುದು ಬೇಡ. ಮಕ್ಕಳು ದೊಡ್ಡವರಾದಾಗ ಅವರ ಬೆಳೆದ ರೀತಿ, ಪಡೆದ ಶಿಕ್ಷಣ ಹೋದದಾರಿಯಂತೆ ಅವರ ಭವಿಷ್ಯ ನಿರ್ಧಾರವಾಗುತ್ತದೆ.

ಇದಕ್ಕೆ ಮಹಾಭಾರತದ ಕಥೆ ಸಾಕ್ಷಿ. ಪಾಂಡವರಿಗೆ ಕೌರವರಿಗೆ ಇಬ್ಬರಿಗೂ ಒಂದೇ ಬಗೆ ಶಿಕ್ಷಣ ದೊರೆಯಿತು. ಒಟ್ಟಿಗೇ ಬೆಳೆದರು. ದ್ರೋಣರೊಬ್ಬರೇ ಇಬ್ಬರಿಗೂ ಗುರುಗಳು. ಆದರೂ ಪಾಂಡವರು ಒಳ್ಳೆಯವರಾದರು, ಕೌರವರು ಕೆಟ್ಟವರೆನಿಸಿದರು. ರಾಜ್ಯಸುಖ ಕೌರವರಿಗಾಗಲಿ, ಪಾಂಡವರಿಗಾಗಲೇ ಸಿಕ್ಕಿತೇ? ಅವರವರ ಹಣೆ ಬರಹ ದಂತಾಯಿತು. ಅವರವರು ಬಾಳಿದಂತೆ ಆಯಿತು (ದಿಕ್ಕವರಿಗವರವರೆ) ಆದ್ದರಿಂದ ತಾಯಿ ತಂದೆ ಮಕ್ಕಳು ದೊಡ್ಡವರಾದ ಮೇಲೂ ಚಿಂತಾಕ್ರಾಂತ ರಾಗಬಾರದು.

ವಿಶ್ವಕುಟುಂಬಿ ಆಗು

63

ಒಬ್ಬನುಣುವೂಟದಲಿ ಸವಿಯಿಲ್ಲ ಸೊಗವಿಲ್ಲ ।
ಇಬ್ಬರಾಗುವೆನೆಂದನಂತೆ ಪರಬೊಮ್ಮಂ ॥
ಹೆಬ್ಬದುಕನೊಂಟಿತನದೊಳದೇನು ಬದುಕುವೆಯೊ ? ।
ತಬ್ಬಿಕೊಳೊ ವಿಶ್ವವನು–ಮಂಕುತಿಮ್ಮ ॥ (ಪದ್ಯ 430)

ಲೋಕದಲ್ಲಿ ಒಂಟಿಜೀವನ ಸಲ್ಲದು. ನಾನೊಬ್ಬನೇ ಬದುಕುತ್ತೇನೆ ಎನ್ನಲಾಗದು. ಹಾಗೆ ಬದುಕುವವನಿಗೆ ಬಾಳಿನ ಸೊಗಸು, ಆನಂದ ಎರಡೂ ಸಿಗದು. ವಿದ್ಯಾರ್ಥಿಗಳು ಒಂಟಿಯಾಗಿರುವುದಿಲ್ಲ. ಆಟಪಾಟ ಊಟ ಓಟ ಎಲ್ಲದರಲ್ಲೂ, ಶಾಲೆ, ಮನೆ, ಆಟದ ಮೈದಾನ, ಎಲ್ಲ ಕಡೆ ಇತರರೊಂದಿಗೆ ಇರುತ್ತಾರೆ. ಇದರರ್ಥ ಅವರಿಗೆ ಸದಾ ಜತೆ ಬೇಕು. ಸಂಗಬೇಕು. ಹಾಗೆಯೇ ಒಬ್ಬನೇ ಊಟಕ್ಕೆ ಕುಳಿತರೆ ಏನು ರುಚಿ ಏನು ಸಂತೋಷ ಇರುತ್ತೆ? ತಿಂದು ಆನಂದಿಸುವಾಗ ಜತೆಗೊಬ್ಬರು ಇದ್ದರೆ ಊಟದಲ್ಲಿ ಚಪ್ಪರಿಸಿ ಒಬ್ಬರು ಚೆನ್ನಾಗಿದೆ ಎಂದರೆ ಇನ್ನೊಬ್ಬರು ಹೌದೆಂದಾಗ ಅದು ಸೊಗಸು. ಆದ್ದರಿಂದ ಭಗವಂತ. ನಾನೇ ಇಬ್ಬರಾಗುವೆ, ಎಂದನಂತೆ ಒಬ್ಬಂಟಿಯಾಗಿ ಇರುವುದಿಲ್ಲ ಎಂದು ದೇವರೇ ಶಿವಪಾರ್ವತಿ ಆದ; ಲಕ್ಷ್ಮೀನಾರಾಯಣ ಆದ;

ಸರಸ್ವತಿ ಬ್ರಹ್ಮನಾದ; ಪರಿವಾರ ದೇವತೆಯನ್ನು ಹೊಂದಿದ. ಹೀಗೆ ತಾನು ವಿಶ್ವಕುಟುಂಬಿ ಆಗಿ. ಜಗತ್ತನ್ನೇ ಮನೆಯನ್ನಾಗಿ ತಿಳಿದನು. ಹಾಗೇ ಎಲ್ಲರೂ ಒಟ್ಟಾಗಿ ಬದುಕಿ ಬಾಳಿರಿ ಯಾರಿಗೂ ಪ್ರಯೋಜನವಿಲ್ಲದೆ ಒಂಟಿಯಾಗಿ ಬಾಳಬೇಡಿ ಎಂದು ಈ ಮೂಲಕ ತಿಳಿಸಿದ್ದಾನೆ. ಆದ್ದರಿಂದ ಒಂಟಿಯಾಗಿ ಬಾಳಿದರೆ ನಾವು ಏನನ್ನು ಸಾಧಿಸಬಲ್ಲೆವು? ಏನೂ ಇಲ್ಲ ಆದಕಾರಣ ಜಗತ್ತಿನಲ್ಲಿ ಎಲ್ಲರೊಡನೆ ಒಂದಾಗಿ ಬಾಳಬೇಕು (ತಬ್ಬಿಕೊಳೊ ವಿಶ್ವವನು) ಎಂದು ಡಿವಿಜಿ ಹೇಳಿದ್ದಾರೆ ಇದನ್ನೇ ಮಾನವ ಸಂಘಜೀವಿ, ಸಮಾಜಜೀವಿ ಎಂದು ವಿದೇಶೀ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ಹೇಳಿದ್ದಾರೆ.

ನಗು-ಅಳು ರಸಪಾಕ

64

ನಗುವೊಂದು ರಸಪಾಕವಳುವೊಂದು ರಸಪಾಕ ।
ನಗುವಾತ್ಮ ಪರಿಮಳವ ಪಸರಿಸುವ ಕುಸುಮ ॥
ದುಗುಡವಾತ್ಮವ ಕಡೆದು ಸತ್ತ್ವವೆತ್ತುವ ಮಂತು ।
ಬಗೆದೆರಡನುಂ ಭುಜಿಸು–ಮಂಕುತಿಮ್ಮ ॥ (ಪದ್ಯ 434)

ನಮಗೆ ಎರಡು ಕೈ, ಎರಡು ಕಾಲು, ಎರಡು ಕಣ್ಣು, ಎರಡು ಕಿವಿ, ಎರಡೂ ಹೊಳ್ಳೆ, ಎರಡು ಭುಜ, ಹೀಗೆ ನಮ್ಮ ಶರೀರದಲ್ಲಿ ಹಲವಾರು ಅಂಗಾಂಗಗಳು ಎರಡೆರಡು ಇವೆ. ಹಾಗೆಯೇ ಬಾಳಿನಲ್ಲಿ ನಗು ಅಳು, ಸಂತೋಷ ದುಃಖಗಳು ಜತೆಜತೆಯಾಗಿವೆ ಅವೆರಡು ಒಟ್ಟಿಗೇ ಇವೆ. ನಗು ಎಂಬುದು ನಮ್ಮ ಮನಸ್ಸನ್ನು ಭಾವವನ್ನು ವಿಚಾರಗಳನ್ನು ಆತ್ಮದ ಪರಿಮಳ ಹರಡುವ ಜೀವಕುಸುಮವಿದ್ದಂತೆ. ಅಳು ದುಃಖ ದುಗುಡ, ಆತ್ಮವೆಂಬ ಮೊಸರನ್ನು ಕಡೆದು ಬಾಳಿನ ಸತ್ತ್ವ, ಸಾರವನ್ನು ಕಡೆದು ಮೇಲೆತ್ತುವ ಕಡೆಗೋಲು. (ಸತ್ತ್ವವೆತ್ತುವ ಮಂತು) ಹೀಗೆ ನಮಗೆ ಪುಷ್ಪದ ಪರಿಮಳವೂ ಬೇಕು: ಹೊರಗಿನ ಸುಖಕ್ಕೆ ಮೊಸರಿನ ಬೆಣ್ಣೆಯ ಸವಿಯೂ ಬೇಕು; ಒಳಗಿನ ಸುಖಕ್ಕೆ ಎಂದರೆ

ದೇಹಮನಸ್ಸುಗಳೆರಡೂ ಸುಖಸಂತೋಷಗಳನ್ನು ಅನುಭವಿಸಬೇಕು; ಆ ರೀತಿ ನಾವು ಜೀವನ ನಡೆಯಬೇಕು. ಅದಕ್ಕೆ ಸುಖ ದುಃಖಗಳೆಂಬ ನಗು ಅಳು ಎರಡೂ ಜೀವನದಲ್ಲಿರಬೇಕು. ನಗುವುದಕ್ಕೆ ಸಂತೋಷಪಡುವುದಕ್ಕೂ ಅಳುವುದಕ್ಕೆ ದುಃಖಸಹಿಸುವುದಕ್ಕೂ ಜೀವನದಲ್ಲಿಸಿದ್ಧವಿರಬೇಕು (ಬಗೆದು+ಎರಡ ನುಂಭುಜಿಸು) ಎನ್ನುವ ಪಾಠವನ್ನು ಎಲ್ಲರೂ ಕಲಿಯಬೇಕು. ಸುಖ ಬಂದರೆ ಹಿಗ್ಗಬಾರದು, ದುಃಖಬಂದರೆ ಕುಗ್ಗಬಾರದು ಎಂಬ ಗಾದೆಯೇ ಇದೆ. ಸುಖ–ದುಃಖಗಳನ್ನು ಅನುಭವಿಸುವ ರೀತಿ ಯನ್ನು ಈ ಗಾದೆ ತಿಳಿಸುತ್ತದೆ.

ಪ್ರಕೃತಿಸೌಂದರ್ಯ ಎಲ್ಲರಿಗೂ ಬೇಕು

65

ತಳಿರ ನಸುಕೆಂಪು, ಬಳುಕೆಲೆಯ ಹಸುರಿನ ಸೊಂಪು ।
ತಿಳಿಮನದ ಯುವಜನದ ನಗುಗಣ್ಣ ಹೊಳಪು ॥
ಬೆಳೆವರಿವು ಮಗುದುಟಿಯಿನುಣ್ಮಿಸುವ ನುಡಿಚಿಗುರು ।
ಇಳೆಯೊಳಿವನೊಲ್ಲನಾರ್ ? – ಮಂಕುತಿಮ್ಮ ॥ (ಪದ್ಯ 438)

ಪ್ರಪಂಚದಲ್ಲಿ ನೋಡಿ ಆನಂದಿಸುವ ಹತ್ತಾರು ವಸ್ತುಗಳಿವೆ. ಪ್ರಕೃತಿಯಲ್ಲಿ ಗಿಡಮರಗಳಲ್ಲಿ ಪಶುಪಕ್ಷಿ ಪ್ರಾಣಿಗಳಲ್ಲಿ ನೋಡಿ ಆನಂದಿಸುವ ಅನುಭವಿಸುವ ಅನೇಕದೃಶ್ಯಗಳು. ಸಂತೋಷಗಳಿವೆ. ಇವುಗಳನ್ನು ನಾವುಗಮನಿಸಬೇಕು ವಿದ್ಯಾರ್ಥಿಗಳನ್ನು ಪ್ರವಾಸ ಕರೆದು ಕೊಂಡು ಹೋಗುವುದು ಇದೇ ಉದ್ದೇಶಕ್ಕೆ. ನಿಸರ್ಗದ ತೋಟಗಳಲ್ಲಿ ಚೈತ್ರಮಾಸದಿಂದಾಗಿ ಗಿಡಮರಗಳಲ್ಲಿ ಮೂಡುವ ಚಿಗುರುಗಳ ಕೆಂಪು ವರ್ಣ (ತಳಿರನಸು ಕೆಂಪು) ಎಷ್ಟು ಮನಮೋಹಕ! ಮಾವು, ಬೇವು ಮೊದಲಾದ ಮರಗಳಲ್ಲಿ ಹಸುರಿನ ಎಲೆಗಳ ಸಮೃದ್ಧಿ ಎಷ್ಟು ಚೆನ್ನ! ಹಾಗೆಯೇ ಆ ಗಿಡಮರಗಳ ಅಡಿಯಲ್ಲಿ ಆಡುವ, ಓಡುವ ನಡೆದಾಡುವ ಯುವಕ ಯುವತಿಯರ ಸಂತೋಷ ಸಂಭ್ರಮ ಸೂಚಿಸುವ ಕಣ್ಣುಗಳ ಕಾಂತಿ, ನಗೆಯನೋಟ ಎಷ್ಟು ಸುಂದರ! ಮಕ್ಕಳಲ್ಲಿ ದಿನದಿನ ವೃದ್ಧಿಸುವ

ತಿಳಿವಳಿಕೆ ಚಟುವಟಿಕೆಯ ಚಿಗುರಿನಿಂದ ಎಳೆಯ ಕೋಮಲ ಮುದ್ದು ತೊದಲುನುಡಿಗಳು ಇವೆಲ್ಲಾ ನೀಡುವ ಸಂತೋಷವನ್ನು ಈ ಪ್ರಪಂಚದಲ್ಲಿ ಬೇಡ ಎನ್ನುವವರು ಎಲ್ಲಿದ್ದಾರೆ? (ಇಳೆಯೊಳಿವ ನೊಲ್ಲನಾರ್?) ಯಾರೂ ಇಲ್ಲ. ಆದ್ದರಿಂದ ಪರಿಸರದಲ್ಲಿ ಸೌಂದರ್ಯವನ್ನು, ಗಿಡ ಮರ ಬಳ್ಳಿಗಳ ಚೆಲುವನ್ನು ನೋಡಿ ಆನಂದಿಸುವುದನ್ನು ನಾವೆಲ್ಲಾ ಕಲಿಯಬೇಕು.

ಅಲಂಕಾರ ಮಾಡಿಕೊಳ್ಳುವುದು ತಪ್ಪಲ್ಲ

66

ಸೊಗಸು ಬೇಡದ ನರಪ್ರಾಣಿಯೆಲ್ಲಿಹುದಯ್ಯ ? ।
ಮಗುವೆ, ಮುದುಕನೆ, ಪುರಾಣಿಕ, ಪುರೋಹಿತರೆ ? ॥
ಜಗದ ಕಣ್ಣಿಣಿಕದೆಡೆ ಮುಕುರದೆದುರೊಳು ನಿಂತು ।
ಮೊಗವ ತಿದ್ದುವರೆಲ್ಲ–ಮಂಕುತಿಮ್ಮ ॥ (ಪದ್ಯ 442)

ಅಂದವಾಗಿರಬೇಕು, ಚಂದವಾಗಿರಬೇಕು ಆಕರ್ಷಕದಾಗಿರಬೇಕು ಎಂಬುದು ಎಲ್ಲರ ಆಸೆ. ಅದರಲ್ಲಿ ತಪ್ಪೇನಿಲ್ಲ. ಅದಕ್ಕಾಗಿ ಚಿಕ್ಕಮಗುವೇ ಇರಲಿ, ವಯಸ್ಸಾದ ವೃದ್ಧರೇ ಇರಲಿ, ಪ್ರವಚನದ ಪುರಾಣಿಕರೇ ಆಗಲಿ, ಶುಭಾಶುಭ ಕರ್ಮಗಳನ್ನು ಮಾಡುವ ಪುರೋಹಿತರೇ ಆಗಲಿ, ಸ್ತ್ರೀ ಪುರುಷರು ಯಾರೇ ಇರಲಿ ಎಲ್ಲರೂ ಯಾರಿಗೂ ಕಾಣದಂತೆ ಕನ್ನಡಿ ಮುಂದೆ ನಿಂತುಕೊಂಡು ಮುಖವನ್ನು ತಿದ್ದಿಕೊಳ್ಳುತ್ತಾರೆ. ತಮ್ಮ ಅಂಗಾಂಗಗಳನ್ನು ಅಲಂಕರಿಸಿ ಕೊಳ್ಳುತ್ತಾರೆ. ಮಾನವ ಸೌಂದರ್ಯಪ್ರಿಯ ಪ್ರಾಣಿ ಎಂದರೆ ತಪ್ಪೇನಿಲ್ಲ. ಆದರೆ ಮಾನವನ ಅಲಂಕಾರಪ್ರವೃತ್ತಿ ಅತಿ ಯಾಗಬಾರದಷ್ಟೆ. ಅದೇ ಚರ್ಯೆಯಾಗಬಾರದು ನಮ್ಮ ನಮ್ಮ ರೂಪ, ಯೌವನಗಳಿಗೆ ತಕ್ಕಂತೆ ಅಲಂಕರಿಸಿಕೊಳ್ಳಬೇಕು.

ಸಾಧ್ಯವಾದಷ್ಟು ಕೃತಕವಸ್ತುಗಳಿಂದ ಬಣ್ಣಗಳಿಂದ ಅಲಂಕರಿಸಿ ಕೊಳ್ಳುವುದಕ್ಕಿಂತ ಪ್ರಕೃತಿದತ್ತವಾದ ವಸ್ತುಗಳಿಂದ ಹೂ, ಎಲೆ, ವಸ್ತ್ರ ಆಭರಣ ಸುಗಂಧ ಮೊದಲಾದವುಗಳಿಂದ ಅಲಂಕರಿಸಿಕೊಳ್ಳುವುದು ಸಹಜಾಲಂಕಾರ ಮತ್ತು ಆರೋಗ್ಯಕರ.

ಸದಾ ಪ್ರಕೃತಿಸೌಂದರ್ಯಾನುಭವ ಬೇಕು

67

ಬಾಂದಳದ ಬಾಗು, ರವಿಕಿರಣಗಳ ನೀಳ್ ಕೋಲು ।
ಇಂದುಮಣಿನುಣ್ಪು, ತಾರೆಗಳ ಕಣ್ಮಿನುಗು ॥
ಚೆಂದದಂಗಾಂಗಭಾವದಿ ಮೊದಲ ಪಾಠವಿವು ।
ಸೌಂದರ್ಯಗುರು ಪ್ರಕೃತಿ–ಮಂಕುತಿಮ್ಮ ॥ (ಪದ್ಯ 444)

ಚಿಕ್ಕಂದಿನಲ್ಲಿ ಉಪ್ಪರಿಗೆ ಮೇಲೆ, ಅಂಗಳದಲ್ಲಿ ಮಲಗಿ ಬೋರಲಾದ ಬಾಣಲಿಯಂಥ ವಿಶಾಲ ಆಕಾಶ ನೋಡುತ್ತೇವೆ. ಮನೆಯೊಳಗೆ ಕಿಟಕಿಗಳಿಂದ ಬೀಳುವ ಬಿಸಿಲುಕೋಲುಗಳನ್ನು ಹಿಡಿಯಲು ಯತ್ನಿಸಿರುತ್ತೇವೆ. ಚಂದ್ರನ ಸೊಗಸಾದ ಬೆಳದಿಂಗಳನ್ನು ಅನುಭವಿಸುತ್ತೇವೆ. ಆಕಾಶದಲ್ಲಿ ಮಿನುಗುವ ನಕ್ಷತ್ರಗಳನ್ನು ನೋಡಿ ಬೆರಗಾಗಿರುತ್ತೇವೆ ಹೀಗೆ ಬಾಲ್ಯದಲ್ಲಿ ಪ್ರಕೃತಿಯ ಚೆಲುವನ್ನು ನೋಡಿ ಆನಂದಿಸುವ ಮೊದಲ ಪಾಠಗಳನ್ನು ಪ್ರಕೃತಿ ಈ ಮೂಲಕ ನಮಗೆ ಕಲಿಸುತ್ತದೆ. ನಾವು ಆ ಪ್ರವೃತ್ತಿಯನ್ನು ಉಳಿಸಿಕೊಳ್ಳಬೇಕು, ಬೆಳೆಸಿಕೊಳ್ಳಬೇಕು. ಹೀಗಾಗಿ ಪ್ರಕೃತಿಯೇ ನಮಗೆ ಸೌಂದರ್ಯ ಸಾಧನೆಗೆ ಗುರುವಾಗಬೇಕು. ಆದರೆ ಇಂದು ಗಾಳಿ, ಬೆಳಕು, ಅಂಗಳ, ಹೊರಾಂಗಣ, ಬಿಸಿಲಮಚ್ಚು ಹಿತ್ತಲು ಗಿಡಮರಗಳ ತೋಟ ಇಲ್ಲದ ಇಕ್ಕಟ್ಟಾದ ಸಿಮೆಂಟುಕಟ್ಟಡಗಳಲ್ಲಿ ಉಸಿರುಕಟ್ಟಿ ಬಾಳುತ್ತಿದ್ದೇವೆ. ಆರೋಗ್ಯವನ್ನು ಆನಂದವನ್ನೂ ಕಳೆದು ಕೊಳ್ಳುತ್ತಿದ್ದೇವೆ. ಆದಷ್ಟು ಪ್ರಕೃತಿಯಲ್ಲಿ ಬಾಳುವುದನು ಕಲಿಯಬೇಕು.

ಮೋಹ-ಕರುಣೆ-ಶಾಂತಿ ಇರಲಿ

68

ಪಿಡಿ ಗಳಿಸು ಭುಜಿಸೊಡೆಯನಾಗೆನ್ನುವುದು ಮೋಹ ।
ಕೊಡು ಸಲಿಸು ಸೇವೆಗೈಯೆನ್ನುವುದು ಕರುಣೆ ॥
ಬಿಡು ನೀನು ನಾನುಗಳ, ವಿಶ್ವಾತ್ಮಪದವನೀ- ।
ನಡರೆನ್ನುವುದು ಶಾಂತಿ-ಮಂಕುತಿಮ್ಮ ॥ (ಪದ್ಯ 456)

ಜೀವನದಲ್ಲಿ ಗಳಿಸುವ ಸಂಪಾದನೆಯ ಮೋಹ ಇರಬೇಕು; ಆಸಕ್ತಿ ಹೊಂದಿ, ಸಂಪಾದನೆಮಾಡಿ ಅನುಭವಿಸಬೇಕು. ಸುಖಸಾಧನಗಳ ಒಡೆಯನಾಗಬೇಕು. ಅನಂತರ ತಾನುಗಳಿಸಿದ್ದನ್ನು ತಾನೇ ಇಟ್ಟುಕೊಳ್ಳ ಬಾರದು. ಕರುಣೆಯಿಂದ ಇತರರಿಗೆ ಕಷ್ಟನಿವಾರಣೆಗೆ ದಾನಕೊಡಬೇಕು. ಪ್ರೀತಿಯಿಂದ ಕೊಡಬೇಕು ಅವರಿಗೆ ಸೇವೆಸಲ್ಲಿಸಬೇಕು. ಹೀಗೆ ಸಾರ್ಥಕಜೀವನ ನಡೆಸಿದಮೇಲೆ ಭಗವಂತನ ಸನ್ನಿಧಿ ಸೇರಲು ನನ್ನದು ಎಂಬ ಸ್ವಾರ್ಥವನ್ನು, ನಾನು ಎಂಬ ಅಹಂಕಾರವನ್ನು 'ಬಿಟ್ಟು (ಬಿಡು ನೀನು ನಾನುಗಳ) ಸರಳ ಜೀವನ ನಡೆಸಿ ಭಗವಂತನ ಆರಾಧನೆಯಿಂದ ಶಾಂತನಾಗಿ ಬಾಳಬೇಕು. ಇದು ಎಲ್ಲರೂ ಬದುಕುವ ಶಾಂತಿಮಾರ್ಗ ಆಗಬೇಕು (ವಿಶ್ವಾತ್ಮ ಪದವ ನೀನಡರೆನ್ನುವುದು)

ವ್ಯಾಸ-ವಾಲ್ಮೀಕಿಯರ ಹಿರಿಮೆ

69

ಪ್ರೀತಿಮಹಿಮೆಯ ಚಿತ್ರರೀತಿಯಂ ವಾಲ್ಮೀಕಿ ।
ನೀತಿಸೂಕ್ಷ್ಮದ ಗಹನಮಾರ್ಗಮಂ ವ್ಯಾಸರ್ ॥
ಗೀತೆಯಲಿ ವಿಶ್ವಜೀವನರಹಸ್ಯವನವರ್ ।
ಖ್ಯಾತಿಸಿಹರದು ಕಾವ್ಯ–ಮಂಕುತಿಮ್ಮ ॥ (ಪದ್ಯ 462)

ಮಹಾಕಾವ್ಯ ವಿಶ್ವಕಾವ್ಯ ಎಂದರೆ ಮಾನವಜನಾಂಗಕ್ಕೆ ಬಾಳಿನ ಪ್ರೀತಿಯ ವಿವಿಧರೀತಿಗಳನ್ನು ಸೊಗಸಾಗಿ ಚಿತ್ರಿಸುವ ಗ್ರಂಥ. ವಾಲ್ಮೀಕಿಯ ರಾಮಾಯಣ, ವ್ಯಾಸರ ಭಾರತ ಮತ್ತು ಭಗವದ್ಗೀತೆ ಜೀವನದ ನೀತಿಮಾರ್ಗಗಳ ಸೂಕ್ಷ್ಮಗಳನ್ನು ತಿಳಿಯುವ ಪರಿಗಳನ್ನು ಹೇಳುವ ಪವಿತ್ರಗ್ರಂಥಗಳು. ಮಹಾಭಾರತ, ಪ್ರಪಂಚದ ಮತ್ತು ಮಾನವ ಜೀವನದ ರಹಸ್ಯಗಳನ್ನು ತತ್ತ್ವಗಳನ್ನು ತಿಳಿಸುವ ಈ ಶ್ರೇಷ್ಠಗ್ರಂಥಗಳನ್ನು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ಮಾನವ ಕಲ್ಯಾಣಕ್ಕೆ ವ್ಯಾಸ ವಾಲ್ಮೀಕಿಯರು ಕೊಟ್ಟಿದ್ದಾರೆ. ಈ ಮೂಲಕ ನಿಜವಾದ ವಿಶ್ವ ಕಾವ್ಯ ವೇನೆಂದು ತಿಳಿಸಿದ್ದಾರೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಮತ್ತು ಇತರರೂ. ರಾಮಾಯಣ, ಮಹಾಭಾರತ ಭಗವದ್ಗೀತೆ ಗ್ರಂಥಗಳನ್ನು ಓದಲೇ ಬೇಕು ಅವುಗಳು ತಿಳಿಸುವ ಬದುಕಿನ ಮಾರ್ಗವನ್ನು ಅನುಸರಿಸಿ ಬಾಳಬೇಕು ಏಕೆಂದರೆ ಇವು ಜಗತ್ತಿನ ಎಲ್ಲರಿಗೂ ಬಾಳಿಗೆ ಬೆಳಕನ್ನು ನೀಡುವ ಗ್ರಂಥಗಳು.

ಕಲೆಗಾರರಿಂದ ಬಾಳು ಸುಖದಾಯಕ

70

ಕವಿ ಚಿತ್ರಕೋವಿದನು ಪರತತ್ತ್ವಶೋಧಕನು ।
ವಿವಿಧ ವಾದನ ಗೀತ ನೃತ್ಯ ಕುಶಲಿಗಳು ॥
ನವನವತೆಯಂ ಮನಸಿಗೀವೆಲ್ಲ ಕಲೆಗಾರ ।
ರವರಿಂದೆ ಸುಂದರತೆ–ಮಂಕುತಿಮ್ಮ ॥ (ಪದ್ಯ 472)

ಜಗತ್ತು ಸುಂದರವಾಗಿರಲು, ಬಾಳು ಸಂತೋಷವಾಗಿರಲು ವಿವಿಧ ಕಲೆಗಾರರು ಇರಬೇಕು: ಸರಸಕವಿ, ಚೆಲುವಿನ ಚಿತ್ರ ಕಲಾವಿದ, ವೇದಾಂತದ ಶಾಸ್ತ್ರಜ್ಞ, ವಿವಿಧ ವಾದನಕಾರರು, ಸಂಗೀತಗಾರರು, ನೃತ್ಯಗಾರರು, ಸುಂದರ ವಸ್ತುಗಳನ್ನು ನಿರ್ಮಿಸುವ ಕಲಾಕುಶಲಿಗಳು, ಇವರೆಲ್ಲ ನಿತ್ಯನೂತನರೀತಿಯಲ್ಲಿ ತಮ್ಮ ಕಲೆಗಳಿಂದ ಜನರಿಗೆ ಸಂತೋಷ ಉಂಟುಮಾಡುತ್ತಾರೆ; ಬಾಳನ್ನು ಹಸನುಗೊಳಿಸುತ್ತಾರೆ; ಜಗತ್ತನ್ನು ಸುಂದರವಾಗಿಸುತ್ತಾರೆ. ಇವರೆಲ್ಲ ರನ್ನು ಪ್ರೋತ್ಸಾಹಿಸಬೇಕು. ಇವರ ಕಲೆಯನ್ನು ಅನುಭವಿಸಿ ಆನಂದಿ ಸಬೇಕು. ಇದು ಎಲ್ಲರ ಧ್ಯೇಯ ವಾಗಬೇಕು. ಏಕೆಂದರೆ ಇವ ರಿಂದಲೇ ಬಾಳಿನಲ್ಲಿ ಆಕರ್ಷಣೆ, ಆನಂದ, ಸೌಂದರ್ಯದರ್ಶನ ಆಗಿ ಸಂತೋಷ ತೃಪ್ತಿ ದೊರಕುತ್ತದೆ. ಬಾಳು ಸುಖ ದಾಯಕ ಎನ್ನಿಸುತ್ತದೆ.

ಕವಿ-ರಾಜಕಾರಣಿಗಳ ಕಾರ್ಯ

71

ಪಾರಿಜಾತವ ಕಂಡು ನಿಡುಸುಯ್ದು, ಪದಗಳಿಂ ।
ಶೌರಿಕಥೆಯನು ಹೆಣೆದು ತೃಪ್ತನಹನು ಕವಿ ॥
ಊರಿನುದ್ಯಾನಕದ ತರಿಸಿ ಬೆಳಸುವ ಕಾರ್ಯ- ।
ಧೀರನಲ ರಾಜ್ಯಕನು–ಮಂಕುತಿಮ್ಮ ॥ (ಪದ್ಯ 473)

ಜೀವನದಲ್ಲಿ ಕವಿ–ರಾಜಕಾರಣಿ ಪಾತ್ರವನ್ನು ನಾವು ತಿಳಿದಿರಬೇಕು. ಮಹಾಕವಿ ಕಾವ್ಯದಮೂಲಕ ಜನರ ಮನೋಪ್ರಪಂಚದಲ್ಲಿ ಹೊಸ ಲೋಕವನ್ನೇ ಸೃಷ್ಟಿಸುತ್ತಾನೆ. ಅದನ್ನು ನಿತ್ಯಜೀವನದಲ್ಲಿ ಸಾಕಾರಗೊಳ್ಳಲು ಸಾಧ್ಯವಾಗುವುದು ರಾಜ್ಯವಾಳುವವರ ಪ್ರಯತ್ನದಿಂದ. ಉದಾಹರಣೆಗೆ, ಪಾರಿಜಾತವೃಕ್ಷ ಕಂಡು ಕಾವ್ಯವನ್ನು ಕವಿ ರಚಿಸಿ ಕವಿ ಜನರಿಗೆ ಆನಂದ ಕೊಡಬಲ್ಲ. ಆದರೆ ಪಾರಿಜಾತದ ವೃಕ್ಷ ಪ್ರತ್ಯಕ್ಷ–ಆಗಬೇಕಾದರೆ ಅದನ್ನು ಉದ್ಯಾನವನಗಳಲ್ಲಿ ನೆಡಿಸಿ ಜನಕ್ಕೆಲ್ಲ ಎಟುಕುವಂತೆ ರಾಜಕಾರಣಿ ಮಾಡಬಲ್ಲ ಎಂದರೆ ಕವಿ ಕಲ್ಪನೆಯನ್ನು ವಾಸ್ತವಿಕದಲ್ಲಿ ರಾಜಕಾರಣಿ ಜನರಿಗೆ ದೊರಕಿಸುತ್ತಾನೆ. ಆದ್ದರಿಂದ ಕಲ್ಪನೆಯ ಕಾವ್ಯಪ್ರೇಮ ಮತ್ತು ವಾಸ್ತವಪ್ರಜ್ಞೆಯ ಸಾಧ್ಯತೆ ಎರಡೂ ಜನಕ್ಕಿರಬೇಕು. ಜನರ ಬದುಕಿಗೆ ಕವಿ–ರಾಜ್ಯಕ ಇಬ್ಬರೂ ಬೇಕು. ಏನು ಮಾಡಬೇಕು ಎಂಬುದನ್ನು ಸೃಷ್ಟಿಬ್ರಹ್ಮನಂತೆ ಕವಿ ಕಲ್ಪಿಸಿದ್ದನ್ನು ಜನರ ಪಾಲಿಗೆ ದೊರಕಿಸುವ ಭಗೀರಥ ರಾಜಕಾರಣಿ, ರಾಜ್ಯಕ್ಕೆ ಇವನ ಸಾಹಸ ದೊಡ್ಡದು (ಧೀರನಲ ರಾಜ್ಯಕನು).

ನಿಜವಾದ ಆತ್ಮೋದ್ಧಾರದ ಮಾರ್ಗ

72

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು, ಭೇದವೆಣಿಸದಿರು ॥
ಹೋರುವುದೆ ಜೀವನಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ –ಮಂಕುತಿಮ್ಮ ॥ (ಪದ್ಯ 474)

ಆತ್ಮೋದ್ಧಾರವೆಂದರೆ ನನ್ನನ್ನು ಮಾತ್ರ ನಾನು ಉದ್ಧಾರ ಮಾಡಿ ಕೊಳ್ಳುವುದು ಎಂದರ್ಥವಲ್ಲ. ಜಗತ್ತಿಗಾಗಿ ನಾನು ಇರುವುದು ಎಂದು ತಿಳಿದು ಬಾಳುವುದು ಎಂದರ್ಥ. ಇದಕ್ಕಾಗಿ ಎಲ್ಲ ವೃತ್ತಿಯ ಎಲ್ಲ ಜನರನ್ನು ಗೌರವದಿಂದ ಕಾಣಬೇಕು. ಯಾವವೃತ್ತಿಯನ್ನೂ ಹೀನವೆಂದು ಭಾವಿಸಬಾರದು. ಪ್ರತಿ ಯೊಬ್ಬರಲ್ಲೂ ಯಾವುದೋ ಒಂದು ಬಗೆಯ ಪ್ರತಿಭೆ, ಕಲೆಗಾರಿಕೆ, ವಿದ್ಯಾಕೌಶಲ್ಯ ಇರುತ್ತದೆ. ಅದನ್ನು ಮೆಚ್ಚುವ ಪ್ರವೃತ್ತಿ ನಮಗೆ ಇರಬೇಕು. ಈ ಜಗತ್ತಿನ ಆಗುಹೋಗು ಇತರರ ಬದುಕು ನನಗೆ ಸಂಬಂಧಿಸಿಲ್ಲವೆಂದು ಭಾವಿಸಬಾರದು. ಎಲ್ಲರ ಜೀವನ ಸುಖ ವಾಗಲು ಬೇಕಾದ ಎಲ್ಲ ಬಗೆಯ ಪ್ರಯತ್ನವನ್ನು ಎಲ್ಲರೂ ಮಾಡುವುದೇ ಆತ್ಮೋದ್ಧಾರದ ಗುರಿಯಾಗಿದೆ.

ಜೀವನ ರಹಸ್ಯ

73

ಅಗೆದು ಗೊಬ್ಬರವಿಕ್ಕಿ ನೀರೆರೆದು ತೋಟಿಗನು ।
ಜಗಿವ ಮುಳ್ಳಿರಿತಗಳ ಸೈರಿಸೆ ಗುಲಾಬಿ ॥
ನಗುವುದೊಂದರೆನಿಮಿಷ ; ನಗಲು ಬಾಳ್ಕೆಗಿಯುವುದು ।
ಮುಗುಳು ದುಡಿತಕೆ ತಣಿಸು – ಮಂಕುತಿಮ್ಮ । (ಪದ್ಯ 478)

ಆನಂದದಕ್ಷಣಗಳಿಗೆ ಅವಿರತಶ್ರಮ ಅನಿವಾರ್ಯ. ಜೀವನದಲ್ಲಿ ಸಾರ್ಥಕಸಂತೋಷದ ಕ್ಷಣ ಸುಲಭದಲ್ಲಿ ಸಿಗುವುದಿಲ್ಲ. ತೋಟಗಾರ ನೆಲ ಅಗಿದು ಮಣ್ಣು ಹದಮಾಡಿ ಗೊಬ್ಬರಹಾಕಿ ಕಾಲಕಾಲಕ್ಕೆ ನೀರೆರೆದು ಬೇಲಿಕಟ್ಟಿ ಗಿಡಗಳನ್ನು ಕಾಪಾಡಿ ಬೆಳೆಸಿದರೆ ಹೂ ಹಣ್ಣು ಸಿಗುತ್ತವೆ. ಗುಲಾಬಿ ಹೂಗಿಡ ಮುಳ್ಳಿನಿಂದ ಕೂಡಿದ್ದರೂ ಅದರಲ್ಲಿ ಬಿಡುವ ಹೂ ಸ್ವಲ್ಪ ಹೊತ್ತು ಅರಳಿದ್ದು ಸಂತೋಷ ಕೊಡುತ್ತದೆ. (ಜಗಿವ ಮುಳ್ಳಿರಿತಗಳ ಸೈರಿಸೆ ಗುಲಾಬಿ) ಕೆಲವು ಕಾಲ ಹೂ ನಕ್ಕು ನಲಿಸುವ ಸಂತೋಷಕ್ಕೆ ತೋಟಗಾರ ತಿಂಗಳುಗಟ್ಟಲೆ ಶ್ರಮಪಡುತ್ತಾನೆ. ಆ ಹೂವಿನ ಮುಗುಳುನಗೆಯಲ್ಲಿ ತನ್ನ ಶ್ರಮದ ಸಾರ್ಥಕತೆ ಕಾಣುತ್ತಾನೆ. ಸಂತೋಷದ ಕ್ಷಣಗಳಿಗೆ

ಅಪಾರ ಶ್ರಮ ಬೇಕು ಇದೇ ಜೀವನ ರಹಸ್ಯ. ವಿದ್ಯಾರ್ಥಿ ರ್‍ಯಾಂಕ್‌ಪಡೆವ ಸುಖಕ್ಕೆ ವರ್ಷಗಟ್ಟಲೆ ಶ್ರಮಪಟ್ಟಿರುತ್ತಾನೆ. ಫಲಿತಾಂಶ ಬಂದಾಗ ಆ ನಿಮಿಷ ಅಪಾರಆನಂದವಾಗಿರುತ್ತದೆ. ಒಂದು ನಿಮಿಷದ ತೃಪ್ತಿಯನಗೆ ಮೂಡಲು ವರ್ಷಗಟ್ಟಲೆ ಶ್ರಮಬೇಕು (ಮುಗುಳು ದುಡಿತಕೆ ತಣಿಸು). ಇದು ಪ್ರಕೃತಿಯ ನಿಯಮ ಇದೇ ಜೀವನದ ರಹಸ್ಯ.

ಅರೆಬರೆ ನಂಬಿಕೆ ಸಲ್ಲದು

74

ನಂಬದಿರ್ದನು ತಂದೆ. ನಂಬಿದನು ಪ್ರಹ್ಲಾದ ।
ನಂಬಿಯುಂ ನಂಬದಿರುವಿಬ್ಬಂದಿ ನೀನು ॥
ಕಂಬದಿನೊ ಬಿಂಬದಿನೊ ಮೋಕ್ಷವವರಿಂಗಾಯ್ತು ।
ಸಿಂಬಳದಿ ನೊಣ ನೀನು–ಮಂಕುತಿಮ್ಮ ॥ (ಪದ್ಯ 485)

ಯಾವುದೇ ಕೆಲಸ ಮಾಡಲಿ, ಯಾವುದೇ ವಿಷಯದಲ್ಲಾಗಲಿ ಪೂರ್ತಿ, ಶ್ರದ್ಧೆ ನಂಬಿಕೆ ಇರಬೇಕು. ಅದರಲ್ಲಿ ಸದಾ ನಮ್ಮ ಮನಸ್ಸನ್ನು ನೆಟ್ಟಿರಬೇಕು. ಅದರ ಬಗ್ಗೆ ಸ್ವಲ್ಪವೂ ಅನುಮಾನ ಇರಬಾರದು ನೂರಕ್ಕೆ ನೂರರಷ್ಟು ನಂಬಿಕೆ ಇರಬೇಕು ನಮ್ಮಲ್ಲಿ ಅನೇಕರಿಗೆ ಅದಿಲ್ಲ. ಪೂರ್ತಿನಂಬಿಕೆ ಇದ್ದವರು ಏನಾದರೂ ನಂಬುವುದಕ್ಕೆ ಪೌರಾಣಿಕ ಉದಾಹರಣೆಗಳನ್ನು ಡಿವಿಜಿ ಕೊಡುತ್ತಾರೆ. ಪ್ರಹ್ಲಾದನ ಕಥೆ ಇದಕ್ಕೆ ಸಾಕ್ಷಿ. ಪ್ರಹ್ಲಾದನ ತಂದೆ ಹರಿಯನ್ನು ನಂಬಲಿಲ್ಲ ಅವನನ್ನು ದ್ವೇಷಿಸಿ. ತಾನೇ ದೇವರೆಂದು ತಿಳಿದ. ಅವನು ಸರ್ವವ್ಯಾಪಿ ಆಗಿದ್ದರೆ ಈ ಕಂಬದಲ್ಲಿದ್ದಾನೆಯೇ ಎಂದು ಕೇಳಿದ ಏಕೆಂದರೆ ಅವನಿಲ್ಲ ಎಂಬುದು ಅವನ ದೃಢನಂಬಿಕೆ ಆದರೆ ತಂದೆ ಹಿರಣ್ಯಕಶಿಪುವಿಗಾಗಿ ಕಂಬದಲ್ಲೂ ಹರಿಯಿದ್ದಾನೆ ಎಂದನ್ನು ಪ್ರಹ್ಲಾದನು. ಹರಿ ಇದ್ದಾನೆ–ಇಲ್ಲ ಎಂಬ ಎರಡು ವಿಷಯಗಳಲ್ಲಿ

ಇಬ್ಬರಿಗೂ ಪೂರ್ಣವಿಶ್ವಾಸ ದೃಢನಂಬಿಕೆ ಶ್ರದ್ಧೆ ಪರಿಣಾಮವಾಗಿ ಇಬ್ಬರಿಗೂ ಮೋಕ್ಷವಾಯಿತು. ಕೊನೆಯಲ್ಲಿ ಹಿರಣ್ಯಕಶಿಪುವಿಗೆ ಕಂಬದ ಮೂಲಕ ಹರಿ ಪ್ರತ್ಯಕ್ಷವಾದನು. ಭಕ್ತವಾದ ಪ್ರಹ್ಲಾದನಿಗೆ ನೇರವಾಗಿ ನರಸಿಂಹನಾಗಿ ಕಾಣಿಸಿದನು.

ಆದರೆ ನಮಗೆ ದ್ವೇಷ ಪ್ರೀತಿ ನಂಬಿಕೆ–ಅಪನಂಬಿಕೆ ಯಾವುದರಲ್ಲಿ ಗಟ್ಟಿಮನಸ್ಸು ಪೂರ್ತಿಶ್ರದ್ಧೆ ಇಲ್ಲ; ಹಾಗೂ ಸರಿ ಹೀಗೂ ಸರಿ; ಸ್ವಲ್ಪ ನಂಬಿಕೆ ಸ್ವಲ್ಪ ಅನುಮಾನ; ದೃಢನಿರ್ಧಾರವಿಲ್ಲ ಇಂಥ ಜನರನ್ನು ಸಿಂಬಳದ ನೊಣ ಎನ್ನುತ್ತಾರೆ. ಡಿವಿಜಿ ಸಿಂಬಳದ ಅಂಟಿನಲ್ಲಿ ನೊಣ ಅರ್ಧ ಸಿಕ್ಕಿಕೊಂಡಿದೆ. ಅರ್ಧ ಸಿಕ್ಕಿಕೊಂಡಿಲ್ಲ ಅಲ್ಲಿರಲಾರದು, ಹೊರಬರಲಾರದು ಈ ರೀತಿ ಫಜೀತಿ ಪೂರ್ಣ ನಂಬಿಕೆ ನಮ್ಮದಾಗಿದೆ ಇಲ್ಲದವರ ಸ್ಥಿತಿ ಬದುಕಿನಲ್ಲಿ ಯಾವುದೇ ವಿಚಾರದಲ್ಲಾಗಲಿ ಪೂರ್ಣಶ್ರದ್ಧೆ ಇರಬೇಕು ಎಂಬುದು ಡಿವಿಜಿ ಅವರ ಅಭಿಮತ.

ಪರಮಪೂಜೆ ಯಾವುದು?

75

ಅರುಣೋದಯಪ್ರಭೆಯ, ಗಿರಿಶೃಂಗದುನ್ನತಿಯ ।
ವರುಣಾಲಯಾಯತಿಯ ನಿರುಕಿಸಿದೊಡಹುದೇಂ ? ॥
ಬೆರಗು, ಬರಿಬೆರಗು, ನುಡಿಗರಿದೆನಿಪ್ಪಾನಂದ ।
ಪರಮಪೂಜೆಯುಮಂತು–ಮಂಕುತಿಮ್ಮ ॥ (ಪದ್ಮ 495)

ಪ್ರಕೃತಿ ಸೌಂದರ್ಯದ ಮೂಲಕ ಪರಮಾತ್ಮ ಆನಂದವನ್ನು ನೀಡುತ್ತಾನೆ. ಆ ಆನಂದವನ್ನು ಮಾನವ ಸವಿದರೆ ಅದೇ ಪರಮಾತ್ಮನ ಪೂಜೆ. ಬೆಳಗಿನ ಸೂರ್ಯೋದಯದಲ್ಲಿ ಕಂಡುಬರುವ ಬಣ್ಣದಚೆಲುವು, ಹಿಮಾಲಯದಂಥ ಉನ್ನತಬೆಟ್ಟಗಳ ಮನೋಹರ ನೋಟ, ವಿಸ್ತಾರ ಸಮುದ್ರದ ಬೆರಗಾಗಿಸುವ ಸೌಂದರ್ಯ, ಇವುಗಳನ್ನು ಕಂಡಾಗ ಮಾನವ ಮಾತನ್ನು ಮೀರಿದವನಾಗುತ್ತಾನೆ. ನುಡಿಗರಿಯದ ಮೌನಿಯಾಗುತ್ತಾನೆ, ಬೆರಗಾಗುತ್ತಾನೆ. ತನ್ಮಯನಾಗುತ್ತಾನೆ. ಅದರಲ್ಲೇ ಆನಂದಪರವಶನಾಗಿ ಲೀನವಾಗುತ್ತಾನೆ. ಪ್ರಕೃತಿಯಲ್ಲಿ ಲೀನಗೊಳ್ಳುವ ತಾದಾತ್ಮ್ಯವೇ ಭಗವಂತನ ಆರಾಧನೆ (ಪರಮಪೂಜೆ) ಆಗಿದೆ.

ಪಟ್ಟಣಗಳಲ್ಲಿ ಕಲ್ಲು ಸಿಮೆಂಟ್ ಇಟ್ಟಿಗೆ ಕಟ್ಟಡಗಳಲ್ಲಿ ವಾಸಿಸುತ್ತಾ ನಾಗರಿಕ ಬದುಕಿನಲ್ಲಿ ಪ್ರಕೃತಿಯ ಸೌಂದರ್ಯದ

ಆಸ್ವಾದನೆಯನ್ನು ಕಳೆದುಕೊಂಡಿದ್ದಾನೆ. ಸೂರ್ಯೋದಯ, ಚಂದ್ರೋದಯಗಳ ಸೊಗಸನ್ನೇ ಅನೇಕ ಪಟ್ಟಣಿಗರು ನೋಡಿಲ್ಲ. ಆದರೆ ಸೂರ್ಯಚಂದ್ರರ ಉದಯಸ್ತಮಾನಗಳೇ ಭಗವಂತನ ಸೌಂದರ್ಯವಾಗಿದೆ. ಅದಕ್ಕೆ ಕುವೆಂಪು ಹೇಳಿದ ನುಡಿ: 'ಸೂರ್ಯೋದಯ, ಚಂದ್ರೋದಯ, ಇವು ದೇವರ ಕರುಣೋದಯ ಕಾಣೋ! ಎಂಬ ಮಾತನ್ನು ನಾವು ಮರೆಯಬಾರದು.

ಆತ್ಮಾನಂದವೇ ಲಾಭ

76

ಸಂಗೀತ ತಲೆದೂಗಿಪುದು, ಹೊಟ್ಟೆ ತುಂಬೀತೇ ? ।
ತಂಗದಿರನೆಸಕ ಕಣ್ಗಮೃತ, ಕಣಜಕದೇಂ ? ॥
ಅಂಗಡಿಯ ಮಾಡದಿರು ಸುಕೃತಪ್ರಸಕ್ತಿಯಲಿ ।
ಪೊಂಗುವಾತ್ಮವೆ ಲಾಭ–ಮಂಕುತಿಮ್ಮ ॥ (ಪದ್ಯ 498)

ಪ್ರಕೃತಿಸೌಂದರ್ಯ ಕಲೆಯ, ಆನಂದದ, ಅಂತರಂಗದ ಸುಖಕ್ಕೆ ಸಾಧನ; ಬಹಿರಂಗದ ವ್ಯಾಪಾರಕ್ಕಲ್ಲ. ಇವುಗಳನ್ನು ವ್ಯಾಪಾರದ ದೃಷ್ಟಿಯಿಂದ ಲಾಭದದೃಷ್ಟಿಯಿಂದ ನೋಡಬಾರದು. ಸಂಗೀತ ಕೇಳಿದರೆ ಹೃದಯಕ್ಕೆ ಆನಂದ ಉದರಂಭರಣಕ್ಕಲ್ಲ. ಬೆಳದಿಂಗಳಿನ ರಾಶಿ ಕಣ್ಣಿಗೆ ತಂಪು, ಮನಸ್ಸಿಗೆ ಹಿತ. ಹಗೇವಿನಲ್ಲಿ ತುಂಬಿರುವ ವಸ್ತುವಲ್ಲ ಪೂರ್ವಜನ್ಮಪುಣ್ಯದಿಂದ ಭಗವಂತನ ಕರುಣೆಯಿಂದ ದೊರೆವ ಇವನ್ನು ಲೌಕಿಕ–ಲಾಭದೃಷ್ಟಿಯಲ್ಲಿ ಅಂಗಡಿವ್ಯಾಪಾರದಂತೆ ನೋಡಬಾರದು. ನಮ್ಮ ಒಳಗಿನಮನಸ್ಸು ಶುದ್ಧಗೊಳ್ಳುವ ಸಾಧನ ಅದರಿಂದ ದೊರೆವ ಆತ್ಮಸುಖವೇ ಲಾಭ, (ಪೊಂಗುವಾತ್ಮವೆ ಲಾಭ) ಎಂದು ತಿಳಿಯಬೇಕು.

ಗಿಡಮರಗಳು ಪಶುಪಕ್ಷಿಗಳ ನೆಲವೀಡಾದ ನಿಸರ್ಗದ ಚೆಲುವು, ಸಂಗೀತ ನೃತ್ಯ ನಾಟಕ ಕಲೆಗಳು ನೀಡುವ ಆತ್ಮಾನಂದದಲ್ಲೇ ಜೀವನದ ಸಾರ್ಥಕತೆ ಇದೆ ಇದನ್ನು ವ್ಯಾಪಾರಿದೃಷ್ಟಿಯಿಂದ ನೋಡಬಾರದು ಎನ್ನುತ್ತಾರೆ ಡಿ.ವಿ.ಜಿ.

ಉದ್ಧಾರಮಾರ್ಗ ಹಲವಾರು

77

ದೇವಮಂದಿರ ಭಜನೆ ಪೂಜೆ ಪ್ರಸಾದಗಳು ।
ಜೀವನದಲಂಕಾರ, ಮನಸಿನುದ್ಧಾರ ॥
ಭಾವವಂ ಕ್ಷುಲ್ಲಜಗದಿಂ ಬಿಡಿಸಿ ಮೇಲೊಯ್ವು 1
ದಾವುದಾದೊಡಮೊಳಿತು–ಮಂಕುತಿಮ್ಮ ॥ (ಪದ್ಯ 499)

ದೇವಸ್ಥಾನದಲ್ಲಿ ಕಣ್ಣಿಗೆ ದೇವರದರ್ಶನ, ಕಿವಿಗೆಇಂಪಾದ ಭಕ್ತಿಪೂರ್ಣಭಜನೆ, ಶ್ರದ್ಧೆಯಿಂದಮಾಡುವ ದೇವರಪೂಜೆ, ದೇವರ ಪ್ರಸಾದವೆಂದು ನೀಡುವ ಸ್ವಾದಿಷ್ಟಚರಪು, ಮಂಗಳಕಾರ್ಯಗಳಲ್ಲಿ ಬದುಕಿನಲ್ಲಿ ಮಾಡಿಕೊಳ್ಳುವ ಅಲಂಕಾರಗಳು, ಮನಸ್ಸನ್ನು ಪ್ರಫುಲ್ಲ ಗೊಳಿಸಿದರೆ ನೆಮ್ಮದಿಕೊಟ್ಟರೆ ಇವೆಲ್ಲವೂ ಬಾಳಿಗೆ ಮುಖ್ಯವಾಗುತ್ತದೆ. ನಮ್ಮ ಮನಸ್ಸನ್ನು ಕೀಳುಭಾವದಿಂದ ಹೀನವಾದ ಬದುಕಿನಿಂದ ದೂರಮಾಡಿ ಉನ್ನತವಾದ ಆದರ್ಶವಾದ ಬಾಳಿಗೆ ಕರೆದೊಯ್ಯುವ ಎಲ್ಲ ಸಾಧನಗಳು ಒಳ್ಳೆಯವೇ ಆಗಿವೆ. (ಮೇಲೊಯ್ವು ದಾವುದಾ ದೊಡಮೊಳಿತು) ದೇವಸ್ಥಾನದ ಶಿಲ್ಪಸೌಂದರ್ಯ ಅಲ್ಲಿ ನಡೆಯುವ ಭಜನೆ, ಪೂಜೆಗಳು ಹಂಚುವ ತೀರ್ಥಪ್ರಸಾದ ಬದುಕಿನಲ್ಲಿ ನಮ್ಮ ವೇಷಭೂಷಣಗಳಲ್ಲಿ ಆಭರಣಧಾರಣೆಯಲ್ಲಿ ಕೇಶಾಲಂಕಾರಗಳಲ್ಲಿ ಅನುಭವಿಸುವ ಆನಂದ ಮನಸ್ಸನ್ನು ತಂಪುಗೊಳಿಸುವ ಮಹಾತ್ಮರ ವಾಣಿ ಯಾವುದಾದರೂ ಸರಿ ನಮ್ಮ ಆತ್ಮೋದ್ಧಾರಕ್ಕೆ ನೆರವಾದರೆ ಸರಿ. ಅವೆಲ್ಲ ಬಾಳಿಗೆ ಒಳ್ಳೆಯಸಾಧನೆಗಳೆಂದೇ ಹೇಳಬೇಕು.

ಭಗವಂತನಿಗೆ ಅರ್ಪಿಸುವುದು ಸಹಜ

78

ದೇವನೇನತಿಶಯಿತಮಾನಿಸನೆ ಭೋಗಕ್ಕೆ ? ।
ಹೂವುಣಿಸು ಮುಡಿಪೊಡವೆಯವನಿಗಂ ಬೇಕೆ ? ॥
ಆವುದೊಳ್ಳಿತೊ ತನಗೆ ನರನದನು ಪರಮಂಗೆ ।
ನೈವೇದಿಪುದು ಸಾಜ–ಮಂಕುತಿಮ್ಮ ॥ (ಪದ್ಯ 500)

ಭಗವಂತನಿಗೆ ಭಕ್ತರು ಅಂಗಭೋಗವಾಗಿ ರಂಗಭೋಗವಾಗಿ. ಅರ್ಚನೆ, ಪೂಜೆ ಹೂವು, ಆಹಾರ, ಒಡವೆ ವಸ್ತ್ರ ಮೀಸಲು ಹಣ ಮೊದಲಾದವನ್ನು ಅರ್ಪಿಸುತ್ತಾರೆ. ನೃತ್ಯ, ಸಂಗೀತ ಅರ್ಪಿಸುತ್ತಾರೆ. ಭಗವಂತನ ಭೋಗಕ್ಕೆ ಇವೆಲ್ಲ ಬೇಕೇ? ಎಂದರೆ ಖಂಡಿತ ಇಲ್ಲ. ತನಗೆ ಹಿತವುಂಟುಮಾಡುವನು ದೇವರು ಎಂಬ ಕಾರಣದಿಂದ ಮಾನವ ತನಗೆ ಪ್ರಿಯವಾದುವನ್ನು ಆಹಾರ, ಪುಷ್ಪ, ಒಡವೆ, ನೃತ್ಯ ಸಂಗೀತ ಇತ್ಯಾದಿಯನ್ನು ನೈವೇದ್ಯವಾಗಿ ಆರ್ಪಿಸುತ್ತಾನೆ. ಪ್ರಸಾದವಾಗಿ ಸ್ವೀಕರಿಸುತ್ತಾನೆ. ಇದು ಮಾನವನ ಸಹಜಗುಣ. ಅದರಿಂದ ಧನ್ಯತಾಭಾವವನ್ನು ತಾಳುತ್ತಾನೆ. ಹಾಗಾಗಿ ಭಗವಂತನ ಸಾನ್ನಿಧ್ಯ ದೇವಸ್ಥಾನಗಳಲ್ಲಿ ಇದೆ ಎಂದ ನಂಬಿಕೆಯಿಂದ ತಾನುಮಾಡುವ ಎಲ್ಲಾ ಉತ್ಸವಾಚರಣೆಗಳನ್ನು ದೇವರಿಗೆ ಸಲ್ಲಿಸುತ್ತಾನೆ. ದೇವರಿಗೆ ಕಲ್ಯಾಣ ಮಾಡಿಸುತ್ತಾನೆ. ಶಯನೋತ್ಸವ

ಮಾಡಿಸುತ್ತಾನೆ ಮೆರವಣಿಗೆ ಪ್ರಿಯನಾದ ಮಾನವ ದೇವರಿಗೆ ಬ್ರಹ್ಮೋತ್ಸವ ಮಾಡಿಸುತ್ತಾನೆ. ತನಗೆ ಯಾವ ಯಾವುದು ಸುಖಕರವೋ ಅವೆಲ್ಲವನ್ನು ದೇವರಿಗೂ ಮಾಡಿಸುತ್ತಾನೆ (ಆವುದೊಳ್ಳಿತೊ ತನಗೆ ನರನದನು ಪರಮಂಗೆ ನೈವೇದಿಸುವುದು) ಇದು ಮಾನವ ಸಹಜಸ್ವಭಾವ (ಸಾಜ)

ದೈವಕೃಪೆ ಹೇಗಿರುತ್ತದೆ?

79

ಗಗನ ಬಿಸಿಗವಸಾಗಿ, ಕೆರೆಗಳಾವಿಗೆಯಾಗಿ ।
ಜಗದುಸಿರೆ ಹೊಗೆಯಾಗಿ ಧಗಧಗಿಸುವಂದು ॥
ಒಗೆದೆತ್ತಣಿನೊ ರಾತ್ರಿಯಲಿ ಧರೆಗೆ ತಂಪೆರೆವ ।
ಮುಗಿಲವೊಲು ದೈವಕೃಪೆ–ಮಂಕುತಿಮ್ಮ ॥ (ಪದ್ಯ 504)

ದೈವಾನುಗ್ರಹ ಹೇಗಿರುತ್ತದೆ? ಎಲ್ಲಿಂದಬರುತ್ತದೆ? ಯಾರಿಗೆ ಬರುತ್ತದೆ? ಎಂಬಪ್ರಶ್ನೆ ಅನೇಕರಿಗೆ ಇರುತ್ತದೆ. ಅದಕ್ಕೆ ಡಿವಿಜಿ ಹೇಳು ವುದು ಹೀಗೆ : ಬೇಸಿಗೆಯಲ್ಲಿ ಆಕಾಶ ಸೂರ್ಯನ ಶಾಖದಿಂದ ಬಿಸಿ ಹೊದಿಕೆಯಾಗಿ ಕೆರೆಒಣಗಿ ಕುಂಬಾರನ ಒಲೆಯಂತೆ ಧಗಿಧಗಿಸುತ್ತಿರಲು, ಜಗತ್ತಿನ ಎಲ್ಲಡೆ ರಣಬಿಸಿಲಿಂದ ಗಾಳಿ ಬಿಸಿಹೊಗೆಯಾಗಿರಲು, ಅಗ್ನಿ ಪ್ರಜ್ವಲಿಸುವ ಅಗ್ನಿಕುಂಡದಂತೆ ಜಗತ್ತಾದಾಗ ಎಲ್ಲಿಂದಲೋ ಗಾಳಿಬೀಸಿ ಮೋಡಕರಗಿ ಮಳೆಬಂದು ತಂಪಾದಂತೆ ಮಾನವರ ಕರ್ಮದ ಬವಣೆಯನ್ನು ಪರಮಾತ್ಮನಕೃಪೆ ಪಾರು ಮಾಡುತ್ತದೆ. ಹೀಗೆ ದೈವಕೃಪೆ ಎಲ್ಲಿಂದಲೋ ಬಂದು ಸೂಕ್ತ ಸಮಯದಲ್ಲಿ ಅನುಗ್ರಹಿಸುತ್ತದೆ. ಯಾರಿಗೂ ಇದರ ಮರ್ಮ ತಿಳಿಯದು.

ಆದಕಾರಣ ಮನುಷ್ಯ ದೇವಕೃಪೆಯಲ್ಲಿ ನಂಬಿಕೆಯಿಟ್ಟು ಮುನ್ನಡೆ ಯಬೇಕು ನಿರಾಶನಾಗಬಾರದು.

ಧರ್ಮ-ವಿಜ್ಞಾನಗಳ ಸಂಗಮವೆ ಯಶಸ್ಸು

80

ಹೊಸಚಿಗುರು ಹಳೆಬೇರು ಕೂಡಿರಲು ಮರಸೊಬಗು।
ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।
ಜಸವು ಜನಜೀವನಕೆ–ಮಂಕುತಿಮ್ಮ ॥ (ಪದ್ಯ 522)

ಇಂದು ವಿಜ್ಞಾನಿಗಳಯುಗ. ಈ ಯುಗದಲ್ಲಿ ಸನಾತನಧರ್ಮದ ಸಂಪ್ರದಾಯವಾದಿಗಳೂ ಇದ್ದಾರೆ. ಇವರುಗಳ ನಡುವೆ ಸ್ಪರ್ಧೆ ನಡೆಯುತ್ತಿರುತ್ತದೆ. ಇದು ಸರಿ ಅಲ್ಲ. ಇವರಿಬ್ಬರ ಸಮನ್ವಯದಿಂದ ಜನರ ಬದುಕಿಗೆ ಮಂಗಳವಾಗುತ್ತದೆ. ಹಳೆಯಬೇರಿನಿಂದ ಹೊಸಚಿಗುರು ಬರುತ್ತದೆ. ಹಳೆಯಗಿಡ ಅಲ್ಲ. ಹಳೆಯಗಿಡಕ್ಕೆ ಹೊಸಚಿಗುರು ಬಂದಾಗ ನೂತನಶೋಭೆ ಉಂಟಾಗುತ್ತದೆ. ಅದೇ ರೀತಿ ಹಳೆಯವೇದಶಾಸ್ತ್ರಗಳ ಜ್ಞಾನ ಆಧುನಿಕ ವಿಜ್ಞಾನ–ಶಾಸ್ತ್ರಗಳೊಂದಿಗೆ ಮೇಳವಿಸಿದಾಗ ವಿಜ್ಞಾನ–ಕಲೆ ಸಮನ್ವಯವಾದಾಗ ನಿಜಕ್ಕೂ ಲೋಕಕಲ್ಯಾಣ ಆಗುತ್ತದೆ. ಆದಕಾರಣ ಹಳೆಯದು ಹೊಸದು ಎರಡೂ ಮುಖ್ಯ ಬದುಕಿಗೆ, ಲೋಕಕ್ಕೆ ಎಂದು ತಿಳಿಯಬೇಕು. ಋಷಿವಾಕ್ಯ ಸನಾತನಧರ್ಮ–ವಿಜ್ಞಾನ–ಕಲೆ, ಯಂತ್ರಜ್ಞಾನ, ಆಧುನಿಕಕಲೆ ಒಂದಾಗಬೇಕು ಆಗ ಜನಕಲ್ಯಾಣ. (ಜಸವು ಜನಜೀವನಕೆ).

ಭಕ್ತ-ಜ್ಞಾನಿಗಳ ದಾರಿ

81

ಭಕ್ತಿ ನಂಬುಗೆ ಸುಲಭ ; ಭಜನೆ ವಂದನೆ ಸುಲಭ ।
ತತ್ತ್ವಶೋಧನೆ ಕಷ್ಟ ; ಮತಿಕಾರ್ಯ ಕಷ್ಟ ॥
ಸುತ್ತುವುದು ಗಿರಿಸುತ್ತ ಸುಳುವೆಂದು ಲೋಕಜನ ।
ಹತ್ತುವನು ತಾಪಸಿಯೊ –ಮಂಕುತಿಮ್ಮ ॥ (ಪದ್ಯ 528)

ಕರ್ಮಮಾರ್ಗದಲ್ಲಿ ಭಗವಂತನನ್ನು ನಂಬಿ ತನ್ನೆಲ್ಲ ನಡೆನುಡಿಗಳೆಲ್ಲ ಅವನಿಗಾಗಿ ಎಂದು ಭಕ್ತ ತಿಳಿಯುತ್ತಾನೆ. ಇನ್ನು ನವವಿಧಭಕ್ತಿಯಲ್ಲಿ ಭಗವಂತನನ್ನು ಕೀರ್ತಿಸಿ ಭಜನೆಮಾಡುತ್ತಾನೆ. ಜನಸಾಮಾನ್ಯರಿಗೆ ಇವೆರಡೂ ಸಾಧ್ಯವಾಗುವ ಸುಲಭದಮಾರ್ಗ ಗಳು. ಆದರೆ ಜ್ಞಾನಮಾರ್ಗ ದಲ್ಲಿ ಸತ್ಯದಸ್ವರೂಪ ತಿಳಿದು ದೇವರನ್ನುಕಾಣುವ ಬುದ್ಧಿಯ ಕೆಲಸ ಸುಲಭವಲ್ಲ. (ತತ್ತ್ವಶೋಧನೆ ಕಷ್ಟ) ಅದು ಜ್ಞಾನಿಗಳ ಮಾರ್ಗ ಕಠಿಣ ಮಾರ್ಗವದು. ಅದಕ್ಕೆ ತಪಸ್ಸುಬೇಕು. ಸತ್ಯಸಾಕ್ಷಾತ್ಕಾರ ಸುಲಭವಲ್ಲ. ಸಾಮಾನ್ಯರಿಗೆ ಎತ್ತರದ ಬೆಟ್ಟದತುದಿಯ ದೇವಾಲಯದ ದರ್ಶನ ಇದ್ದಹಾಗೆ; ಬೆಟ್ಟದಬುಡದಲ್ಲಿ ಇರುವ ದೇವರದರ್ಶನದ ಹಾಗೆ ಸುಲಭವಲ್ಲ. ಅದು ತಪಸ್ವಿಗಳಿಗೆ ಸಾಧ್ಯ. ಅದೇ ಜ್ಞಾನಮಾರ್ಗ.

ಆದ್ದರಿಂದ ಪಾಮರರಮಾರ್ಗವೆಂದರೆ ಭಕ್ತಿ, ಭಜನೆಗಳು; ಜ್ಞಾನಿಗಳ ಮಾರ್ಗವೆಂದರೆ ಸತ್ಯಾನ್ವೇಷಣೆ. ಭಕ್ತಿಮಾರ್ಗ ಎಂದರೆ ಬೆಟ್ಟದ ಬುಡದ ದೇವಸ್ಥಾನದ ದರ್ಶನ, ಜ್ಞಾನಮಾರ್ಗ ಎಂದರೆ ಬೆಟ್ಟದ ಮೇಲಿನ ದೇವಸ್ಥಾನ ಶ್ರಮದಿಂದ ಬೆಟ್ಟ ಹತ್ತಿ ಹೋಗಬೇಕು. ಅಂಥ ಕಠಿಣ ಸಾಧನೆ ಮಾಡುವನೇ ತಪಸ್ವಿ (ಹತ್ತುವನು ತಾಪಸಿಯೆ)

ಅನುಭವವೆ ಧರ್ಮದ ದೀಪ

82

ಅನುಭವದ ಪಾಲೊಳು ವಿಚಾರ ಮಂಥನವಾಗೆ ।
ಜನಿಯಿಕುಂ ಜ್ಞಾನನವನೀತವದೆ ಸುಖದಂ ॥
ಗಿಣಿಯೋದು ಪುಸ್ತಕಜ್ಞಾನ ; ನಿನ್ನನುಭವವೆ ।
ನಿನಗೆ ಧರುಮದ ದೀಪ–ಮಂಕುತಿಮ್ಮ ॥ (ಪದ್ಮ 544)

ಬಾಳಿಗೆ ಅನುಭವ ಅರಿವು ಎರಡೂ ಬೇಕು. ಅವೆರಡೂ ಸೇರಿದಾಗ ಸತ್ಯದರ್ಶನವಾಗುತ್ತದೆ. ಅದು ಧರ್ಮ, ಲೋಕಾನುಭವ ಎಂಬ ಹಾಲಿನಲ್ಲಿ ವಿಚಾರವೆಂಬ ಮಂತಿನಿಂದ ಕಡೆದಾಗ ಸತ್ಯವೆಂಬ ನವನೀತ ದೊರೆಯುತ್ತದೆ. ಕೇವಲ ಶಾಸ್ತ್ರಾಭ್ಯಾಸ ಗಿಣಿಯೋದಿನಂತೆ ವ್ಯರ್ಥ. ಆದರೆ ಅರಿವು ಸ್ವಾನುಭವಗಳು ದಾರಿ ದೀಪ; ಇವೆರಡು ಸೇರಿದರೆ ಅದೇ ಧರ್ಮ. ಆದ್ದರಿಂದ ವಿಚಾರ–ಆಚಾರಗಳೆರಡರ ನಡೆನುಡಿಗಳ ಸಂಗಮ ಬಾಳಿಗೆ ಅಗತ್ಯ. ಈ ಬಗೆಯ ಆಚರಣೆ ಸಾರ್ಥಕಜೀವನ ನಡೆಸಲು ಕತ್ತಲಿನಿಂದ ಬೆಳಕಿನೆಡೆಗೆ, ಅಜ್ಞಾನದಿಂದ ಸುಜ್ಞಾನದೆಡೆಗೆ ಕರೆದೊಯ್ಯುವ ಧರ್ಮಜ್ಯೋತಿ (ಧರ್ಮದ ದೀಪ).

ಗಾಯತ್ರಿಮಂತ್ರದ ಹಿರಿಮೆ

83

ಶ್ರೀಯನಾಯುವ ಬಲವ ಜಯವ ಬೇಡಿರ್ದೊಡಂ।
ಗಾಯತ್ರಿಯನೆ ಪರಮಮಂತ್ರವೆಂದಾರ್ಯರ್ ॥
ಧೀಯಂ ಪ್ರಚೋದಿಸೆಂದನುದಿನದಿ ಬೇಡಿದರು ।
ಶ್ರೇಯಸ್ಸು ಧೀಮಹಿಮೆ –ಮಂಕುತಿಮ್ಮ । (ಪದ್ಯ 546)

ಹಿಂದೂಧರ್ಮದಲ್ಲಿ ಗಾಯತ್ರೀಮಂತ್ರಕ್ಕೆ ವಿಶೇಷ ಮಹತ್ವವಿದೆ. ನಮ್ಮ ಪೂರ್ವಜರಾದ ವಿಶ್ವಾಮಿತ್ರಮಹರ್ಷಿಗಳು ತಮ್ಮ ದೀರ್ಘಕಾಲದ ತಪಿಸ್ಸಿ ನಿಂದ ಗಾಯತ್ರಿಮಂತ್ರವನ್ನು ಸರಸ್ವತಿಯಿಂದ ಪಡೆದರು; ಲೋಕಕ್ಕೆ ನೀಡಿದರು. ಅನುಭವದಿಂದ ಅಂತರಂಗದಲ್ಲಿ ಸತ್ಯಕಂಡುಬಂದಾಗ ಬರುವ ತಿಳಿವಳಿಕೆಯೆ ನಿಜವಾದ ಜ್ಞಾನ. ಆ ಜ್ಞಾನವನ್ನು ಗಾಯತ್ರಿ ಬೋಧಿಸುತ್ತದೆ. ಆದ್ದರಿಂದಲೇ ಗಾಯತ್ರಿದೇವಿ ನಮಗೆ ಐಶ್ವರ್ಯವನ್ನು ಆಯುಸ್ಸನ್ನು (ಆಯು) ಶಕ್ತಿಯನ್ನು (ಬಲ) ಯುದ್ಧದಲ್ಲಿ ಗೆಲುವನ್ನು (ಜಯ) ಕೊಡಲಿ ಎಂದು ಜನರು ಭಗವಂತನಲ್ಲಿ ಕೇಳಿಕೊಂಡರು ಇದಕ್ಕಾಗಿ ನಮ್ಮ ಧೀಶಕ್ತಿಯನ್ನು ಪ್ರಚೋದಿಸು, ಸ್ಫೂರ್ತಿಸು ಎಂದು ಗಾಯತ್ರಿಮಾತೆಯನ್ನು ಪ್ರಾರ್ಥಿಸಿದರು. ಏಕೆಂದರೆ ಈ ಮಂತ್ರದ ಧ್ಯಾನ ದಿಂದ ಶ್ರೇಯಸ್ಸು (ಶಾಶ್ವತ ಸುಖ) ಬರುತ್ತದೆ. ಅದರಿಂದ ನಮ್ಮ ಬಾಳಿಗೆ

ಬೆಳಕಾಗುತ್ತದೆ. ಜೀವೋನ್ನತಿ ಉಂಟಾಗುತ್ತದೆ. ಇದು ಧೀಮಹಿಮೆ. ಲೋಕಕಲ್ಯಾಣಕ್ಕೆ, ಆತ್ಮೋದ್ಧಾರಕ್ಕೆ ನಮ್ಮ ಧೀಶಕ್ತಿ ಸದ್ಬುದ್ಧಿ ವಿನಿಯೋಗ ವಾಗಬೇಕು. ಆ ಶಕ್ತಿ ಗಾಯತ್ರಿ ಮಂತ್ರದಿಂದ ಬರುತ್ತದೆ. ಆದ್ದರಿಂದ ಗಾಯತ್ರಿಮಂತ್ರವನ್ನು ಎಲ್ಲರೂ ಪಠಿಸಬಹುದು ವಿದ್ಯಾರ್ಥಿಗಳು ಪಠಿಸುವ ಸ್ತೋತ್ರಗಳಲ್ಲಿ ಇರಬೇಕಾದ ಮಂತ್ರ ಗಾಯತ್ರಿಮಂತ್ರ ಎನ್ನುತ್ತಾರೆ ಡಿವಿಜಿ.

ನಮ್ಮ ಸಂತೋಷ ನಮಗೆ ಮುಖ್ಯ

84

ಅರಣ್ಯಕದ ಪುಷ್ಪಗಳ ಮೂಸುವವರಾರು? ।
ಆರಿಹರು ಪತಗದುಡುಪನು ಹುಡುಕಿ ಮೆಚ್ಚಲ್ ? ॥
ಬೇರೊಬ್ಬರೆಣಿಕೆಯಿಲ್ಲದೆ ಪ್ರಕೃತಿ ತನಗೆಂದೆ ।
ಸ್ವಾರಸ್ಯವೆಸಗುವಳೊ? –ಮಂಕುತಿಮ್ಮ ॥ **(ಪದ್ಯ 566)**

ಈ ಪ್ರಪಂಚದಲ್ಲಿ ಬಹಳ ಜನರೂ ಇನ್ನೊಬ್ಬರು ಮೆಚ್ಚಬೇಕು ಎಂದು ತಮಗಿಷ್ಟವಿರಲಿ ಇಲ್ಲದಿರಲಿ ಅನೇಕ ಸಾಹಸಗಳನ್ನು ಮಾಡುತ್ತಾರೆ. ನಾವು ಮಾಡುವ ಕೆಲಸದಿಂದ ನಮಗೆ ಸಂತೋಷವಾಗುತ್ತಿದೆಯೇ ಎಂಬುದಕ್ಕಿಂತ ಹೆಚ್ಚಾಗಿ ಇನ್ನೊಬ್ಬರು ಮೆಚ್ಚುತ್ತಾರೆಯೇ ಎಂಬುದಕ್ಕೆ ಗಮನಕೊಡುತ್ತೇವೆ. ಇದು ಅಗತ್ಯವಿಲ್ಲ ಆತ್ಮಸಂತೋಷ ಮುಖ್ಯ. ಇದಕ್ಕೆ ಪ್ರಕೃತಿಯೇ ಸಾಕ್ಷಿ. ಈಗ ನೋಡಿ, ದಿನಬೆಳಗಾದರೆ ಕಾಡಿನಲ್ಲಿ ನಾನಾಬಗೆಯ ಗಿಡಮರಗಳಿಂದ ಬಗೆಬಗೆಯ ಆಕಾರದ ಸುಗಂಧದ ಚಿತ್ರವಿಚಿತ್ರಬಣ್ಣಗಳ ಹೂಗಳು ಅರಳುತ್ತವೆ. ಅದನ್ನು ನೋಡಿ ಆನಂದಿಸಿ ಮೂಸುವರು ಯಾರಾದರೂ ಇದ್ದಾರೆಯೇ? ಹಾಗೆಯೇ ಆ ಹೂಗಳಸುತ್ತಲೂ ವಿವಿಧವರ್ಣಗಳ ಬೆಡಗಿನ ಆಕರ್ಷಕಚಿಟ್ಟೆಗಳು ಹಾರಾಡು ತ್ತಿರುತ್ತವೆ.

(ಪತಗದುಡುಪನು) ಅದನ್ನು ಗಮನಿಸಿ ಮೆಚ್ಚಲು ಯಾರಿದ್ದಾರೆ? ಯಾರೂ ಇಲ್ಲವಲ್ಲ! ಎಂದು ಹೂ ಅರಳದೆ ಮೊಗ್ಗಾಗಿ ಉಳಿದಿಲ್ಲ. ಚಿಟ್ಟೆಗಳು ಹಾರಾಡುವುದನ್ನು ನಿಲ್ಲಿಸಿಲ್ಲ ಏಕೆಂದರೆ ಅವೆಲ್ಲ ಪ್ರಕೃತಿಯ ಕೊಡುಗೆಗಳು. ಪ್ರಕೃತಿ ಎಂದೂ ಇನ್ನೊಬ್ಬರು ಮೆಚ್ಚುತ್ತಾರೆ ಎಂಬ ನಿರೀಕ್ಷೆಯಿಂದ ಹೂ ಅರಳಿಸಲು ಚಿಟ್ಟೆಗಳನ್ನು ಸೆಳೆವ ಕಾರ್ಯಮಾಡುವುದಿಲ್ಲ. ಪ್ರಕೃತಿ ತನಗೆ ತಾನು ಅವುಗಳನ್ನು ನೋಡಿ ಸಂತೋಷಿಸುವ ಚಮತ್ಕಾರ ಸ್ವಾರಸ್ಯ ಅವಳದು. ಹಾಗೆಯೇ ನಾವು ನಮ್ಮ ಸಂತೋಷಕ್ಕಾಗಿ ಚೆಲುವನ್ನು ಸೃಷ್ಟಿ ಮಾಡಬೇಕು. ಸಂಗೀತ, ಚಿತ್ರ ಶಿಲ್ಪ ನಾಟ್ಯ, ಕಲೆಗಳಲ್ಲಿ ತೊಡಗಬೇಕು ಅವುಗಳಿಂದ ನಮ್ಮ ಆನಂದ ನಮಗೆ ಸಿಗಬೇಕು. ಅದು ಮುಖ್ಯ.

ಸದಾ ಹೋರಾಡಲು ಸಿದ್ಧನಿರು

85

ಹೋರಾಡು ಬೀಳ್ವನ್ನಮೊಬ್ಬೊಂಟಿಯಾದೊಡಂ ।
ಧೀರಪಥವನೆ ಬೆದಕು ಸಕಲಸಮಯದೊಳಂ ॥
ದೂರದಲಿ ಗೊಣಗುತ್ತ ಬಾಳ್ವ ಬಾಳ್ಗೇನು ಬೆಲೆ ? ।
ಹೋರಿ ಸತ್ತ್ವವ ಮೆರಸು – ಮಂಕುತಿಮ್ಮ ॥ (ಪದ್ಯ 573)

ಸಾಮಾನ್ಯವಾಗಿ ಜನರಾಗಲಿ ಯುವಕರಾಗಲಿ ಯಾವುದೇ ವಿಚಾರ ದಲ್ಲಿ ಮುನ್ನುಗ್ಗುವುದು ಅಪರೂಪ. ಹಿಂದೇಟು ಹಾಕುವುದು ಸಾಮಾನ್ಯ ಏಕೆಂದರೆ ನಮ್ಮಿಂದ ಈ ಕೆಲಸ ಆಗುತ್ತೋ ಇಲ್ಲವೋ ಎಂಬ ಅನುಮಾನ. ನಮಗೆ ಶಕ್ತಿ ಸಾಲದು ಎಂದು ಹಿಂಜರಿಕೆ; ಇದುವರೆಗೆ ನಮಗೆ ಈ ಕೆಲಸದಲ್ಲಿ ಜಯ ಸಿಕ್ಕಿಲ್ಲ ಎಂಬ ಕೊರಗು, ಹೀಗೆ ಹಲವಾರು ಕಾರಣ ಗಳಿಂದ ಯಾವುದೇ ಕೆಲಸಕ್ಕೆ ಮುನ್ನುಗ್ಗುವ ಸಾಹಸ ಪ್ರಯತ್ನ ಮಾಡುವು ದಿಲ್ಲ ಸಾಮಾನ್ಯವಾಗಿ, ಆದರೆ ಈ ರೀತಿ ಹಿಂದುಳಿಯುವುದರಿಂದ ನಾವು ಬೆಳೆಯುವುದಿಲ್ಲ; ಪ್ರಗತಿ ಸಾಧಿಸುವುದಿಲ್ಲ; ಜೀವನದಲ್ಲಿ ಯಶಸ್ಸು ಕಾಣುವು ದಿಲ್ಲ. ಆದ್ದರಿಂದ ಮನೋಭಾವವನ್ನು ಪ್ರಯತ್ನದ ರೀತಿಯನ್ನು ಬದಲಿಸಿ ಕೊಳ್ಳಬೇಕು. ಸೈನಿಕ ರಣರಂಗದಲ್ಲಿ ಸ್ವಾಮಿಭಕ್ತ. ಒಬ್ಬಂಟಿ ಆದರೂ ತಾನು ನೆಲಕ್ಕೆ ಬಿದ್ದು ಜೀವ ಹೋಗುವವರೆಗೂ ಹೋರಾಡುತ್ತಾನೆ. ಆ ಛಲ ನಮಗೆ ಬೇಕು. ಆ

ಧೈರ್ಯ, ಆ ಗಟ್ಟಿತನ, ಕೆಚ್ಚೆದೆ ಸದಾ ನಮ್ಮಲ್ಲಿ ಇರಲು ಧೈರ್ಯದಿಂದ ಮುನ್ನುಗುವುದು ಹೇಗೆ ಎಂಬುದನ್ನೆ ಸದಾ ಚಿಂತಿಸಬೇಕು. ಅದರಂತೆ ಪ್ರಯತ್ನಿಸಬೇಕು. ಅದನ್ನು ಬಿಟ್ಟು ಎಲ್ಲೋ ಕುಳಿತು, ಹಾಗಂತೆ ಹೀಗಂತೆ. ನನ್ನ ಕೈಲೇನಾಗುತ್ತೆ ಎಂದು ಗೋಳಿಡುತ್ತ ಶೋಕದಿಂದ ಗೊಣ ಗುತ್ತ ಜೀವಿಸುವುದರಿಂದ ಅಂಥವನು ಏನೇನನ್ನೂ ಜೀವನದಲ್ಲಿ ಸಾಧಿಸುವುದಿಲ್ಲ ನಿಷ್ಪ್ರಯೋಜಕ ವ್ಯಕ್ತಿ ಆಗುತ್ತಾನೆ. ಆದ್ದರಿಂದ ಯಾವುದೇ ವಿಷಯದಲ್ಲಾಗಲಿ ಧೈರ್ಯ ಮಾಡಿ ಉತ್ಸಾಹದಿಂದ, ಅವರು ಹೆದರಿಸುವ ಮಾತುಗಳಿಗೆ ಬೆಲೆಗೊಡದೆ ಮುನ್ನುಗ್ಗಿ ನಮ್ಮ ಶಕ್ತಿಸಾಮರ್ಥ್ಯವನ್ನು ಪ್ರದರ್ಶಿಸಬೇಕು (ಹೋರಿ ಸತ್ತ್ವವ ಮೆರಸು).

ಶಕ್ತಿ ಪ್ರದರ್ಶನಕ್ಕೆ ಮಿತಿ ಇರಲಿ

86

ಬೆಟ್ಟಕ್ಕೆ ಸನ್ನೆಹಾಕಿರುವ ಮಹದಾಶಿಗನೆ ।
ಗಟ್ಟಿಯೇ ? ಸೊಟ್ಟಾಗದೇ ಸನ್ನೆಗೋಲು ? ।
ರಟ್ಟೆಯೇ ಮುರಿದೀತು ಮೈಮರೆತ ಸಾಹಸದಿ ।
ಎಷ್ಟುಚಿತವೋ ನೋಡು–ಮಂಕುತಿಮ್ಮ ॥ (ಪದ್ಯ 578)

ಪ್ರತಿಯೊಬ್ಬರಿಗೂ ವಿಶಿಷ್ಟ ಶಕ್ತಿ ಇರುತ್ತದೆ. ಹಾಗೆಯೇ ಅದಕ್ಕೊಂದು ಮಿತಿಯೂ ಇರುತ್ತದೆ. ಶಕ್ತಿ ಇದೆ ಅಂತ ಹಾರೆಯಿಂದ ಬಂಡೆ ಎತ್ತುವಾಗ ಬೆಟ್ಟವನ್ನೇ ಎತ್ತುತ್ತೇನೆ ಎಂದರೆ ಸನ್ನೆಗೋಲೇ ಸೊಟ್ಟಾಗಿ ಬಾಗುತ್ತದೆ. ಅಷ್ಟೇ ಅಲ್ಲ ರೆಟ್ಟೆಯೂ ಮುರಿಯಬಹುದು. ಅತಿಯಾದ ಸಾಹಸದಿಂದ ಹಾಗಾಗಬಾರದು. ಶಕ್ತಿಯಿದ್ದಷ್ಟು ಶ್ರಮಿಸಬೇಕು. ಶಕ್ತಿಮೀರಿ ಕಿಂಚಿತ್ತೂ ಬಯಸಬಾರದು. ಇದು ಅವರವರೇ ತಿಳಿದುಕೊಂಡಿರಬೇಕಾದ ವಿವರವಾಗಿದೆ.

ಆದರೆ ಅನೇಕರು ತಮ್ಮ ಶಕ್ತಿಮಿರಿ ಸಾಹಸಕ್ಕೆ ಕೈಹಾಕುತ್ತಾರೆ. ಅದು ಸರಿಯಲ್ಲ. ಯಾವುದೇ ಸಾಹಸಕ್ಕೆ ಕೈಹಾಕುವ ಮುನ್ನ ಸಾಕಷ್ಟು ಆತ್ಮ ಪರೀಕ್ಷೆ ಮಾಡಿಕೊಳ್ಳಬೇಕು ನಾನು ಮಾಡುವ ಸಾಹಸ ಎಂಥದ್ದು ಅದಕ್ಕೆ ನನ್ನಲ್ಲಿ ಇರುವ ಶಕ್ತಿ ಎಷ್ಟು ಎಂದು ತಿಳಿಯಬೇಕು. ಇಲ್ಲದಿದ್ದಲ್ಲಿ ಅನರ್ಥ ಕಟ್ಟಿಟ್ಟಬುತ್ತಿ. ಸಾಹಸ ಮನೋಭಾವ ಉತ್ಸಾಹ ಯುವಕರಲ್ಲಿ ಇರಬೇಕು ಆದರೆ ಅದಕ್ಕೆ ಮಿತಿ ಇರಬೇಕು. ಆತ್ಮ ವಿವೇಚನೆ ಇರಬೇಕು.

ಸತತ ಪ್ರಯತ್ನ ಗುರಿಯಾಗಿರಲಿ

87

ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು ।
ಪಟ್ಟುವರಸೆಗಳೆಲ್ಲ ವಿಫಲವೆನ್ನುವೆಯೇಂ? ॥
ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣ ಗಟ್ಟಿ ।
ಗಟ್ಟಿತನ ಗರಡಿ ಫಲ–ಮಂಕುತಿಮ್ಮ ॥ (ಪದ್ಯ 588)

ಜೀವನದಲ್ಲಿ ಸೋಲುಗೆಲುವುಗಳು ಮುಖ್ಯವಲ್ಲ, ಸಾಧನೆಯಿಂದ ಗಳಿಸಿರುವುದು ಮುಖ್ಯ. ಜಟ್ಟಿಯೊಬ್ಬ ಕುಸ್ತಿಸ್ಪರ್ಧೆಯಲ್ಲಿ ಸೋತಮಾತ್ರಕ್ಕೆ ಅವನ ದೇಹಧಾರ್ಢ್ಯ, ಗರಡಿಯ ಸಾಮು, ಕಲಿತ ಪಟ್ಟುಗಳು ವರಸೆಗಳೆಲ್ಲ ವ್ಯರ್ಥವಾಗುವುದಿಲ್ಲ. ಇನ್ನೊಮ್ಮೆ ಕುಸ್ತಿಯಲ್ಲಿ ಗೆದ್ದರೆ ಆ ಸಾಮು ಸಾಧನೆ ಸರಿ ಎಂದರ್ಥವೇ? ಹಾಗಲ್ಲ, ನಿರಂತರ ಅಭ್ಯಾಸದಿಂದ ಅವನು ಗಳಿಸಿದ ಉಕ್ಕಿನಮೈ ಗಟ್ಟಿತನವೇ ಅವನಿಗೆ ಸಾರ್ಥಕತೆ ತಂದುಕೊಡುವುದು. ಹೇಗೆ ಉಕ್ಕಿನ ಮೈಕಟ್ಟು ಸಾಧನೆಗೆ ಸಾಕ್ಷಿಯೋ ಹಾಗೆಯೇ ನಮ್ಮ ದೃಢಸಾಧನೆ ಬಾಳಿಗೆ ಸಾಕ್ಷಿ. ಆದಕಾರಣ ನಾವೆಂದೂ ಸೋಲಿಗೆ ಕುಗ್ಗಬಾರದು. ಗೆಲುವಿಗೆ ಹಿಗ್ಗಬಾರದು. ನಮ್ಮ ಸಾಮರ್ಥ್ಯದಲ್ಲಿ ನಮಗೆ ನಂಬಿಕೆ ಇರಬೇಕು. ನಾವು ಮಾಡುವ ಪ್ರಯತ್ನಗಳಿಂದ ಉಂಟಾಗುವ ಸೋಲು-ಗೆಲುವುಗಳಿಗಿಂತ ಅವುಗಳ ಅನುಭವದಿಂದ ಕಲಿತಪಾಠ ಗಳಿಸಿದ ಶಕ್ತಿಸಾಮರ್ಥ್ಯ ಮುಖ್ಯ.

ಎಂದೂ ಧೈರ್ಯಗೆಡಬಾರದು

88

ಸತ್ತೆನೆಂದೆನಬೇಡ ; ಸೋತೆನೆಂದೆನಬೇಡ ।
ಬತ್ತಿತೆನ್ನೊಳು ಸತ್ತ್ವದೂಟೆಯೆನಬೇಡ ॥
ಮೃತ್ಯುವೆನ್ನುವುದೊಂದು ತೆರೆಯಿಳಿತ ; ತೆರೆಯೇರು ।
ಮತ್ತೆ ತೋರ್ಪುದು ನಾಳೆ–ಮಂಕುತಿಮ್ಮ ॥ (ಪದ್ಯ 593)

ಜೀವನದಲ್ಲಿ ನಿರಾಸೆ ಬರಬಾರದು; ಖಿನ್ನತೆ ಉಂಟಾಗ ಬಾರದು. ಧೈರ್ಯ ಕಳೆದುಕೊಂಡು ನನ್ನ ಜೀವ ಹೋಯಿತು, ನಾನು ಸೋತು ಹೋದೆ ಎಂದು ಕೊರಗಬಾರದು. ಸಾವು ಎಂಬುದು ಸಮುದ್ರದಲ್ಲಿ ಅಲೆ ಗಳು ಮೇಲೇಳುವಂತೆಯೇ ಕೆಳಗಿಳಿ ಯುತ್ತವೆ. ಮತ್ತೆ ಮೇಲೇಳುತ್ತವೆ. ಹಾಗೆಯೇ ಸೋಲು ಗೆಲುವುಗಳು ಆಸೆ–ನಿರಾಸೆಗಳುಬಂದು ಹೋಗುತ್ತವೆ ಎಂದು ತಿಳಿಯಬೇಕು. ಕಂಗೆಡಬಾರದು. ಸೋಲಿನಲ್ಲಿ ಧೈರ್ಯ ತಂದು ಕೊಳ್ಳಬೇಕು. ಇದು ಬದುಕುವ ದಾರಿ. ಜೀವನದಲ್ಲಿ ಗೆಲ್ಲುವಾಗ ಆಶಾ ಭಾವವೇ ಬಾಳಿಗಾಧಾರ. ಸೋಲು–ಗೆಲುವುಗಳನ್ನು ಸಮಾನವಾಗಿ ಪರಿ ಗಣಿಸಬೇಕು ಯಾವುದಕ್ಕೂ ಹೆದರಬಾರದು ಧೈರ್ಯದಿಂದ ಕಷ್ಟಗಳನ್ನು ಎದುರಿಸಬೇಕು ಎಂಬುದು ಗೀತೆಯ ಸಂದೇಶವೂ ಹೌದು.

ಗೀತೆ ಹೇಳುತ್ತದೆ: ಏಳು ಎದ್ದೇಳು ಪ್ರಯತ್ನಿಸು–ಹೋರಾಡು

ಮುಂದೆ ಸಾಗು. ಗುರಿಮುಟ್ಟುವವರೆಗೆ ನಿಲ್ಲಬೇಡ. ಪ್ರಯತ್ನ ಹೋರಾಟ ನಿಲ್ಲಿಸಬೇಡ. ಇದು ಜೀವನ ಧ್ಯೇಯವಾಗಿರಲಿ ವಿದ್ಯಾರ್ಥಿಗಳಿಗೆ.

ಪರಿಶುದ್ಧ ಮನವೆ ವರ

89

ಗರಡಿ ಸಾಮಿಂದೆ ನೀನೆದುರಾಳ ಗೆಲದೊಡೇಂ ।
ಬರದಿಹುದೆ ನಿನಗನಿತು ಕಾಯಾಂಗಪಟುತೆ ? ॥
ವರ ಸದ್ಯಕ್ಕಿಲ್ಲದೊಡೆ ಬರಿದಾಗುವುದೆ ಪೂಜೆ ? ।
ಪರಿಶುದ್ಧ ಮನವೆ ವರ–ಮಂಕುತಿಮ್ಮ ॥ (ಪದ್ಯ 596)

ನಾವು ಏನೇ ಕೆಲಸಮಾಡಿದರೂ ಅವುಗಳಲ್ಲಿ ಸೋಲು ಗೆಲುವು ಮುಖ್ಯವಲ್ಲ ಅದರಿಂದ ನಮಗೇನು ದಕ್ಕಿತು ಎಂಬುದು ಮುಖ್ಯ. ಅದರ ಕಡೆ ನಮ್ಮಗಮನ ಇರಬೇಕು. ಕ್ರಿಕೆಟ್ ಫುಟ್ಬಾಲ್ ಹಾಕಿ ಯಾವುದೇ ಆಟ ಆಡಿದಾಗ ಆಡಿದ ಸಂತೋಷವೇ ಮುಖ್ಯಲಾಭ ಅದರಲ್ಲಿ ಸೋತನೇ ಗೆದ್ದನೇ ಎಂಬುದು ಮುಖ್ಯವಲ್ಲ ಇದನ್ನೇ ಕ್ರೀಡಾಮನೋಭಾವ ಎನ್ನುತ್ತಾರೆ.

ಗರಡಿಮನೆಗೆ ಸೇರಿ ಅಂಗಸಾಧನೆ ಮಾಡಿ ಜಟ್ಟಿಗಳಾಗಿ ಕುಸ್ತಿಪಂದ್ಯದಲ್ಲಿ ಭಾಗವಹಿಸುತ್ತಾರೆ. ಕುಸ್ತಿಸ್ಪರ್ಧೆಯಲ್ಲಿ ಒಬ್ಬರು ಗೆಲ್ಲುತ್ತಾರೆ. ಇನ್ನೊಬ್ಬರು ಸೋಲುತ್ತಾರೆ. ಗೆದ್ದಮಾತ್ರಕ್ಕೆ ದೇಹಬಲ ಹೆಚ್ಚುವುದಿಲ್ಲ ಸೋತಮಾತ್ರಕ್ಕೆ ದೇಹಬಲ ಜಗ್ಗುವುದಿಲ್ಲ ಕುಸ್ತಿಪಂದ್ಯದಿಂದ ನಮಗೆ ಬರುವ ಅನುಭವ ಕೌಶಲ, ಕಾರ್ಯಕೌಶಲ್ಯ ಮುಖ್ಯ. ಅದೇ ನಿಜವಾದ ಗೆಲುವು. ಅದನ್ನು

ಮೆಚ್ಚಬೇಕು. ಹಾಗೆಯೇ ದೇವರನ್ನು ವರಬಯಸಿ ಪೂಜೆಧ್ಯಾನಮಾಡಿದರೆ ತಕ್ಷಣದಲ್ಲಿ ನಿಧಾನವಾಗಿಯಾಗಿಲಿ ಪ್ರತಿಫಲ ಸಿಗಬಹುದು, ಸಿಗದಿರಬಹುದು. ಅದು ಮುಖ್ಯವಲ್ಲ. ಪೂಜೆ ಧ್ಯಾನಗಳಿರುವ ನಮಗೆ ಸಿಗುವ ಮನಶ್ಯಾಂತಿ, ಆನಂದ ತೃಪ್ತಿ ಮನಸ್ಸು ತಿಳಿಯಾಗುವುದು (ಪರಿಶುದ್ಧ ಮನ) ಇವೇ ನಿಜವಾದ ಲಾಭ ಆದ್ದರಿಂದ ಯಾವುದೇ ಕೆಲಸ ಮಾಡಿದರೂ ಅದರಿಂದಾದ ಲಾಭವನ್ನು ಸೋಲು ಗೆಲುವುಗಳಿಂದ ಲಾಭಗಳಿಂದ ಅಳೆಯಬೇಕಿಲ್ಲ ನಮ್ಮ ಸಾಧನೆಗೆ ಸಿಕ್ಕ ಶಕ್ತಿಸಾಮರ್ಥ್ಯಗಳೇನು ಸಂತೃಪ್ತಿ ಸಂತೋಷಗಳೇನು ಎಂಬುದನ್ನು ಗಮನಿಸಬೇಕು. ಸ್ಪರ್ಧೆಗಳಲ್ಲಿ ಬಹುಮಾನ ಬರದೆ ಇದ್ದರೂ ಜನಮೆಚ್ಚಿದರೆ ನಮಗೆ ತೃಪ್ತಿಇದ್ದರೆ ಅದೇ ನಿಜವಾದ ಲಾಭ.

ದಿಟ್ಟತನವೇ ಸಕಲಕ್ಕೂ ದಾರಿ

90

ಬದುಕೊಂದು ಕದನವೆಂದಂಜಿ ಬಿಟ್ಟೋಡುವನು ।
ಬಿದಿಯ ಬಾಯಿಗೆ ಕವಳವಾಗದುಳಿಯುವನೆ ? ॥
ಎದೆಯನುಕ್ಕಾಗಿಸುತ, ಮತಿಗದೆಯ ಪಿಡಿದು, ನೀ –।
ನೆದುರು ನಿಲೆ ಬಿದಿಯೊಲಿವ–ಮಂಕುತಿಮ್ಮ ॥ (ಪದ್ಯ 598)

ಜೀವನದಲ್ಲಿ ಯಾವುದೇ ಸಂದರ್ಭದಲ್ಲೂ ಎಷ್ಟೇ ಕಷ್ಟ ಬರಲಿ, ದುಃಖ ಬರಲಿ, ನಷ್ಟ ಆಗಲಿ, ನೋವುಂಟಾಗಲಿ ನಾವು ಕಂಗೆಡಬಾರದು. ನಮ್ಮಪ್ರಯತ್ನ ಮಾಡುವುದನ್ನು ಬಿಡಬಾರದು. ಯುದ್ಧರಂಗದಲ್ಲಿ ಶತ್ರುಗಳಿಗೆ ಹೆದರಿಕೊಂಡು ಓಡಿಹೋಗುವ ಅಂಜುಬುರುಕ ಸೈನಿಕನಂತೆ ಆಗಬಾರದು. ಜೀವನವೂ ಒಂದು ಯುದ್ಧಭೂಮಿಇದ್ದಂತೆ. ಯುದ್ಧರಂಗಬಿಟ್ಟು ಓಡಿ ಹೋದ ಮಾತ್ರಕ್ಕೆ ಸೈನಿಕ ಸಾಯದೇ ಇರುತ್ತಾನೆಯೇ ಹೇಡಿಸೈನಿಕನಾಗಿ ಓಡಿಹೋಗುವ ಬದಲು ಹೋರಾಡಿಸತ್ತು ವೀರಸ್ವರ್ಗಸೇರುವ ಧೀರನಾಗು ವುದು ಮೇಲು. ಸಾವು ಎಲ್ಲಿದ್ದರೂ ಯಾರನ್ನು ಬಿಡದು. ಇನ್ನು ಅಂಜು ಬುರುಕನನ್ನು ಬಿಡುತ್ತದೆಯೇ ಮೊದಲು ನುಂಗುತ್ತದೆ. ಆದ್ದರಿಂದ ಜೀವನದಲ್ಲಿ ಏನೇ ಅಪಾಯ ಕಷ್ಟ ತೊಂದರೆಗಳು ಬಂದರೂ ಎದೆಯನ್ನು ಗಟ್ಟಿಮಾಡಿಕೊಂಡು ಎಂದರೆ ಉಕ್ಕಿನಂತೆ ಗಟ್ಟಿ ಮನಸ್ಸು

ಮಾಡಿ (ಎದೆಯ ನುಕ್ಕಾಗಿಸುತ) ತನ್ನ ಬುದ್ಧಿಯ ಚುರುಕುತನವೆಂಬ ಗದೆಯನ್ನು ಹಿಡಿದು ಎದುರಿಗೆ ಇರುವ ಶತ್ರುವಿನೊಂದಿಗೆ (ನಮ್ಮ ಸಮಸ್ಯೆಗಳೊಡನೆ) ಹೋರಾಡ ಬೇಕು. ಆಗ ಅದೃಷ್ಟದೇವತೆ (ವಿಧಿ) ನಮಗೆ ಒಲಿಯುತ್ತಾಳೆ ಎಂದರೆ ದೈವಾನುಗ್ರಹದೊರಕುತ್ತದೆ. ಧೈರ್ಯಶಾಲಿಗೆ ಎಂದೆಂದೂ ಜಯ ಕಟ್ಟಿಟ್ಟಬುತ್ತಿ. ಆದಕಾರಣ ಯಾವಾಗಲೂ ಏನೇ ಕಷ್ಟವಾದರೂ ಹಿಂಜರಿಯ ಬಾರದು. ಧೈರ್ಯದಿಂದ ಎದುರಿಸಬೇಕು ವೀರಯೋಧನಂತೆ ಸೆಣಸಬೇಕು. ಆಗ ಅದೃಷ್ಟ ನಮಗೊಲಿಯುತ್ತದೆ. (ಎದುರುನಿಲೆ ಬಿದಿಯೊಲಿವ)

ನಿಶ್ಚಿಂತೆಯಿಂದ ಬಾಳಿ

91

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ ।
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ॥
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು ।
ಪದ ಕುಸಿಯೆ ನೆಲವಿಹುದು–ಮಂಕುತಿಮ್ಮ ॥ (ಪದ್ಯ 600)

ನಮ್ಮ ಬದುಕನ್ನು ಸಾಹಿತಿಗಳು ಕವಿಗಳು ವಿದ್ವಾಂಸರು ಕನಸಿಗೆ, ಸಾಗರಕ್ಕೆ, ಬೆಟ್ಟಕ್ಕೆ, ರೈಲಿಗೆ ಮಂಜಿಗೆ, ನೀರ್ಗಲ್ಲಿಗೆ ಹೀಗೆ ನಾನಾ ವಿಧವಾದ ವಸ್ತುಗಳಿಗೆ ಹೋಲಿಸಿದ್ದಾರೆ ವಿವರಿಸಿದ್ದಾರೆ. ಆದರೆ ಡಿವಿಜಿ ಅವರು ತಮ್ಮ ಕಾಲದ ಸಾರಿಗೆವಾಹನವಾದ ಜಟಕಾಬಂಡಿಗೆ ಹೋಲಿಸಿದ್ದಾರೆ. ಜಟಕಾ ಬಂಡಿ ಎಂದರೆ ಕುದುರೆಗಾಡಿ ಬಡವರ ಗಾಡಿ ಶ್ರೀಮಂತರ ಗಾಡಿಯನ್ನು ಸಾರೋಟು ಎನ್ನುತ್ತಾರೆ. ಬಡವರಗಾಡಿ ಜಟಕಾಬಂಡಿ, ಜಟಕಾಬಂಡಿಗೆ ಮಾಲೀಕ ಇರುತ್ತಾನೆ ಹಾಗೆಯೇ ನಮ್ಮ ಬಾಳೆಂಬ ಜಟಕಾಬಂಡಿಗೆ ವಿಧಿ, ಅದೃಷ್ಟ, ಕಾಣದ ಶಕ್ತಿ ಸಾಹೇಬ, ಒಡೆಯ. ಗಾಡಿಯನ್ನು ಪ್ರಯಾಣಕ್ಕೆ ಗೊತ್ತುಮಾಡುವನು ಹೇಳಿದ ಕಡೆಗೆ ಅವನು ಗಾಡಿ ಓಡಿಸುತ್ತಾನೆ. ಹಾಗೇ ವಿಧಿ ಬಯಸಿದಂತೆ ನಾವು ಸಾಗುತ್ತೇವೆ. ಪ್ರಯಾಣಿಕರು ಜಟಕಾಸಾಬಿಗೆ ಮದುವೆ ಮನೆಗೆ

ಹೋಗು, ಹರಿಶ್ಚಂದ್ರ ಘಾಟಿಗೆ ಹೋಗು ಎಂದು ಎಲ್ಲಿಗೆ ಹೇಳಿದರೆ ಅಲ್ಲಿಗೆ ಗಾಡಿ ಓಡಿಸುತ್ತಾನೆ. ಹಾಗೆಯೇ ವಿಧಿ ನಮ್ಮನ್ನು ಎಲ್ಲಿಗೆ ಕರೆದೊಯ್ದರೆ ಅಲ್ಲಿಗೆ ಅರಮನೆಗೆ, ಸೆರೆಮನೆಗೆ, ಸಂತೋಷದ ಎಡೆಗೆ, ದುಃಖದ ಕಡೆಗೆ, ಎಲ್ಲಿಗೆ ಬಯ್ದರೆ ಅಲ್ಲಿಗೆ ಹೋಗುತ್ತೇವೆ; ಓಡುವಾಗ, ಓಡಲಾರದೆ ಕುದುರೆ ಕಾಲುಕುಸಿದರೆ, ಸುಸ್ತಾದರೆ ಕುದುರೆ ನೆಲದಮೇಲೆ ಕುಳಿತುಬಿಡುತ್ತದೆ; ಮುಂದಕ್ಕೆ ಚಲಿಸದು. (ಪದಕುಸಿಯೆ ನೆಲವಿಹುದು;) ಹಾಗೆಯೇ ಜೀವನದಲ್ಲಿ ಕುಗ್ಗಿದರೆ ಬಳಲಿದರೆ ದಣಿದರೆ ಶಕ್ತಿಹೀನರಾದರೆ ನಮ್ಮ ಬದುಕಿನ ಓಟ ನಿಂತಾಗ ನಾವು ಮಣ್ಣು ಸೇರುತ್ತೇವೆ. ಇದು ಎಲ್ಲರ ಜೀವನದ ಕಥೆ.

ನಮ್ಮ ಕೆಲಸ ಅಚ್ಚುಕಟ್ಟಾಗಿರಲಿ

92

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು ।
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ॥
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ ।
ಹೊರಡು ಕರೆ ಬರಲ್ ಅಳದೆ – ಮಂಕುತಿಮ್ಮ । (ಪದ್ಯ 601)

ನಾವು ಈ ಲೋಕದಲ್ಲಿ ಹೇಗೆ ಬದುಕಿಬಾಳಬೇಕು? ಈ ಪ್ರಶ್ನೆಗೆ ಉತ್ತರ ಇಲ್ಲಿದೆ. ನಮ್ಮ ಜೀವನದಲ್ಲಿ ನಾವು ಮಾಡಬೇಕಾದ ಕೆಲಸ, ಕಾರ್ಯಗಳು, ಕರ್ತವ್ಯಗಳು ಚಿಕ್ಕದಿರಲಿ, ದೊಡ್ಡದಿರಲಿ ಮಹತ್ವದ್ದು ಆಗಿರಲಿ ಸಾಮಾನ್ಯವಾದುದು ಆಗಿರಲಿ, ಯಾವ ರೀತಿ ಕೆಲಸವನ್ನಾಗಲಿ ಕೀಳೆನ್ನದೆ ಮೇಲೆನ್ನದೆ ಅದು ಮುಖ್ಯ ಇದು ಮುಖ್ಯವಲ್ಲ ಎನ್ನದೆ ಸಮಾನಾಸಕ್ತಿಯಿಂದ ಎಲ್ಲ ಕೆಲಸಗಳನ್ನು ಸಮಾನ ಪ್ರಾಶಸ್ತ್ಯದಿಂದ ಅನುಭವಿಸಬೇಕು ಅದರ ಬಗ್ಗೆ ಹಾಗಾಯಿತು ಹೀಗಾಯಿತು ಎಂದು ಗೊಣಗಬಾರದು ಪ್ರತಿಯೊಂದೂ ಕೆಲಸವೂ ಚಿಕ್ಕದು ದೊಡ್ಡದು ಯಾವುದೇ ಇರಲಿ ಅದು ದೇವರು ನಮಗೆ ಕೊಟ್ಟ ವರ. ಅದನ್ನು ನೆರವೇರಿಸುವ ಕರ್ತವ್ಯ ನಮ್ಮದು ಎಂದು ತಿಳಿಯಬೇಕು. ಹಾಗೇ ಮಾಡುವಾಗ ಕೃಷ್ಣಾರ್ಪಣಮಸ್ತು, ಭಗವಂತನಸೇವೆ ಎಂಬ ಭಾವದಲ್ಲಿ

ಪರಮಾರ್ಥದೃಷ್ಟಿಯಿಂದ ಕೆಲಸ ಮಾಡಬೇಕು; ಹೀಗೆ ಈ ಲೋಕದಲ್ಲಿ ನಾವು ಜೀವಿಸಿರುವವರೆಗೆ ನಮ್ಮ ಪಾಲಿನ ಕೆಲಸಕಾರ್ಯಗಳನ್ನು ದೇವರು ಮೆಚ್ಚುವ ಹಾಗೆ ಮಾಡುವುದನ್ನು ಕಲಿಯಬೇಕು. ನಮ್ಮ ಆಯುಷ್ಯ ತೀರಿದಮೇಲೆ (ಕರೆಬರಲ್) ದುಃಖಪಡದೆ, ಗೋಳಾಡದೆ ಪ್ರಾಣಬಿಡಬೇಕು. (ಹೊರಡು ಕರೆ ಬರಲ್ ಅಳದೆ) ಅದು ದೈವೇಚ್ಛೆ ಎಂದು ತಿಳಿಯಬೇಕು ಪಾಲಿಗೆ ಬಂದುದ್ದು ಪಂಚಾಮೃತವೆಂದು ನಮ್ಮ ಕರ್ತವ್ಯ ಮಾಡಿದರೆ ಬಾಳಿನಲ್ಲಿ ನಾವು ಸುಖಿಗಳಾಗುತ್ತೇವೆ. ಇದೇ ದೇವರು ಮೆಚ್ಚುವ ಕೆಲಸ.

ಬಾಳು ತಿಳಿಯಾಗಿ ಇರಲಿ

93

ಕುಸುಮಸಖನೇಂ ನೀನು? ಹಿಸುಕದೆಯೆ ಮೂಸದನು ।
ಹಿಸುಕೆ ಕಟುಕಂಪು; ನರಲೋಕವದರವೊಲೇ ॥
ಗಸಿಯ ಕುಲಕದೆ ಕೊಳದ ಮೇಲ್ತಿಳಿಯ ಕುಡಿದು ನಡೆ ।
ಹಸನು ಹಗುರದ ಬಾಳು–ಮಂಕುತಿಮ್ಮ ॥ (ಪದ್ಯ 626)

ಲೋಕದಲ್ಲಿ ತಿಳಿಯಾದ ಬಾಳನ್ನು ನಡೆಸಬೇಕು. ಹಗುರಜೀವನ ನಡೆಸಬೇಕು; ಸರಳನಡೆ, ನೇರನುಡಿ ಇರಬೇಕು: ಇದು ಸಜ್ಜನರ ಬದುಕಿನ ದಾರಿ. ಹೂವನ್ನು ಪ್ರೀತಿಸುವವರು ಅದನ್ನು ಆಘ್ರಾಣಿಸುವರು ಅಷ್ಟೆ. ಅದನ್ನು ಹಿಸುಕಿನೋಡಿ ಆನಂದಿಸುವುದಿಲ್ಲ. ಹಾಗೆಯೇ ಕೊಳದ ನೀರನ್ನು ಕುಡಿಯುವರು. ನೀರನ್ನು ಕದಡುವುದಿಲ್ಲ. ರಾಡಿ ಮಾಡುವುದಿಲ್ಲ (ಗಸಿಯಕುಲಕದೆ) ಮೇಲಿನ ತಿಳಿ ಕುಡಿಯುತ್ತಾರೆ. ಹಾಗೆ ಜೀವನದಲ್ಲಿ ಕೆದಕಿಬೆದಕಿ ಇಲ್ಲದಸಲ್ಲದ ದೋಷಗಳನ್ನು ಎತ್ತಿಹಾಕಬಾರದು ಬಾಳನ್ನು ಕದಡಿದಕೊಳ ಮಾಡಬಾರದು. ಹೀಗೆ ತೆಳುಬಾಳು–ತಿಳಿಬಾಳು ನಡೆಸಿದರೆ ಆಗ ಗೊಂದಲವಿಲ್ಲದ ಜೀವನ ನಡೆಸಬಹುದು (ಹಸನು ಹಗುರದ ಬಾಳು). ನಾವು ಬದುಕಿನಲ್ಲಿ ನಡೆದುಕೊಳ್ಳುವ ರೀತಿಯನ್ನು ಡಿವಿಜಿ ವಿವರಿಸಿರುವ ಬಗೆ ಇದು.

ಸ್ಥೈರಣೆ ಬಾಳಿಗೆ ಬೇಕು

94

ಗುದ್ದಲಿಯಿನಾದೀತೆ ಮಲೆ ಕಣಿವೆ ಸಮದ ನೆಲ? ।
ಮದ್ದು ತಡೆವುದೆ ಮುಪ್ಪು ಕಳ್ಳನವೊಲಮರೆ? ॥
ಯುದ್ಧತಾಪದೆ ಶಾಂತಿಶೀತಲತೆಯುದಿಸೀತೆ?।
ಸಿದ್ಧವಿರು ಸ್ಥೈರಣೆಗೆ–ಮಂಕುತಿಮ್ಮ ॥ (ಪದ್ಯ 635)

ಬಾಳಿನಲ್ಲಿ ಕಷ್ಟಗಳು ಆಪತ್ತುಗಳು ಬಂದಾಗ ತಾಳಿಕೊಳ್ಳುವ ಗುಣ, ಧೈರ್ಯ, ಸಹನೆಗಳಿರಬೇಕು. ತಾಳಿದವನು ಬಾಳಿಯಾನು. ಕೈಲಾಗದ ಸಂಗತಿಗೆ ಚಿಂತಿಸುವುದಿಲ್ಲ. ಬೆಟ್ಟ, ಗುಡ್ಡಗಳನ್ನು ಗುದ್ದಲಿಯಿಂದ ಸಮ ಮಾಡಲಾಗದು. ಮುಪ್ಪು ಬಂದಾಗ ಅದನ್ನು ತಪ್ಪಿಸಲು ಔಷಧಿ ಇರುವು ದಿಲ್ಲ. ಅದು ಅನಿವಾರ್ಯ. ಯುದ್ಧದ ಬೇಗೆಯಲ್ಲಿ ಸಮಾಧಾನದ. ಶಾಂತಿಯ ತಂಗಾಳಿ ಬೀಸಲು ಸಾಧ್ಯವೇ? ಇಲ್ಲ. ಬಂದದ್ದೆಲ್ಲಾ ಬರಲಿ, 'ಗೋವಿಂದನ ದಯವಿರಲಿ' ಎಂದು ತಾಳಿಕೊಂಡು ಬಾಳುವಗುಣ ಇರಬೇಕು (ಸಿದ್ಧವಿರು ಸ್ಥೈರಣೆಗೆ)

ಕೀರ್ತಿಮೋಹ ಬೇಡ

95

ಅಕ್ಕಿಯೊಳಗನ್ನವನು ಮೊದಲಾರು ಕಂಡವನು? ।
ಅಕ್ಕರದ ಬರಹಕ್ಕೆ ಮೊದಲಿಗನದಾರು? ॥
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ ।
ದಕ್ಕುವುದೆ ನಿನಗೆ ಜಸ?–ಮಂಕುತಿಮ್ಮ ॥ (ಪದ್ಯ 655)

ನಾ ಮಾಡಿದೆ, ಈ ರೀತಿ ಸಾಧನೆ ಮಾಡಿದವನು ನಾನೇ ಮೊದಲಿಗ ಎಂದೆಲ್ಲಾ ಲೋಕದಲ್ಲಿ ಅನೇಕರು ಹಾರಾಡುತ್ತಾರೆ. ಆದರೆ ಇದು ಸರಿಯಲ್ಲ. ನಿಜವಾಗಿ ಲೋಕದಲ್ಲಿ ಮೊದಲು ಸಾಧನೆ ಮಾಡಿದವರ ಪರಿಚಯ ಜನಕ್ಕೆ ಇದೆಯೆ? ಅಕ್ಕಿಯಿಂದ ಅನ್ನ ಮಾಡುವ ಕಲೆಯನ್ನು ಕಂಡುಹಿಡಿದವರಾರು? ಹೀಗೆ ಬದುಕಲು ಬೇಕಾದ ಆಹಾರ ವನ್ನು, ಜ್ಞಾನಕ್ಕೆ ಆಧಾರವಾದ ಅಕ್ಷರವಿದ್ಯೆಯನ್ನು ಕಂಡುಹಿಡಿದವರು ಯಾರು? ಇಂಥ ಪೂರ್ವಿಕರ ಮಾಡಿರುವ ಮಹತ್ವಸಾಧನೆಗಳನ್ನೇ ಲೋಕ ಗಮನಿಸಿಲ್ಲ. ಇನ್ನು ನಮ್ಮ ಸಾಧನೆಯನ್ನು ಲೋಕ ಗುರುತಿ ಸುವುದೇ? ಇಲ್ಲ. ಅವರಿಗೆ ಸಿಗದ ಕೀರ್ತಿ ಯಶಸ್ಸು ನಿಮಗೆ ಸಿಗುವುದೆ (ದಕ್ಕುವುದೆ ನಿನಗೆ ಜಸ) ಆದ್ದರಿಂದ ಕೀರ್ತಿ ವ್ಯಾಮೋಹ ಬಿಡಬೇಕು. ಸಾಧನೆ ಮಾಡುವ ಕಡೆ ಗಮನವಿಡಬೇಕು.

ಸ್ವಪ್ರಚಾರ ಸಲ್ಲದು

96

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ ।
ಫಲ ಮಾಗುವಂದು ತುತ್ತೂರಿ ದನಿಯಿಲ್ಲ ॥
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ ।
ಹೊಲಿ ನಿನ್ನ ತುಟಿಗಳನು–ಮಂಕುತಿಮ್ಮ ॥ (ಪದ್ಯ 661)

ನಾವೇನು ಸಾಧನೆ ಮಾಡಿದರೂ ನಮಗಿಂತ ಹೆಚ್ಚಿನ ಸಾಧನೆ ಮಾಡಿದವರು ಇದ್ದಾರೆ. ಅವರಾರು ತಮ್ಮ ಸಾಧನೆಗಳನ್ನು ಹೇಳಿ ಕೊಂಡಿದ್ದಿಲ್ಲ. ಸ್ವಪ್ರಶಂಸೇ ಎಂದಿಗೂ ಸಲ್ಲದು. ಭೂಮಿಯಲ್ಲಿ ಪ್ರತಿ ದಿನವೂ ಎಷ್ಟೊಂದು ಸಾರವತ್ತಾದ ಗಿಡಸಸಿಗಳು ಚಿಗುರಿ ಮೊಳಕೆ ಒಡೆಯುತ್ತವೆ. ಅವುಗಳು ಚಿಗುರಿದವು ಎಂದು ತಮಟೆ ಬಡಿದು ಸಾರುತ್ತಾರೆಯೇ? ಮರಗಳಲ್ಲಿ ಹಣ್ಣುಗಳು ಬಿಟ್ಟಿದ್ದನ್ನು ತುತ್ತೂರಿ ಊದಿ ಸಾರಿದವರು ಯಾರು? ಲೋಕಕ್ಕೆ ಆಧಾರವಾಗಿರುವ ಬೆಳಕುಕೊಡುವ ಸೂರ್ಯ ಚಂದ್ರರು ಸದ್ದಿಲ್ಲದೆ ಬೆಳಗುತ್ತಾರೆ. ಹೀಗಿರುವಾಗ ನಿನ್ನದೇನು ಮಹಾ ಸಾಧನೆ? ಮೌನವಾಗಿರುವುದನ್ನು ಕಲಿ (ಹೊಲಿನಿನ್ನ ತುಟಿಗಳನ್ನು) ಪ್ರಶಂಸೆಗಾಸೆಪಡಬೇಡ ಎಂದು ಡಿವಿಜಿ ಅವರು ಎಚ್ಚರಿಸಿದ್ದಾರೆ. ನಮ್ಮ ಸಾಧನೆಗಳಷ್ಟೆ ಸಾಧನೆಗಳಲ್ಲ ನಮ್ಮ ಸಾಧನೆಗಳನ್ನು ಮೀರಿದ ಸಾಧನೆಗಳು ಲೋಕದಲ್ಲಿ ಇವೆ ಅವುಗಳನ್ನು ಕೇಳಿದವರಾರೂ ಇಲ್ಲ ಆದ್ದರಿಂದ ನೀನು ಬಾಯಿ ಮುಚ್ಚಿಕೊ (ಹೊಲಿ ನಿನ್ನು ತುಟಿಗಳನ್ನು) ಎಂದಿದ್ದಾರೆ.

ಶ್ರಮಜೀವಿಗಳು ಕರ್ಮಯೋಗಿಗಳು

97

ಬಡಗಿ ಬೇಸಾಯಿ ಕರ್ಮಿಗರೇನು ಯೋಗಿಗಳೊ ! ।
ಮುಡುಪವರ ಮನಸೆಲ್ಲ ಕೈಯ ದುಡಿತಕ್ಕೆ ॥
ಬಿಡುವಿರದು ಬಣಗು ಚಿಂತೆಗೆ, ಬುತ್ತಿ ಹಂಗಿರದು ।
ಕಡಿದಲ್ಲವರ್ಗೆ ಬಾಳ್–ಮಂಕುತಿಮ್ಮ ॥ (ಪದ್ಯ 668)

ಮರಗೆಲಸದ ಬಡಗಿ, ವ್ಯವಸಾಯದ ರೈತ, ದೈಹಿಕಶ್ರಮದ ಕಾರ್ಮಿಕರೆಲ್ಲ ಒಂದುರೀತಿಯಲ್ಲಿ ಯೋಗಿಗಳಿಗೆ ಸಮಾನರು. ಏಕೆಂದರೆ ಯೋಗಿಗಳು ಭಗವಂತನಲ್ಲಿ ಮನಸ್ಸನ್ನು ತಲ್ಲೀನಗೊಳಿಸಿದಂತೆ ಇವರೆಲ್ಲ ತಮ್ಮ ಕಾಯಕದಲ್ಲಿ ಮನಸ್ಸನ್ನು ತೊಡಗಿಸಿರುತ್ತಾರೆ. ವ್ಯರ್ಥಚಿಂತೆಗೆ ಅವಕಾಶವಿರುವುದಿಲ್ಲ. (ಬಿಡುವಿರದು ಬಣಗು ಚಿಂತೆಗೆ) ಅವರೇ ಶ್ರಮದಿಂದ ಗಳಿಸಿದ ಊಟ ಅವರದಾಗಿರುತ್ತದೆ. (ಬುತ್ತಿ ಹಂಗಿರದು) ಸ್ವಾವಲಂಬಿಗಳಾದ ಅವರಿಗೆ ಬದುಕು ದುಸ್ತರವಲ್ಲ. (ಕಡಿದಲ್ಲವರ್ಗೆ ಬಾಳ್) ಎಲ್ಲ ಶ್ರಮಜೀವಿಗಳು ಕರ್ಮಯೋಗಿಗಳೇ ಆಗಿದ್ದಾರೆ. ಆದ್ದರಿಂದ ದುಡಿಮೆಯೆ–ದೇವರು. ಕಾಯಕವೇ ಕೈಲಾಸ ಎಂಬ ಕರ್ಮಯೋಗಿಗಳಾದ ಶ್ರಮಜೀವಿಗಳನ್ನು ನಾವು ಗುರುತಿಸಬೇಕು, ಗೌರವಿಸಬೇಕು ಅದು ನಮ್ಮೆಲ್ಲರ ಕರ್ತವ್ಯವಾಗಿದೆ.

ಪ್ರತ್ಯಕ್ಷ ಅನುಭವವೇ ಪ್ರಮಾಣ

98

ಅರ್ಣವವ ಕಣ್ಣಿಂದೆ ಕಂಡ ಬೆರಗಾದೀತೆ ।
ವರ್ಣನೆಯನೋದಿದೊಡೆ, ತೆರೆಯನೆಣಿಸಿದೊಡೆ? ॥
ಪೂರ್ಣವಸ್ತುಗ್ರಹಣವಪರೋಕ್ಷದಿಂದಹುದು ।
ನಿರ್ಣಯ ಪ್ರತ್ಯಕ್ಷ–ಮಂಕುತಿಮ್ಮ ॥ (ಪದ್ಯ 688)

ಜ್ಞಾನಾರ್ಜನೆಯಲ್ಲಿ ಅರಿವು ಆದಿಹಂತ, ಅನುಭವ ಅಂತ್ಯದಹಂತ. ಸತ್ಯ ಅರಿವಾಗುವುದು ಅನುಭವದಿಂದ ಶಕ್ಯ. ಸಮುದ್ರವನ್ನು ದಡದಲ್ಲಿ ನಿಂತು ನೋಡಿದಾಗ ಆಗುವ ಅನುಭವ ಪುಸ್ತಕದಲ್ಲಿ ಕವಿಗಳ ವರ್ಣನೆ ಓದಿದರೆ ಆದೀತೇ? ಅಲೆಗಳನ್ನು ಲೆಕ್ಕಹಾಕಲು ಹೊರಟರೆ ಸಾಗರದ ಅನುಭವ ಆಗದು. ಒಂದುವಸ್ತು ಪೂರ್ಣವಾಗಿ ತಿಳಿಯಬೇಕಾದರೆ ಪ್ರತ್ಯಕ್ಷವಾಗಿ ಪರಾಂಬರಿಸಬೇಕು. ಪ್ರಮಾಣಿಸಿ ನೋಡಬೇಕು. ಅನುಭವಿಯ ಮಾತೇ ವೇದವಾಕ್ಯ.

ಯಾವುದೇ ವಿಷಯದಲ್ಲಿ ಸತ್ಯ ಸಾಕ್ಷಾತ್ಕಾರವಾಗಬೇಕೆಂದರೆ ನಮಗೆ ಅದರ ನೇರಾನುಭವಾಗಬೇಕು. ನಮ್ಮ ಪರಿಶೀಲನೆಯಿಂದ ಸತ್ಯ ತಿಳಿಯಬೇಕು. ಆಗ ನಿಜದ ಸ್ವರೂಪ ತಿಳಿಯುತ್ತದೆ. ಸ್ವಾನುಭವವೇ ಪ್ರಮಾಣ ಆದ್ದರಿಂದಲೆ ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು ಎಂದು ಗಾದೆ ಸಾರುತ್ತದೆ.

ಮುನ್ನಡೆಯುವುದೇ ಮುಖ್ಯ

99

ಎಡವದೆಯೆ, ಮೈಗಾಯವಡೆಯದೆಯೆ, ಮಗುವಾರು ।
ನಡೆಯ ಕಲಿತವನು? ಮತಿನೀತಿಗತಿಯಂತು ॥
ತಡವರಿಸಿ ಮುಗ್ಗರಿಸಿ ಬಿದ್ದು ಮತ್ತೆದ್ದು ಮೈ–1
ದಡವಿಕೊಳುವವರೆಲ್ಲ–ಮಂಕುತಿಮ್ಮ ॥ (ಪದ್ಯ 698)

ಕಲಿಕೆಯಲ್ಲಿ ಯಾರೇ ಆಗಲಿ ಎಡವದೇ ಇರುವವರು ಎಲ್ಲಿದ್ದಾರೆ? ಮಗು ನಡಿಗೆ ಕಲಿಯುವಾಗ ಎಡವದೆ, ಬಿದ್ದು ಗಾಯಮಾಡಿಕೊಳ್ಳದೆ ನಡಿಗೆ ಕಲಿಯಲು ಸಾಧ್ಯವೇ? ಸದ್ಬುದ್ಧಿಯಿಂದ ಧರ್ಮಮಾರ್ಗದಲ್ಲಿ ನಡೆಯಲು ಯತ್ನಿಸುವರೂ ತಮ್ಮ ಗುರಿಸಾಧನೆಯಲ್ಲಿ ಮಗುವಿನಂತೆ ತಡವರಿಸುವುದು, ಮುಗ್ಗರಿಸುವುದು, ಬಿದ್ದೇಳುವುದು ಸಹಜ. ಬಿದ್ದಮೇಲೆ ಮೈದಡವಿಕೊಂಡು ಏಳುವುದು ಮುಖ್ಯ. ಈ ರೀತಿಯ ಅನುಭವ ಎಲ್ಲ ಸಾಧಕರಿಗೂ ಆಗಿದೆ. ಅದಕ್ಕಾಗಿ ತಪ್ಪುಮಾಡಿದರೆ ಚಿಂತಿಸಬೇಕಿಲ್ಲ; ತಿದ್ದಿಕೊಂಡು ಆದ್ದರಿಂದ ಸದಾ ಮುನ್ನಡೆಯುವುದೇ ಗುರಿ ಆಗಿರಬೇಕು. ಲೋಕದಲ್ಲಿ ಪ್ರಖ್ಯಾತರಾದವರೆಲ್ಲ ಸೋತು ಗೆದ್ದವರು, ಎಡವಿ ಬಿದ್ದರೂ ಎದ್ದು ಮುಂದೆನಡೆದವರು ತಪ್ಪಾದರೂ ತಿದ್ದಿಕೊಂಡು ದೊಡ್ಡವರಾದವರು ಎಂಬುದನ್ನು ನೆನಪಿಡಬೇಕು. (ಬಿದ್ದು ಮತ್ತೆದ್ದು ಮೈದಡವಿ ಕೊಳ್ಳುವವರೆಲ್ಲ)

ಜೀವನ ಒಂದು ಕಲೆ

100

ತಲೆ ಕೊಡವ ತಳೆದಿರಲು, ಕೈ ಕತ್ತಿ ಪಿಡಿದಿರಲು ।
ಬಳುಕು ಹಗ್ಗದ ಮೇಲೆ ತಾನಡಿಯನಿಡುತ ॥
ಕೆಲ ಬಲಕೆ ಬೀಳದೆ ಮುನ್ನಡೆವ ಡೊಂಬನುಪಾಯ ।
ಕಲೆಯೆ ಜೀವನಯೋಗ–ಮಂಕುತಿಮ್ಮ ॥ (ಪದ್ಯ 741)

ಜೀವನದಲ್ಲಿ ಕುಶಲತೆಯಿಂದ ಬಾಳಬೇಕು. ಬಾಳೊಂದು ಕಲೆ. ದೊಂಬರವನು, ಬಿದಿರು ಕಂಬಗಳೆರಡರ ನಡುವೆ ಕಟ್ಟಿದ ತೂಗು ಹಗ್ಗದ ಮೇಲೆ ತಲೆಮೇಲೆ ತುಂಬಿದ ನೀರಿನ ಕೊಡ ಇಟ್ಟುಕೊಂಡು ಒಂದು ಕೈಯಲ್ಲಿ ಕತ್ತಿ ಹಿಡಿದುಕೊಂಡು ಅತ್ತಿತ್ತ ವಾಲಿದರೂ ಕೆಳಕ್ಕೆ ಬೀಳದೆ ಹಗ್ಗದ ಮೇಲೆ ನಡೆದುಸಾಗುತ್ತಾನೆ. ಹೀಗೆ ಜೀವನದ ಸುಖದುಃಖಗಳ ನಡುವೆ ಸಮಚಿತ್ತದಿಂದ ಕುಶಲತೆಯಿಂದ ನಿರಂತರ ಅಭ್ಯಾಸದಿಂದ ಮುನ್ನಡೆಯಬೇಕು. ಹೀಗೆ ಜೀವನ ಒಂದು ಕಲೆ ಹಾಗೂ ಅದೊಂದು ಕರ್ಮಕೌಶಲ್ಯ ಎನ್ನುತ್ತಾರೆ ಡಿವಿಜಿ ಅವರು. ಗೀತೆಯಲ್ಲಿ ಈ ಅಂತರಾರ್ಥ ಅಡಗಿದೆ ಎಂದು ತಿಳಿದು ತಾವು ಬರೆದ ಗೀತಾ ವ್ಯಾಖ್ಯಾನ ಗ್ರಂಥಕ್ಕೆ ಜೀವನ ಧರ್ಮಯೋಗ ಎಂದು ಹೆಸರಿಟ್ಟಿದ್ದಾರೆ.

ಬಾಳಿನಲ್ಲಿ ಹುಲ್ಲಿನಂತಾಗು

101

ಅಣಗಿದ್ದು ಬೇಸಿಗೆಯೊಳ್, ಎದ್ದು ಮಳೆ ಕರೆದಂದು ।
ಗುಣಿಯೆನದೆ ತಿಟ್ಟೆನದೆ ಸಿಕ್ಕಿದೆಡೆ ಬೆಳೆದು ॥
ಉಣಿಸನೀವನು ದನಕೆ, ತಣಿವನೀವನು ಜಗಕೆ ।
ಗುಣಶಾಲಿ ತೃಣಸಾಧು–ಮಂಕುತಿಮ್ಮ ॥ (ಪದ್ಯ 744)

ಬೇಸಿಗೆ ಕಾಲದಲ್ಲಿ ಹುಲ್ಲು ಒಣಗಿ ಹಸಿರುಮಾಯವಾಗುತ್ತದೆ. ಮಳೆ ಬಿದ್ದಕೂಡಲೆ ಚಿಗುರಿ ಹಸುರಾಗುತ್ತದೆ. ಹಳ್ಳದಲ್ಲಾಗಲಿ ದಿಣ್ಣೆಯಲ್ಲಾಗಲಿ (ಗುಣಿಯೆನದೆ ತಿಟ್ಟೆನದೆ) ಯಾವ ಎಡೆಯಲ್ಲಾಗಲಿ ಬೆಳೆದು ದನಕರು ಗಳಿಗೆ ಆಹಾರವಾಗುತ್ತದೆ. ಒಣಗಿದರೂ ತನ್ನ ಒಳಗಿನ ಚೈತನ್ಯದಿಂದ ಚಿಗುರಿ ಲೋಕಕ್ಕೆ ಪಶುಗಳಿಗೆ ಉಪಕಾರಿ ಆಗುವ ಗುಣಶಾಲಿ ಹುಲ್ಲು, ಭಗವಂತನ ಅಂಶವುಳ್ಳದ್ದು. ನಾವು ಹುಲ್ಲಿನಂತೆ ಆಗಬೇಕು.

ಹುಲ್ಲು ಪಶುಗಳಿಗೂ ಉಪಕಾರಿ, ಮಾನವರಿಗೂ ಉಪಕಾರಿ. ಹುಲ್ಲಿನ ಜೋಪಡಿ ವಾಸಕ್ಕೆ ಬೇಕು. ಹುಲ್ಲಿನ ಕಂತೆ ವ್ಯಾಪಾರ ಜೀವನದ ಕಸಬುಗಳಲ್ಲಿ ಒಂದು. ಹುಲ್ಲು ಬೆಳೆದಕಡೆ ಧೂಳು ಮಣ್ಣು ಕಸ ಇರುವುದಿಲ್ಲ ಹುಲ್ಲಿನ ನೆಲೆ ಕಣ್ಣಿಗೆ ತಂಪು. ಹುಲ್ಲು ಹಸಿರು ಬಣ್ಣದ ಉಡುಗೆಯ ಶಾಂತಮೂರ್ತಿಯ ಸಾಧುವಿನ ಪ್ರತೀಕ ಆಗದೆ. (ಜಗಕ್ಕೆ ಗುಣಶಾಲಿ ತೃಣಸಾಧು).

ಮಾನವ ಮರದಂತೆ ಬಾಳಬೇಕು

102

ಪರಹಿತದ ಮಾತಿರಲಿ ; ಪರರಿನೇ ಜೀವಿಪನು ।
ನರಜಂತು, ಪಶು ಪಕ್ಷಿ ಕೀಟ ಮೀನ್ಗಳವೋಲ್ ॥
ಪರರಿನೆಳಸದದೇನನುಂ ಪರರಿಗುಪಕರಿಪ ।
ತರುಜನ್ಮವಲ ಪುಣ್ಯ ! ? ಮಂಕುತಿಮ್ಮ ॥ (ಪದ್ಯ 745)

ಮಾನವನೆಂಬ ಪ್ರಾಣಿ, ಪಶು, ಪಕ್ಷಿ ಕೀಟ ಮೀನುಗಳಂತೆ ಪರಾವಲಂಬಿ. ಇನ್ನು ಪರಹಿತಗೈಯುವ ಮಾತೆಲ್ಲಿ ಬಂತು? ಮರ ಹಾಗಲ್ಲ, ಇತರರಿಂದ ಏನನ್ನೂ ಬಯಸದೆ ಇತರರಿಗೆ ಉಪಕರಿಸುವ ಜನ್ಮ ಅದರದು. ಮರ ನೆರಳನ್ನು ಕೊಡುತ್ತದೆ. ಆಯಾ ಕಾಲಗಳಲ್ಲಿ ಹಣ್ಣು, ಹಂಪಲು ನೀಡಿ ಹಸಿವನ್ನು ನೀಗಿಸುತ್ತದೆ. ಈ ರೀತಿ ಪರೋಪ ಕಾರಿ ಮರ ಪುಣ್ಯಜೀವಿಯಾಗಿದೆ. ಗೀತೆಯಲ್ಲಿ ಹೇಳುವಂತೆ ನಿಷ್ಕಾಮಕರ್ಮ ಮರದ್ದು ಎಂದರೆ ಪ್ರತಿಫಲಾಪೇಕ್ಷೆಯಿಲ್ಲದೆ ಪ್ರಾಣಿಗಳಿಗೆ ಆಗಲಿ ಮಾನವರಿ ಗಾಗಲಿ ಪಶುಪಕ್ಷಿಗಳಿಗೂ ಎಲ್ಲರಿಗೂ ಮರ ಉಪಕಾರ ಮಾಡುವುದರಲ್ಲಿ ಯಾವುದೇ ಪಕ್ಷಪಾತವಿಲ್ಲ. ಮರದ ನೆರಳು ಫಲ ದುಷ್ಟನಿಗೂ ಆಶ್ರಯ ವಾಗುತ್ತಾ ಶಿಷ್ಯನಿಗೂ ಆಶ್ರಯವಾಗುತ್ತದೆ. ಮರದ ಎಲ್ಲಾ ಭಾಗಗಳೂ ಉಪಕಾರಿ ಅಂಗಗಳೇ ಆಗಿವೆ. ಎಲೆ ನೆರಳಿಗೆ, ಹೂ ಅಲಂಕಾರಕ್ಕೆ, ಹಣ್ಣು

ಹಸಿವಿಗೆ ಮರದ ಕಾಂಡ ಸೌದೆಗೆ ಹೀಗೆ ಮರದ ಎಲ್ಲಾ ಭಾಗಗಳು ಉಪಯುಕ್ತವಾಗಿವೆ. ಆದ್ದರಿಂದ ನಮ್ಮ ಬಾಳು ಮರದಂತಿರಬೇಕು. ಪರರಿಗೆ ಉಪಕರಿಸುವ ಮರದ ಜನ್ಮ ಪುಣ್ಯದ ಫಲ ಎಂದರೆ ತಪ್ಪಾಗದು. ಆದ್ದರಿಂದಲೇ ವ್ಯಾಸರಾಯರು ಏನನ್ನು ಬೃಂದಾವನದಲ್ಲಿ ಮರವಾಗಿ ಪುಟ್ಟಿಸೋ ಮೋಕ್ಷಗೀಕ್ಷ ಬೇಡ ಎಂದು ಕೇಳಿಕೊಂಡಿದ್ದಾರೆ.

ಎಲ್ಲರೊಳಗೊಂದಾಗು

103

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ।
ಎಲ್ಲರೊಳಗೊಂದಾಗು–ಮಂಕುತಿಮ್ಮ ॥ (ಪದ್ಯ 789)

ಲೋಕದಲ್ಲಿ ಸಾಧ್ಯವಾದಷ್ಟರಮಟ್ಟಿಗೆ ಜನರಿಗೆ ನಾನಾವಿಧದಲ್ಲಿ ಉಪಕಾರ ಸಹಾಯ ಮಾಡಬೇಕು. ಇದು ಮಾನವಧರ್ಮ. ಬಾಳಿನ ಸಾರ್ಥಕತೆಗೆ ನಿದರ್ಶನ. ಬೆಟ್ಟದಬುಡದಲ್ಲಿ ಹುಲ್ಲು ಬೆಳೆದಾಗ ದನ, ಕುರಿ, ಜಿಂಕೆ ಮೊದಲಾದ ಪ್ರಾಣಿಗಳು ಮೇವಾಗುತ್ತದೆ. ಮನೆ ಮುಂದೆ ಅಂಗಳದಲ್ಲಿ ಮಲ್ಲಿಗೆ ಹೂ ಬಿಟ್ಟರೆ ದೇವರಿಗೆ ಅರ್ಪಿಸಲು, ನಾರಿಯರು ಮುಡಿಯಲು ಪೂಜಾವಸ್ತು, ಅಲಂಕಾರಸಾಧನ ಆಗುತ್ತದೆ. ದೈವ ಕಷ್ಟಗಳೆಂಬ ಮಳೆ ಸುರಿಸಿದರೆ ಬಾಳಿನಲ್ಲಿ ಕಷ್ಟ ಬಂದರೆ ಯಾವುದಕ್ಕೂ ಜಗ್ಗದೆ ಸವೆಯದೆ ಕಲ್ಲಿನಂತೆ ಧೈರ್ಯದಿಂದ ಗಟ್ಟಿಯಾದ ಮನಸ್ಸಿ ನಿಂದಿರಬೇಕು. ಹಾಗಂತ ಕಠಿಣಹೃದಯಿ ಆಗಬೇಕಿಲ್ಲ. ಅಶಕ್ತರಿಗೆ ಬಡವರಿಗೆ ಬಾಯಿಗೆ ಬೆಲ್ಲದಂತೆ ತಿಂಡಿಗೆ ಸಿಹಿಸಕ್ಕರೆಯಂತೆ ಸಾಧನ ವಾಗುವ ಹಾಗೆ ಉಪಕಾರಿ ಆಗುವುದೇ ಬಾಳಿನ ಗುರಿ ಆಗಬೇಕು. ಹೀಗೆ ಕಿರಿಯರಿಗೆ ಹಿರಿಯರಿಗೆ ಸ್ತ್ರೀ–ಪುರುಷರಿಗೆ ಎಲ್ಲರ ಜತೆಯಲ್ಲಿ ಹೊಂದಿಕೊಂಡು ಬಾಳಬೇಕು (ಎಲ್ಲರೊಳಗೊಂದಾಗು).

ಎಲ್ಲದಕ್ಕೂ ಸಿದ್ಧನಿರು

104

ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ ।
ನಾನೇನು ಹುಲುಕಡ್ಡಿಯೆಂಬ ನುಡಿ ಬೇಡ ॥
ಹೀನಮಾವುದುಮಿಲ್ಲ ಜಗದ ಗುಡಿಯೊಳಿಗದಿ ।
ತಾಣ ನಿನಗಿಹುದಿಲ್ಲಿ–ಮಂಕುತಿಮ್ಮ ॥ (ಪದ್ಯ 790)

ಲೋಕದಲ್ಲಿ ಚಿಕ್ಕ ಕೆಲಸವೂ ಇರುತ್ತದೆ. ದೊಡ್ಡ ಕೆಲಸವೂ ಇರುತ್ತದೆ. ನಮ್ಮ ಪಾಲಿಗೆ ಯಾವ ಬಗೆ ಕೆಲಸಬಂದರೂ ಮಾಡಲು ಸಿದ್ಧವಿರಬೇಕು. ನಾನು ಅಲ್ಪ, ನನ್ನ ಕೈಲಾದೀತೆ? ಎಂಬ ಕೀಳರಿಮೆ ಇರಬೇಕಿಲ್ಲ. (ನಾನೇನು ಹುಲುಕಡ್ಡಿಯೆಂಬ ನುಡಿಬೇಡ) ಲೋಕದಲ್ಲಿ ಯಾವ ಕಾಯಕ ಆದರೂ ಶ್ರೇಷ್ಠ. ನೀಚಉದ್ಯೋಗ ಎಂಬುದು ಯಾವುದೂ ಇಲ್ಲ. (ಹೀನಮಾವುದುಮಿಲ್ಲ) ದುಡಿಯಲು ಜಗತ್ತೆಂಬ ಗುಡಿಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ಕೆಲಸ ಮಾಡಲು ಅವಕಾಶ ಇದ್ದೇಇರುತ್ತದೆ. ಆದ್ದರಿಂದ ಜಗತ್ತೆಂಬ ಗುಡಿಯಲ್ಲಿ ಸೇವೆ ಸಲ್ಲಿಸಲು (ಜಗದ ಗುಡಿಯೊಳಿಗದಿ) ಪ್ರತಿಯೊಬ್ಬರಿಗೂ ಅವಕಾಶವಿದೆ (ತಾಣ ನಿನಗಿಹುದಿಲ್ಲಿ) ಆದ್ದರಿಂದ ಎಲ್ಲರೂ ದುಡಿಯಲು ಸಿದ್ಧರಿರಬೇಕು. ಎಲ್ಲ ಬಗೆ ಕೆಲಸಕ್ಕೂ ಸಿದ್ಧವಿರಬೇಕು.

ಜಗದ್ಗುರುವಿನ ಲಕ್ಷಣ

105

ಗರ್ವಪಡದುಪಕಾರಿ, ದರ್ಪ ಬಿಟ್ಟಧಿಕಾರಿ ।
ನಿರ್ವಿಕಾರದ ನಯನದಿಂ ನೋಳ್ಪುದಾರಿ ॥
ಸರ್ವಧರ್ಮಾರ್ಥಧಾರಿ, ನಿರ್ವಾಣಸಂಚಾರಿ ।
ಉರ್ವರೆಗೆ ಗುರುವವನು–ಮಂಕುತಿಮ್ಮ ॥ (ಪದ್ಯ 806)

ಲೋಕದಲ್ಲಿ ನಿಜವಾದ ಗುರು ಹೇಗಿರುತ್ತಾನೆ ? ಎಲ್ಲ ರೀತಿಯಲ್ಲೂ ಮಾರ್ಗದರ್ಶಕನಾಗಿರುತ್ತಾನೆ; ಆದರ್ಶಪ್ರಾಯನಾಗಿರುತ್ತಾನೆ; ಉಪಕಾರ ಮಾಡಿದರೂ, ಮಾಡಿದೆನೆಂಬಹೆಮ್ಮೆ ಇರುವುದಿಲ್ಲ. ಅಧಿಕಾರವಿದ್ದರೂ, ದರ್ಪದಿಂದ ವರ್ತಿಸುವುದಿಲ್ಲ. ಲೋಕದ ಯಾವುದೇ ವ್ಯವಹಾರವನ್ನು ಪಕ್ಷಪಾತದಿಂದ ನೋಡುವುದಿಲ್ಲ. ಎಲ್ಲ ಧರ್ಮಾರ್ಥಧರ್ಮಗಳನ್ನು ತಿಳಿದು ಅವುಗಳಿಗೆ ತಕ್ಕಂತೆ ವರ್ತಿಸುತ್ತಾನೆ. ಮೋಕ್ಷದತ್ತ ಸಾಗುವಂಥವ ನಾಗಿರುತ್ತಾನೆ. ಇಂಥವನೇ ಜಗತ್ತಿನಲ್ಲಿ ಜನರ ಪಾಲಿಗೆ ನಿಜವಾದ ಜಗದ್ಗುರು (ಉರ್ವರೆಗೆ ಗುರುವಾದವನು) ನಿಜವಾದ ಜಗದ್ಗುರು ಹೇಗಿರುತ್ತಾನೆ ಹೇಗಿರಬೇಕು ಎಂಬುದನ್ನು ಈ ಪದ್ಯದಲ್ಲಿ ಹೇಳಿದೆ.

ಶಾಂತಮನ ಸದಾ ಇರಲಿ

106

ಕಳವಳವ ನೀಗಿಬಿಡು, ತಳಮಳವ ದೂರವಿಡು ।
ಕಳೆ, ತಳ್ಳು ಗಲಭೆ ಗಾಬರಿಯ ಮನದಿಂದ ॥
ಅಲೆದಾಡುತಿರೆ ದೀಪ ಕಣ್ಗೆ ಗುರಿ ತಪ್ಪುವುದು ।
ತಿಳಿತಿಳಿವು ಶಾಂತಿಯಲಿ–ಮಂಕುತಿಮ್ಮ ॥ (ಪದ್ಯ 828)

ಯಾರೇ ಆಗಲಿ ಸದಾ ಮನಸ್ಸನ್ನು ತೃಪ್ತಿಯಿಂದ ಶಾಂತವಾಗಿ ಇಟ್ಟುಕೊಂಡಿರಬೇಕು. ನನಗೆ ಲಾಭವಾಗುತ್ತದೋ ಇಲ್ಲವೋ ಎಂಬ ಕಳವಳ, ತನ್ನುದ್ದೇಶ ನೆರವೇರದೆ ಏನು ಅನಾಹುತವಾಗುತ್ತದೋ ಎಂಬ ಗಾಬರಿ ಇರಬಾರದು. ನೂರಾರು ಚಿಂತೆಗಳ ಗೊಂದಲದ ಮನ–ಇವುಗಳಿಂದ ಮನಸ್ಸು ಹೊಯ್ದಾಡುತ್ತಿದ್ದರೆ ನೆಮ್ಮದಿ ಇರುವುದಿಲ್ಲ. ದೀಪದ ಕುಡಿ ಹೊಯ್ದಾಡುತ್ತಿದ್ದರೆ ಏನನ್ನು ಕಂಡರೂ ಗುರಿತಪ್ಪುತ್ತದೆ. ಚಂಚಲತೆ ಇಲ್ಲದ ಮನಸ್ಸು, ತಿಳಿವಳಿಕೆಯಿಂದ ಕೂಡಿದ ಮನಸ್ಸು ಶಾಂತವಾಗಿರುತ್ತದೆ. ಅಲುಗಾಡದದೀಪದ ಹಾಗೆ. ಆದ್ದರಿಂದ ನಿಶ್ಚಿಂತೆಯ ಮನ ಇರಬೇಕು. (ತಿಳಿ ತಿಳಿವು ಶಾಂತಿಯಲಿ)

ಸಮಾಧಾನದ ಮನಸ್ಸಿದ್ದರೆ ಶುದ್ಧಜ್ಞಾನ ಮೂಡುತ್ತದೆ. ಅಂಥ ಮನಸ್ಸು ಶಾಂತಚಿತ್ತ; ಸತ್ಯದ ನೆಲೆ, ಸುಖದ ಬೀಡು. ಇದನ್ನೇ ಸಮಚಿತ್ತ ಎಂದೂ ಕರೆಯುವರು.

ಬಾಳನೆಮ್ಮದಿಯ ಸಾಧನಗಳು

107

ಗುಡಿಯ ಪೂಜೆಯೊ, ಕಥೆಯೊ, ಸೊಗಸುನೋಟವೊ, ಹಾಡೊ।
ಬಡವರಿಂಗುಪಕೃತಿಯೊ, ಆವುದೋ ಮನದ ॥
ಬಡಿದಾಟವನು ನಿಲಿಸಿ ನೆಮ್ಮದಿಯನೀವೊಡದೆ ।
ಬಿಡುಗಡೆಯೊ ಜೀವಕ್ಕೆ–ಮಂಕುತಿಮ್ಮ॥ (ಪದ್ಯ 832)

ದೇವಾಲಯಗಳಲ್ಲಿ ಸಲ್ಲಿಸುವ ಪೂಜೆ ಸೇವೆಗಳು, ಹರಿಕಥೆ, ಭಜನೆಗಳು, ನಾಟಕ, ನೃತ್ಯಗಳ ಸುಂದರದೃಶ್ಯಗಳು, ಸುಮಧುರ ಸಂಗೀತ, ಬಡಜನರಿಗೆ ನೆರವು ನೀಡುವುದು ಇಂಥ ಯಾವುದೇ ಸತ್ಕಾರ್ಯ–ಸಾಧುಕಾರ್ಯಗಳನ್ನು ಮಾಡುವುದರಿಂದ ನಮಗೆ ದೊರಕುವ ನೆಮ್ಮದಿ ಹಣ ಅಧಿಕಾರದಿಂದ ಸಿಗದು. ಮನಸ್ಸಿನ ಹೊಯ್ದಾಟ, ಚಿಂತೆಗಳನ್ನು ನಿಲ್ಲಿಸುವ ನೆಮ್ಮದಿಯಿಂದ ಮನಸ್ಸು ನಿರಾಳವಾಗುತ್ತದೆ. ಬದುಕು ಸರಳವಾಗುತ್ತದೆ, ಸುಂದರವಾಗುತ್ತದೆ. ಸಮಸ್ಯೆಗಳಿಲ್ಲದೆ ಹಾಯಾದ ಬಾಳಾಗುತ್ತದೆ. ಇದನ್ನು ನಾವೆಲ್ಲ ಅರ್ಥಮಾಡಿಕೊಳ್ಳಬೇಕು. ಆ ರೀತಿಯ ಬದುಕಿಗಾಗಿ ಶ್ರಮಿಸಬೇಕು ಆಗ ನಮಗೆ ಜೀವನ್ಮುಕ್ತಿ ಸಿಗುತ್ತದೆ (ಬಿಡುಗಡೆಯೊ ಜೀವಕ್ಕೆ).

ತಳಹದಿಯನ್ನೇ ಭಗ್ನಗೊಳಿಸುವುದು ತರವಲ್ಲ

108

ಒಡೆಯದಿರು ತಳಹದಿಯ ಸರಿವಡಿಪೆನದನೆಂದು ।
ಸಡಲಿಸುವ ನೀಂ ಮರಳಿ ಕಟ್ಟಲರಿತವನೇಂ ? ॥
ಗಿಡವ ಸರಿ ಬೆಳೆಯಿಸಲು ಬುಡವ ಕೀಳ್ವುದು ಸರಿಯೆ ? ।
ದುಡುಕದಿರು ತಿದ್ದಿಕೆಗೆ–ಮಂಕುತಿಮ್ಮ ॥ (ಪದ್ಯ 878)

ಕ್ರಾಂತಿ ಮಾಡುತ್ತೇನೆ, ಸುಧಾರಣೆ ಮಾಡುತ್ತೇನೆ ಸಮಾಜವನ್ನೇ ಬದಲಿಸುತ್ತೇನೆ ಎಂದು ಇರುವ ಸಂಸ್ಕೃತಿ ಸಂಪ್ರದಾಯಗಳನ್ನು ಅಲ್ಲಗಳೆವವರನ್ನು ಕುರಿತು ಹೇಳಿರುವ ಮಾತಿದು. ಇರುವ ಪರಂಪರೆ ಸಂಪ್ರದಾಯವೆಂಬ ಕಟ್ಟಡದ ತಳಪಾಯವನ್ನು ಭಗ್ನಗೊಳಿಸಿದರೆ ಅದರ ಮೇಲೆ ಇದ್ದ ಕಟ್ಟಡವನ್ನು ಮತ್ತೆ ಕಟ್ಟಲಾಗುವುದೇ? ಗಿಡಬಾಗಿದೆ ನೆಟ್ಟಗೆ ಮಾಡುತ್ತೇನೆ ಎಂದು ಬುಡ ಕಡಿಯುವುದು ಸರಿಯೇ? ಮತ್ತೆ ಗಿಡ ಬೆಳೆದೀತೆ? ಆದ್ದರಿಂದ ತೀವ್ರ ಸುಧಾರಣೆಗೆ ಬದಲಾವಣೆಗೆ ಏಕಾಏಕಿ ಧಾವಿಸಬಾರದು. ಅವಸರ ಸಲ್ಲದು.

ಇದ್ದುದ್ದನ್ನು ಸರಿಪಡಿಸುವೆ ಎಂದೋ ಹೊಸದಾಗಿ ಏನನ್ನೋ ನಿರ್ಮಿಸುತ್ತೇನೆ ಎನ್ನುವವರಿಗೆ ಅವಸರ ಆತುರ ಇಲ್ಲದರ ಜೊತೆಗೆ ಸುಧಾರಣೆಗೆ ಸಾವಕಾಶವಾಗಿ ಚಿಂತಿಸಬೇಕು ಯೋಚಿಸಬೇಕು. (ದುಡುಕದಿರು ತಿದ್ದಿಕೆಗೆ).

ಕೊಟ್ಟು ತಿನ್ನುವುದು ಶ್ರೇಷ್ಠ ವ್ರತ

109

ತ್ಯಜಿಸಿ ಭುಜಿಸಲ್ಕಲಿತವನೆ ಜಗಕೆ ಯಜಮಾನ ।
ನಿಜಕುಕ್ಷಿ ಚಿಂತೆಯೇಂ ಮೊದಲು ಮನೆತಾಯ್ಗೆ ? ॥
ಭುಜಿಪ ಪತಿಸುತರೊಪ್ಪು ತುಪ್ಪವವಳೂಟಕ್ಕೆ ।
ಭಜಿಸು ನೀನಾ ವ್ರತವ–ಮಂಕುತಿಮ್ಮ ॥ (ಪದ್ಯ 908)

ಇನ್ನೊಬ್ಬರಿಗೆ ತನ್ನದರಲ್ಲಿ ನೀಡಿ ಉಳಿದುದನ್ನು ತಾನು ಸ್ವೀಕರಿಸಬೇಕು ಅಂತಹವನು ಜಗತ್ತಿಗೆ ಹಿರಿಯನಾಗಬಲ್ಲನು ಮನೆಯಲ್ಲಿ ತಾಯಿಯಾದವಳಿಗೆ ತನ್ನ ಹಸಿವಿನ ಚಿಂತೆ ಇರುವುದಿಲ್ಲ. ಗಂಡ, ಮಕ್ಕಳು ಎಂದು ಸಂತಸಗೊಂಡರೆ ಉಂಡರೆ ಅವಳಿಗೆ ಅದೇ ಸಂತೋಷ ಅದೇ ಅವಳ ಊಟಕ್ಕೆ ತುಪ್ಪ ಇದ್ದಂತೆ ಈ ವ್ರತ ನಿಯಮ ಎಲ್ಲರೂ ಅನುಸರಿಸಬೇಕಾದುದು. ನಾವು ಏನನ್ನು ಅನುಭವಿಸುತ್ತೇವೋ ಅದರಲ್ಲಿ ಒಂದು ಭಾಗ ಇತರರಿಗೆ ನೀಡಬೇಕು. ನಮ್ಮನ್ನು ಆಶ್ರಯಿಸಿದವರಿಗೆ ಮೊದಲು ನೀಡಿ ನಾವು ಅನಂತರ ಭುಜಿಸಬೇಕು. ಇಂಥ ಆಚರಣೆ ನಮ್ಮ ಬದುಕಿಗೆ ಇರಲಿ. ಹೀಗೆ ತ್ಯಾಗದಿಂದ ಭೋಗ ತತ್ವದ ಆಚರಣೆ ಇರಬೇಕು. ಇದು ಈಶಾವಾಸ್ಯೋಪನಿಷತ್ತಿನ ಸಾರವೂ ಆಗಿದೆ.

ಆದರ್ಶ ಜೀವನದ ರೀತಿ

110

ಜೋಳಿಗೆಯ ಪಿಡಿದು ನೀನೂರಿನೂರಿಗೆ ನಡೆದು ।
ಹೇಳುತ್ತ ಹಾಡುಗಳ, ಭಾರಗಳ ಮರೆತು ॥
ಬೀಳು ಮೇಲುಗಳೆಣಿಕೆಯಿಂ ಮನವನಲುಗಿಸದೆ ।
ಬಾಳ ನಡಸುವುದೆಂದೊ? – ಮಂಕುತಿಮ್ಮ ॥ (ಪದ್ಯ 925)

ಜೀವನದಲ್ಲಿ ಆದರ್ಶಗಳಿರಬೇಕು. ಹರಿದಾಸರ ಮತ್ತು ಶಿವಶರಣರ ಬಾಳಿನ ಹಾಗೆ ಸರಳ ಜೀವನ, ಸಮಭಾವನೆ ದೇವರಲ್ಲಿ ಭಕ್ತಿ ಇರಬೇಕು. ಹರಿದಾಸರು ಊರಿಂದ ಊರಿಗೆ ಕೀರ್ತನೆ ಹಾಡುತ್ತಾ ಭಗವಂತನನ್ನು ಸ್ಮರಿಸುತ್ತಾ ಜನರಿಗೆ ಧರ್ಮಮಾರ್ಗ ತಿಳಿಸುತ್ತಾ ಜೋಳಿಗೆ ಹಿಡಿದು ಭಿಕ್ಷೆಯಲ್ಲಿ ತಮ್ಮ ದುಃಖ ದುಮ್ಮಾನಗಳನ್ನು ಮರೆತು (ಭಾರಗಳ ಮರೆತು) ಅಂದಂದಿನ ಜೀವನ ಸಾಗಿಸುತ್ತಿದ್ದರು. ಸುಖ ದುಃಖಗಳಿಗೆ ಚಳಿ, ಮಳೆ, ಗಾಳಿಗೆ ಹಿಗ್ಗದೆ ಕುಗ್ಗದೆ ಅಂಜದೆ ಅಳುಕದೆ (ಮನವನಲುಗಿಸದೆ) ಎಲ್ಲವೂ ದೇವರ ದಯೆ ಇದ್ದಂತೆ. ಬಂದಿದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂದು ಬಾಳಿದರು. ಅಂಥ ಆದರ್ಶ ನಮಗಿರಬೇಕು. ಅಷ್ಟೇ ಅಲ್ಲ ಆ ಆದರ್ಶವನ್ನು ನಮ್ಮ ಬಾಳಿನಲ್ಲಿ ನಾವು ಆಚರಣೆಗೆ ತರಬೇಕು. ಆ ಕಾಲ ನಮಗೆಂದು ಬರುವುದು? (ಬಾಳು ನಡೆಸು ವುದೆಂದೊ?)

ಹಂಗಿಲ್ಲದ ಬದುಕನ್ನು ಕರುಣಿಸು

111

ಆರ ಕೈತುತ್ತಿಗಂ ನಿನ್ನ ಕಾಯಿಸದೆ ವಿಧಿ ।
ಯಾರ ಭುಜಕಂ ನಿನ್ನ ಭಾರವಾಗಿಸದೆ ॥
ಆರ ಸೆಲೆ ಸುಳಿವುಮಂಟದವೊಲಾಗಿಸಿ ನಿನ್ನ ।
ಪಾರಗಾಣಿಸಬೇಡು–ಮಂಕುತಿಮ್ಮ ॥ (ಪದ್ಯ 930)

ದೈವವೇ ಬದುಕಿನಲ್ಲಿ ಸ್ವತಂತ್ರವಾಗಿ ಬಾಳಬೇಕಾದರೆ ಹೊಟ್ಟೆಬಟ್ಟೆಗೆ ಇನ್ನೊಬ್ಬರನ್ನು ಬೇಡಲು ಕಾಯುವಂತೆ ನನ್ನನ್ನು ಮಾಡಬೇಡ. ಇಳಿವಯಸ್ಸಿನಲ್ಲಿ ಆರೋಗ್ಯ ನಶಿಸಿ ದೇಹ ಕಾಯಿಲೆಗಳಿಗೆ ಬಲಿಯಾಗಿ ಇನ್ನೊಬ್ಬರಿಗೆ ಹೊರೆಯಾಗುವಂತೆ ಮಾಡಬೇಡ. ದೇವರೇ ! ಬಾಳಿನುದ್ದಕ್ಕೂ ಯಾರ ಆಶ್ರಯ, ಪ್ರಭಾವ ಅವಲಂಬನಗಳಿಗೆ ಒಳಗಾಗದಂತೆ ಮಾಡು, ಹೀಗೆ ಬಾಳಿನಲ್ಲಿ ಬಾಲ್ಯದಿಂದ ವೃದ್ಧಾಪ್ಯದವರೆಗೆ ಎಲ್ಲಾ ಹಂತಗಳಲ್ಲೂ ಸ್ವಾವಲಂಬಿ ಆಗಿರುವಂತೆ, ಯಾರನ್ನೂ ಆಶ್ರಯಿಸದಂತೆ ಅನುಗ್ರಹ ಮಾಡು ಭಗವಂತ! ಎಂಬುದೇ ನಿನ್ನ ಪ್ರಾರ್ಥನೆ ಆಗಿರಲಿ.

ಇದು ಕೇವಲ ಒಬ್ಬರ ಪ್ರಾರ್ಥನೆಯಲ್ಲ. ಎಲ್ಲರ ಆದರ್ಶ ಆಗಬೇಕು. ಇನ್ನೊಬ್ಬರನ್ನು ಬೇಡದ ಬದುಕನ್ನು ಕೊಡು. ಸಾಯುವ ಕಾಲಕ್ಕೆ ಸುಖಮರಣ ನೀಡು ಎಂದು ಮಹಾತ್ಮರ ಆಶಯವೂ ಆಗಿತ್ತು. ನಮ್ಮೆಲ್ಲರ ಆದರ್ಶವೂ ಆಗಿರಬೇಕು.

ವಿಚಾರವಂತನಾಗಿ ಬಾಳು

112

ನೂರಾರು ಮತವಿಹುದು ಲೋಕದುಗ್ರಾಣದಲಿ ।
ಆರಿಸಿಕೊ ನಿನ್ನ ರುಚಿಗೊಪ್ಪುವುದನದರೊಳ್ ॥
ಸಾರದಡುಗೆಯನೊಳವಿಚಾರದೊಲೆಯಲಿ ಮಾಡು ।
ಬೇರೆ ಮತಿ ಬೇರೆ ಮತ–ಮಂಕುತಿಮ್ಮ ॥ (ಪದ್ಯ 934)

ಈ ಪ್ರಪಂಚ ಒಂದು ಸಂಗ್ರಹಾಲಯವಿದ್ದಂತೆ ಇದು ನೂರಾರು ಧರ್ಮಗಳು, ಪಂಥಗಳು, ಬಾಳಿನಸಾಧನಗಳು, ತುಂಬಿರುವ ದಾಸ್ತಾನುಕೋಶ. ನಮ್ಮ ಶಕ್ತಿಸಾಮರ್ಥ್ಯ, ಆಸಕ್ತಿ ಅಭಿರುಚಿಗೆ ತಕ್ಕಂತೆ ಸಾಧನಗಳನ್ನು ವಸ್ತುಗಳನ್ನು ಆರಿಸಿಕೊಳ್ಳಬೇಕು. ಈ ಪರಿಕರಗಳನ್ನು ನಮ್ಮ ಸ್ವತಂತ್ರದಿಂದ ಚಿಂತನೆಗಳ ಮೂಲಕ ಅಚ್ಚುಕಟ್ಟಾಗಿ ರಸವತ್ತಾಗಿ, ಪದಾರ್ಥಗಳನ್ನು ಬಳಸಿ ಕಟ್ಟುನಿಟ್ಟಾಗಿ ಅಡುಗೆಮಾಡುವ ಹಾಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಈ ಲೋಕದಲ್ಲಿ ಒಬ್ಬೊಬ್ಬರ ವಿಚಾರ ವಿವರಗಳಿಗೆ ತಕ್ಕಂತೆ ಮತ, ಧರ್ಮ, ಪಂಥ ಮಾರ್ಗಗಳಿವೆ. ಗುರಿ ಒಂದಾದರೂ ದಾರಿ ನೂರಾರು ಅವರವರ ನಂಬಿಕೆ ಶ್ರದ್ಧೆ ಆಚರಣೆಗಳಿಗೆ ತಕ್ಕಂತೆ ಬೇರೆ ಬೇರೆ ಮತ, ಧರ್ಮ, ನೀತಿ ಬದುಕಿನ ಮಾರ್ಗ ಭಿನ್ನ ಭಿನ್ನವಿರುತ್ತದೆ. ನಾವು ವಿಚಾರಮಾಡಿ ನಮಗೆ ಶಕ್ಯವಾಗುವ ಸೂಕ್ತ ಮಾರ್ಗದಲ್ಲಿ ಸಾಗಬೇಕು.



ಡಿ.ವಿ.ಜಿ

ಡಿವಿಜಿ (ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ) ಜನನ 1-3-1887 (ನಿಧನ 7-10-1975) ಜೀವನಾನುಭವದಿಂದ ಸಜ್ಜನರ ವಿದ್ವಾಂಸರ ಕಲೆಗಾರರ ಶಾಸ್ತ್ರಕಾರರ ಸಾನ್ನಿಧ್ಯದಿಂದ ವಿದ್ಯೆಯ ಪರ್ವತವೆ ಆದರು. ಕನ್ನಡದ ಜ್ಞಾನನಿಧಿ ದಾರ್ಶನಿಕ ಎನಿಸಿದರು ಇವರ ರಸವತ್ತಾದ ಬದುಕಿನ ಅನುಭವಗಳ ಮಾಲೆ ಜ್ಞಾಪಕ ಚಿತ್ರಶಾಲೆ. ಪಾಮರರಿಗೆ ಅನುಭವದ ಅಂಗಳ ಜೀವನ ಧರ್ಮಯೋಗವೆಂಬ ಗೀತಾ ವ್ಯಾಖ್ಯಾನ ಸಾಮಾನ್ಯದಿಂದ ಪಂಡಿತರವರೆಗೆ ಬದುಕಿಗೆ ಬೆಳಕು ನೀಡುವ ಗ್ರಂಥ. ಮಂಕುತಿಮ್ಮನ ಕಗ್ಗ ಮತ್ತು ಮರುಳ ಮುನಿಯನ ಕಗ್ಗ ಪ್ರತಿಯೊಬ್ಬರ ಬಾಳಿಗೆ ಸದಾಸ್ಫೂರ್ತಿ ನೀಡುವ ದಾರಿ ತೋರುವ ಮಾರ್ಗದರ್ಶನ ಗ್ರಂಥ. ರಾಜ್ಯಶಾಸ್ತ್ರ, ಜೀವನ ಚರಿತ್ರೆ ಮಕ್ಕಳ ಸಾಹಿತ್ಯ, ನಾಟಕ, ಪ್ರಬಂಧ, ಮೊದಲಾದ ವಿಷಯಗಳಲ್ಲಿ ಅಪೂರ್ವ ಗ್ರಂಥಗಳನ್ನು ರಚಿಸಿರುವ ಡಿವಿಜಿ ಅವರು ನಾಡಿನ ನಂದಾದೀಪ; ಮರೆಯಲಾಗದ ಸಾಹಿತ್ಯ ನಿಧಿ; ನೆನೆದವರಿಗೆಲ್ಲಾ ಜೀವನ ಸ್ಫೂರ್ತಿಯ ಕಾರಂಜಿ.

ಪ್ರೊ. ಜಿ. ಅಶ್ವತ್ಥನಾರಾಯಣ ನಿವೃತ್ತ ಕನ್ನಡ ಅಧ್ಯಾಪಕರು ಬೆಂಗಳೂರಿನಲ್ಲಿ 60ವರ್ಷಗಳಿಂದ ಕನ್ನಡ ಸೇವೆಯಲ್ಲಿ ನಿರತರಾದವರು ವಾಗ್ಮಿ, ಲೇಖಕ, ಸಾಹಿತ್ಯ ಪರಿಚಾರಕ, ಕನ್ನಡ ಕಾರ್ಯಕರ್ತ ಅನುವಾದಕರು, ಚಿಕ್ಕಮಕ್ಕಳಿಂದ ಹಿಡಿದು ಪ್ರೌಢರವರೆಗೆ ಎಲ್ಲರಿಗೂ ಅನುವಾದಕರು ಕನ್ನಡ ಕಲಿಸಿದವರು. ಕೆ.ಎ.ಎಸ್., ಐ.ಎ.ಎಸ್ ಪರೀಕ್ಷಾರ್ಥಿಗಳಿಗೆ, ಅಮೆರಿಕೆಯಲ್ಲಿ ಕನ್ನಡ ಮಕ್ಕಳಿಗೆ, ಕನ್ನಡ ಹೇಳಿಕೊಟ್ಟಿದ್ದಾರೆ. ಸುಲಭ ಕನ್ನಡ ಲಿಪಿ, ಕನ್ನಡ ಕಲಿಕೆ ಗ್ರಂಥ ರಚಿಸಿದ್ದಾರೆ ನೂರಾರು ಸರ್ಕಾರಿ ಸಿಬ್ಬಂದಿ-ಅಧಿಕಾರಿಗಳಿಗೆ ಆಡಳಿತ ಕನ್ನಡ ಶಿಬಿರಗಳನ್ನು ನಡೆಸಿದ್ದಾರೆ. ಕನ್ನಡ ಚಳವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬರಾದ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಪರಿಷತ್ತು -100, ಮಹಲಿಂಗನ ಅನುಭವಾಮೃತ ಪ್ರಾದೇಶಿಕ ಶಬ್ಧಕೋಶ ಸಮಗ್ರ ವಿಜಯದಾಸರ ಕೀರ್ತನೆಗಳು, ಸೌಂದರ್ಯ ಲಹರಿ ಭಗವದ್ಗೀತಾ ಶಬ್ಧಕೋಶ, ಕಟ್ಟಿಗರ ಕಾವ್ಯದ ಟೀಕೆ, ಸೋಮೇಶ್ವರ ಶತಕದ ವ್ಯಾಖ್ಯಾನ ಮುಂತಾದ 30ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಅರ್ಧಶತಮಾನದಿಂದ ಕಗ್ಗೋಪನ್ಯಾಸಗಳನ್ನು ನೀಡುತ್ತಿರುವ ಇವರು. ಇದೀಗ ವಿದ್ಯಾರ್ಥಿಗಳಿಗಾಗಿಯೇ ಕಗ್ಗದ ಪದ್ಯಗಳನ್ನು ಸಂಗ್ರಹಿಸಿ ಅನುವಾದಿಸಿ ನೀಡಿದ್ದಾರೆ.

ಬೆಲೆ - 150/-

ಪ್ರಕಾಶಕರು
ಓಂಕಾರ್ ಪ್ರಕಾಶನ
ಆರ್.ಆರ್.ನಗರ, ಬೆಂಗಳೂರು